

GOVERNMENT OF KARNATAKA
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಗಾಂಧಿ ಭಾರತ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಗಾಂಧಿ ಭಾರತ
ಮರುನಿರ್ಮಾಣ
1924-2024 ಬೆಳಗಾವಿ, ಕರ್ನಾಟಕ
ನುಡಿದಂತೆ ನಡೆದಿದ್ದೇವೆ...
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ
10 kg
ಗೃಹ ಜ್ಯೋತಿ
ಪ್ರತಿ ಮನೆಗೆ
200
ಗೃಹಲಕ್ಷ್ಮಿ
₹2000
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000
₹1500



ಮಹಾತ್ಮಾ ಗಾಂಧೀಜಿ ಅವರು ಬೆಳಗಾವಿ ಕಾಂಗ್ರೆಸ್
ಅಧಿವೇಶನದಲ್ಲಿ ಸ್ವಯಂಸೇವಕರನ್ನು ಉದ್ದೇಶಿಸಿ
ಮಾತನಾಡುತ್ತಿರುವುದು, 1924



ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ 1924ರಲ್ಲಿ ಜರುಗಿದ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಸಂದರ್ಭದಲ್ಲಿ ಹೊರತರಲಾದ ಗಾಂಧೀಜಿ ಅವರ ಅಧ್ಯಕ್ಷೀಯ ಭಾಷಣ ಹಾಗೂ ನಿರ್ಣಯಗಳಿಂದ ಕೂಡಿದ ಪುಸ್ತಕ

ಗಾಂಧಿ ಭಾರತ ಮರುನಿರ್ಮಾಣ

RECLAIMING GANDHI BHARAT

ಮುದ್ರಣ: ಡಿಸೆಂಬರ್ 2024 | ಪುಟಗಳು: 62+4 | ಪ್ರತಿಗಳು: 2000

ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ಬೆಂಗಳೂರು–01

ದೂ: 080 2202 8001/02

ಇಮೇಲ್: dipr.karnataka.gov.in

ಆಕರ ಗ್ರಂಥಗಳು:

- ಸರ್ವೆಂಟ್ಸ್ ಆಫ್ ನಾಲೆಡ್ಜ್‌ನಿಂದ ಡಿಜಿಟಲೀಕರಣಗೊಂಡ ಮಹಾತ್ಮ ಗಾಂಧಿಯವರ ಸಂಕಲಿತ ಕೃತಿಗಳು.
- ಬೆಳಗಾವಿಯಲ್ಲಿ ನಡೆದ 39ನೇ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ–1924;
  ಅಧಿವೇಶನದ ಅಧ್ಯಕ್ಷರು–ಮೋಹನದಾಸ್ ಕರಮಚಂದ್ ಗಾಂಧಿ;
  ಪ್ರಕಟಣೆ: ಜಿಲ್ಲಾಡಳಿತ, ಬೆಳಗಾವಿ,
  ಸಂಕಲನ: ಆರ್.ಎಚ್. ಕುಲಕರ್ಣಿ.

ಚಿತ್ರ ಕೃಪೆ: ಜಿಲ್ಲಾಡಳಿತ ಬೆಳಗಾವಿ ಜಿಲ್ಲೆ

ಗಾಂಧಿ ಭಾರತ ಮರುನಿರ್ಮಾಣ

1. ಮುಖ್ಯಮಂತ್ರಿ ಸಂದೇಶ 4
2. ಉಪಮುಖ್ಯಮಂತ್ರಿ ಸಂದೇಶ 5
3. ಬೆಳಗಾವಿ ಕಾಂಗ್ರೆಸ್ ಅಧಿವೇಶನ (ಮುನ್ನುಡಿ) 6
4. ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷರ ಆರಂಭಿಕ ನುಡಿ 11–38
5. ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷೀಯ ಭಾಷಣ (ಲಿಖಿತ ರೂಪ)
6. ನಿರ್ಣಯಗಳು 41–51
   - ಸಂತಾಪ ಸೂಚನೆ
   - ಕೋಲ್ಕತ್ತಾ ಒಪ್ಪಂದ ಮತ್ತು ನೇಯ್ಗೆಯ ಮತಾಧಿಕಾರ
   - ಸರೋಜಿನಿ ನಾಯ್ಡು ಅವರ ಸೇವೆಗೆ ಸಂಬಂಧಿಸಿದ ನಿರ್ಣಯ
   - ಬರ್ಮಾದ ಜನರಿಗೆ ಸಹಾನುಭೂತಿ
   - ಕೋಹತ್ ಮತ್ತು ಗುಲ್ಬರ್ಗಾ ಗಲಭೆಗಳು
   - ಅಸ್ಪೃಶ್ಯತೆ
   - ವಿದೇಶಗಳಲ್ಲಿರುವ ಭಾರತೀಯರು
   - ಅಕಾಲಿಗಳಿಗೆ ಅಭಿನಂದನೆ
   - ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳು
   - ವೇತನ ಸಹಿತ ರಾಷ್ಟ್ರೀಯ ಸೇವೆ
   - ಸಂವಿಧಾನದಲ್ಲಿ ಬದಲಾವಣೆ
   - ಮದ್ಯ ಮತ್ತು ಅಫೀಮು ವ್ಯಾಪಾರ
   - ಪದಾಧಿಕಾರಿಗಳ ಆಯ್ಕೆ
   - ಮುಂದಿನ ಅಧಿವೇಶನ
   - ಲೆಕ್ಕ ಪರಿಶೋಧಕರು
7. ಸಮಾರೋಪ ಭಾಷಣ 55–59



"ಕರ್ನಾಟಕ ಸರ್ಕಾರದ **ಐದು ಗ್ಯಾರಂಟಿ** ಯೋಜನೆಗಳು '**ಗಾಂಧಿ ಭಾರತ**'ದ ಕನಸನ್ನು ನನಸಾಗಿಸುವ ಗುರಿಯೆಡೆ ಪ್ರಾಮಾಣಿಕ ಹೆಜ್ಜೆಗಳಾಗಿವೆ"

ಬೆಳಗಾವಿಯಲ್ಲಿ ಮಹಾತ್ಮಾ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ 1924 ರಲ್ಲಿ ನಡೆದ ಐತಿಹಾಸಿಕ ಕಾಂಗ್ರೆಸ್ ಅಧಿವೇಶನಕ್ಕೆ 100 ವರ್ಷಗಳು ಸಂದಿವೆ. ಸ್ವಾತಂತ್ರ್ಯ ಸಂಗ್ರಾಮ ಪ್ರಮುಖ ಕಾಲಘಟ್ಟದಲ್ಲಿ ನಡೆದ ಈ ಐತಿಹಾಸಿಕ ಕಾಂಗ್ರೆಸ್ ಅಧಿವೇಶನ ಸ್ವಾತಂತ್ರ್ಯ ಹೋರಾಟಕ್ಕೆ ಸ್ಪಷ್ಟ ದಿಕ್ಸೂಚಿ ಒದಗಿಸಿತ್ತು. ಈ ಮಹಾಧಿವೇಶನಕ್ಕೆ ನೂರು ವರ್ಷಗಳು ತುಂಬಿದ ಸವಿನೆನಪಿನಲ್ಲಿ ಶತಮಾನೋತ್ಸವ ಆಚರಣೆಗೆ ಬೆಳಗಾವಿಯಲ್ಲಿ ಚಾಲನೆ ನೀಡುತ್ತಿರುವುದು ಅತ್ಯಂತ ಹೆಮ್ಮೆಯ ಹಾಗೂ ಸಂತೋಷದ ವಿಷಯ.

ಬೆಳಗಾವಿ ಅಧಿವೇಶನವನ್ನು ಕರ್ನಾಟಕದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಿಸಬೇಕು. ಏಕೆಂದರೆ ಕರ್ನಾಟಕ ಏಕೀಕರಣವಾಗಬೇಕೆಂಬ ಜನರ ಬೇಡಿಕೆ ಸಹಜವಾದುದು ಮತ್ತು ನ್ಯಾಯಯುತವಾದದ್ದು ಎಂಬುದು ದೇಶದ ನಾನಾ ಭಾಗಗಳಿಂದ ಬಂದ ಪ್ರತಿನಿಧಿಗಳಿಗೆ ಅರಿವಾಗಲು ಈ ಅಧಿವೇಶನ ಬಹಳ ಮಟ್ಟಿಗೆ ಕಾರಣವಾಯಿತು ಮತ್ತು ಕರ್ನಾಟಕ ಏಕೀಕರಣಕ್ಕೆ ಹೊಸ ಚೈತನ್ಯ ದೊರೆಯಿತು

ಸ್ವಾತಂತ್ರ್ಯ ಸಂಗ್ರಾಮದ ವೇಳೆ ರಾಷ್ಟ್ರದೆಲ್ಲೆಡೆಯ ಜನರನ್ನು ಒಗ್ಗೂಡಿಸುವ, ಸಾಮಾಜಿಕ ಸೌಹಾರ್ದತೆಯನ್ನು ಎತ್ತಿ ಹಿಡಿದು ಅವರನ್ನೆಲ್ಲ ಚಳವಳಿಯಲ್ಲಿ ಭಾಗವಹಿಸುವಂತೆ ಹುರಿದುಂಬಿಸಿ ಸ್ವಾತಂತ್ರ್ಯ ಹೋರಾಟವನ್ನು ಮತ್ತಷ್ಟು ಗಟ್ಟಿಗೊಳಿಸುವ ಸಂಕಲ್ಪ ಅಧಿವೇಶನದಾಗಿತ್ತು.

ಗಾಂಧೀಜಿಯವರು ಅಂದು ಬೋಧಿಸಿದ ಹಿಂದೂ-ಮುಸ್ಲಿಂ ಸೌಹಾರ್ದತೆ, ಖಾದಿ ಬಳಕೆಯನ್ನು ವ್ಯಾಪಕಗೊಳಿಸುವುದು, ಅಸ್ಪೃಶ್ಯತೆ ನಿವಾರಣೆ, ಸಾಮಾಜಿಕ ನ್ಯಾಯ ಹಾಗೂ ಸ್ವಾವಲಂಬನೆಯ ಪಾಠಗಳು ಇಂದಿಗೂ ಪ್ರಸ್ತುತವಾಗಿವೆ.

ಐತಿಹಾಸಿಕ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಆಚರಣೆಯು ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಪ್ರಾಣಾರ್ಪಣೆ, ಬಲಿದಾನಗಳನ್ನು ಮಾಡಿದ ಪ್ರತಿಯೊಬ್ಬರನ್ನೂ ನೆನೆಪಿಸಿಕೊಳ್ಳುವ ಮತ್ತು ಅದರ ಹಿಂದಿರುವ ತ್ಯಾಗ, ಪರಿಶ್ರಮಗಳನ್ನು ಅರಿಯಲು ಅವಕಾಶ ಕಲ್ಪಿಸಿದೆ. ಗಾಂಧೀಜಿಯವರು ಬೋಧಿಸಿದ ಸಮಾನತೆ, ಏಕತೆ, ಸೌಹಾರ್ದತೆ ಹಾಗೂ ಸ್ವಾವಲಂಬನೆಯ ಆದರ್ಶಗಳನ್ನು ಮೈಗೂಡಿಸಿಕೊಳ್ಳಲು ಶತಮಾನೋತ್ಸವ ಕಾರ್ಯಕ್ರಮಗಳು ಪ್ರೇರಣೆಯಾಗಲಿ.

ಇಂದು ಬಿಡುಗಡೆಗೊಳ್ಳುತ್ತಿರುವ ಈ **'ಗಾಂಧಿ ಭಾರತ ಮರುನಿರ್ಮಾಣ'** ಪುಸ್ತಕದಲ್ಲಿ ಮಹಾತ್ಮಾಗಾಂಧೀಜಿಯವರು ಬೆಳಗಾವಿ ಅಧಿವೇಶನದಲ್ಲಿ ಮಾಡಿದ ಅಧ್ಯಕ್ಷೀಯ ಭಾಷಣ, ಅಧಿವೇಶನದಲ್ಲಿ ತೆಗೆದುಕೊಂಡ ಐತಿಹಾಸಿಕ ನಿರ್ಣಯಗಳು, ಸಮಾರೋಪ ಭಾಷಣ ಹಾಗೂ ಅಪರೂಪದ ಛಾಯಾಚಿತ್ರಗಳು ಅಡಕಗೊಂಡಿವೆ.

ಕಾಂಗ್ರೆಸ್ ಮಹಾಧಿವೇಶನದ ಶತಮಾನೋತ್ಸವ ಕಾರ್ಯಕ್ರಮಗಳಿಗೆ ಶುಭ ಹಾರೈಸುತ್ತಾ, ಗಾಂಧೀಜಿಯವರ ಉದಾತ್ತ ಮೌಲ್ಯಗಳನ್ನು ಮೈಗೂಡಿಸಿಕೊಂಡು ಪ್ರಜಾಪ್ರಭುತ್ವವನ್ನು ಇನ್ನಷ್ಟು ಬಲಪಡಿಸಲು ನಾವೆಲ್ಲರೂ ಬದ್ಧರಾಗೋಣ ಮತ್ತು ಕೈಜೋಡಿಸೋಣ ಎಂದು ಆಹ್ವಾನ ನೀಡುತ್ತೇನೆ.

ಸಿದ್ದರಾಮಯ್ಯ
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ



"ರಾಷ್ಟ್ರದ ಐಕ್ಯತೆಯನ್ನು ಒಡೆಯುವ ನಿರಂಕುಶ ಶಕ್ತಿಗಳ ಹಿಡಿತದಿಂದ **'ಗಾಂಧಿ ಭಾರತ'**ವನ್ನು ಬಿಡುಗಡೆಗೊಳಿಸುವ ಅಗತ್ಯವಿದೆ"...

ನವ ಭಾರತ ನಿರ್ಮಾಣದಲ್ಲಿ ಮಹಾತ್ಮಾ ಗಾಂಧಿ ಅವರ ಕೊಡುಗೆ ಹಾಗೂ ಪ್ರಭಾವ ಪ್ರಶ್ನಾತೀತವಾದದ್ದು. ಅವರು ಭರವಸೆಯ ದಾರಿದೀಪ ಹಾಗೂ ಸತ್ಯದ ಪ್ರತಿಪಾದಕರಾಗಿದ್ದು, ಅವರ ತತ್ವಗಳು 21ನೇ ಶತಮಾನಕ್ಕೆ ಹೆಚ್ಚು ಪ್ರಸ್ತುತವಾಗಿವೆ. ದುರಾದೃಷ್ಟಕರ ವಿಚಾರವೆಂದರೆ ಇತ್ತೀಚಿನ ದಿನಗಳಲ್ಲಿ ಅವರ ತತ್ವ ಹಾಗೂ ಮಾರ್ಗದರ್ಶನಗಳು ಅಪಾಯಕ್ಕೆ ಸಿಲುಕುತ್ತಿದ್ದು, ಇವುಗಳನ್ನು ಜನರ ಮನಸ್ಸಿನಿಂದ ಅಳಿಸುವ ಪ್ರಯತ್ನ ನಡೆಯುತ್ತಿವೆ.

ದುಷ್ಟಶಕ್ತಿಗಳು ನಮ್ಮ ದೇಶದ ಅಂತರಾಳವಾಗಿರುವ ಸಾಮಾಜಿಕ ಸಾಮರಸ್ಯ ನಾಶ ಮಾಡುತ್ತಿವೆ. ಶ್ರೀಮಂತ ಉದ್ಯಮಿಗಳಿಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದ್ದು ದೇಶದಲ್ಲಿ ಆದಾಯ ಅಸಮಾನತೆ ಹೆಚ್ಚಾಗುತ್ತಿದೆ. ಇದರಿಂದಾಗಿ ಹೆಚ್ಚು ಜನರನ್ನು ಬಡತನಕ್ಕೆ ನೂಕಲಾಗುತ್ತಿದೆ. ದೇಶದ ಜನರಲ್ಲಿ ಅದರಲ್ಲೂ ಮಹಿಳೆಯರ ಮೇಲೆ ಅನ್ಯಾಯ ಹಾಗೂ ಅಸಮಾನತೆ ಹೆಚ್ಚುತ್ತಿವೆ.

ಗಾಂಧೀಜಿ ಅವರ 'ಸರ್ವಧರ್ಮ ಸಮಭಾವ' ತತ್ವವು ನಮ್ಮೆಲ್ಲರಿಗೂ ಮಾರ್ಗದರ್ಶಿಯಾಗಿದೆ. ಸರಳತೆಯ ಜೀವನಕ್ಕೆ ಅವರ ಬದ್ಧತೆ, ಕೋಮು ಸೌಹಾರ್ದಕ್ಕಾಗಿ ಅವರ ಪರಿಶ್ರಮ, ಗ್ರಾಮಗಳ ಬಗ್ಗೆ ಅವರಿಗಿದ್ದ ವಿಶೇಷ ಕಾಳಜಿ, ಸರ್ವೋದಯ ಪರಿಕಲ್ಪನೆ, ಸ್ವಾವಲಂಬನೆ ಹಾಗೂ ಎಲ್ಲರನ್ನು ಒಳಗೊಂಡ ಭಾರತದ ಬಗ್ಗೆ ಅವರಿಗಿದ್ದ ಪರಿಕಲ್ಪನೆ ನಮಗೆ ಪಾಠವಾಗಿವೆ. ಗಾಂಧಿ ಅವರು ನಮ್ಮ ದೇಶದಲ್ಲಿ ಪೂಜನೀಯ. ಅವರ ತತ್ವಗಳನ್ನು ನಾವು ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳುವುದೇ ನಾವು ಅವರಿಗೆ ನೀಡುವ ಅತ್ಯಂತ ದೊಡ್ಡ ಗೌರವವಾಗಿದೆ ಎಂದು ನಾನು ಭಾವಿಸಿದ್ದೇನೆ. ಕಾಂಗ್ರೆಸ್ ಪಕ್ಷ ಹಾಗೂ ಸರ್ಕಾರ ಮಹಾತ್ಮಾ ಗಾಂಧಿ ಅವರ ಕನಸು ನನಸಾಗಿಸಲು ಶ್ರಮವಹಿಸುತ್ತಿದೆ. ಬಡವರ, ಮಹಿಳೆಯರ, ಶೋಷಿತರ ಸಬಲೀಕರಣಕ್ಕೆ ಒತ್ತು ನೀಡಿದ ಗಾಂಧೀಜಿ ಅವರಿಗೆ ನಮ್ಮ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಗೌರವ ಸಲ್ಲಿಸಲಾಗಿದೆ.

ಇದೇ ತಿಂಗಳು 26 ಹಾಗೂ 27ರಂದು ಮಹಾತ್ಮಾಗಾಂಧಿ ಅವರು ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ನೇತೃತ್ವವಹಿಸಿ 100 ವರ್ಷಗಳು ತುಂಬಿವೆ. ಶತಮಾನೋತ್ಸವದ ಈ ಐತಿಹಾಸಿಕ ಕ್ಷಣವನ್ನು ನಾವು ವಿಜೃಂಭಣೆಯಿಂದ ಆಚರಣೆ ಮಾಡುತ್ತಿದ್ದೇವೆ ಈ ಸಂದರ್ಭದಲ್ಲಿ ರಾಷ್ಟ್ರಪಿತ ಮಹಾತ್ಮಾಗಾಂಧಿ ಅವರಿಗೆ ಈ 'ಗಾಂಧಿ ಭಾರತ' ಪುಸ್ತಕದ ಮೂಲಕ ನಮನ ಸಲ್ಲಿಸಲಾಗುತ್ತಿದೆ. ಈ ಮೂಲಕ ನಮ್ಮ ದೇಶ ಹಾಗೂ ಜನರ ಕಲ್ಯಾಣಕ್ಕೆ ನಮ್ಮ ಬದ್ಧತೆಯನ್ನು ಮತ್ತೆ ಸಾಬೀತುಪಡಿಸಲಾಗುತ್ತಿದೆ. ಈ ಕೃತಿಯ ಲೇಖಕರು, ಸಂಶೋಧಕರು ಹಾಗೂ ಈ ಕೃತಿಗಾಗಿ ಶ್ರಮಿಸಿರುವ ಪ್ರತಿಯೊಬ್ಬರಿಗೂ ಹೃತ್ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ. ಆ ಕೃತಿಯು ಗಾಂಧೀಜಿ ಅವರ ಮೌಲ್ಯಗಳನ್ನು ಪ್ರತಿಪಾದಿಸಿ, ಓದುಗರು ತಮ್ಮ ಜೀವನದಲ್ಲಿ ಅವರ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲು ಪ್ರೇರಣೆಯಾಗಲಿ ಎಂದು ಹಾರೈಸುತ್ತೇನೆ.

ಡಿ.ಕೆ.ಶಿವಕುಮಾರ್
ಉಪ ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

ಮುನ್ನುಡಿ

ಇಂದಿಗೆ ಸರಿಯಾಗಿ ನೂರು ವರ್ಷಗಳ ಹಿಂದೆ ಅಂದರೆ 1924ರ ಡಿಸೆಂಬರ್ 26 ಮತ್ತು 27ರಂದು ಮಹಾತ್ಮಾ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಸಮಾವೇಶಕ್ಕೆ ಬೆಳಗಾವಿ ಸಾಕ್ಷಿಯಾಗಿತ್ತು. ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಇದೀಗ ಶತಮಾನೋತ್ಸವದ ಸಂಭ್ರಮ.

ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿಯೇ ವಿಶೇಷವಾದ ಅಧಿವೇಶನ ಎಂಬ ಹೆಗ್ಗಳಿಕೆಗೂ ಈ ಬೆಳಗಾವಿ ಅಧಿವೇಶನ ಪಾತ್ರವಾಗಿದೆ. ಇದಕ್ಕೆ ಕಾರಣ ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದ ಏಕೈಕ ಅಧಿವೇಶನ ಇದು. ಅಲ್ಲದೆ ನಮ್ಮ ರಾಜ್ಯದಲ್ಲಿ ನಡೆದ ಏಕೈಕ ಸ್ವಾತಂತ್ರ್ಯ ಪೂರ್ವ ಕಾಂಗ್ರೆಸ್ ಅಧಿವೇಶನ ಕೂಡ ಹೌದು.

ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಭಾರತದ ಸ್ವಾತಂತ್ರ್ಯ ಹೋರಾಟದ ರೂಪುರೇಷೆಯಲ್ಲಿ ನಿರ್ಣಾಯಕವಾಗಿತ್ತು. ಸ್ವಾತಂತ್ರ್ಯದ ಸುದೀರ್ಘ ಪಯಣದಲ್ಲಿ ಬೆಳಗಾವಿ ಅಧಿವೇಶನದಲ್ಲಿ ಹೊರಹೊಮ್ಮಿದ ಆದರ್ಶಗಳ ಪ್ರಭಾವ ನಿಚ್ಚಳ. ಈ ಸಮಾವೇಶದಲ್ಲಿ ಗಾಂಧೀಜಿ ಅವರು ಪ್ರತಿಪಾದಿಸಿದ ಅಹಿಂಸೆ, ಏಕತೆ, ಸ್ವದೇಶಿ ಮತ್ತು ಸ್ವಾವಲಂಬನೆಯ ಮಂತ್ರ, ಆದರ್ಶಗಳು ಸ್ವಾತಂತ್ರ್ಯ ಹೋರಾಟಕ್ಕೆ ದಿಕ್ಕು ತೋರಿದವು.

ಬೆಳಗಾವಿ ಅಧಿವೇಶನ ದೇಶದಲ್ಲಿ ರಾಜಕೀಯ ಮತ್ತು ಸಾಮಾಜಿಕ ಸವಾಲುಗಳನ್ನು ಎದುರಿಸುತ್ತಿದ್ದ ಕಾಲಘಟ್ಟದಲ್ಲಿ ಆಯೋಜಿತವಾಗಿತ್ತು. ಅದು ಕಾಂಗ್ರೆಸ್ ಒಳಗೆ ತೀವ್ರಗೊಂಡ ಭಿನ್ನಮತ, ದೇಶಾದ್ಯಂತ ಸಮುದಾಯಗಳ ನಡುವೆ ತಲೆದೋರಿದ್ದ ಉದ್ವಿಗ್ನತೆ ಕಾಲವಾಗಿತ್ತು.

ಭಾರತ ಸಂವಿಧಾನದ ಮೂಲ ತತ್ವಗಳಾದ ಸಮಾನತೆ, ಸಮಾನ ಅವಕಾಶ ಹಾಗೂ ತಾರತಮ್ಯಕ್ಕೆ ವಿರೋಧಗಳು ಹುಟ್ಟಿಕೊಂಡಿದ್ದು ಬೆಳಗಾವಿ ಸಮಾವೇಶದಲ್ಲಿ. ಗಾಂಧೀಜಿ ಅವರು ಈ ಸಮಾವೇಶದಲ್ಲಿ ಸಮಾನತೆ –ಸರ್ವೋದಯ, ಜಾತ್ಯಾತೀತ ಗಣರಾಜ್ಯದ ಕನಸಿನ ಬೀಜ ಬಿತ್ತಿದರು. ಮುಂದೆ ಇದು ಸ್ವಾತಂತ್ರ್ಯ ಸಂಗ್ರಾಮದ ಹಾದಿಯಲ್ಲಿ ಟಿಸಿಲೊಡೆದು, ಗಿಡವಾಗಿ ಇಂದು ಮರವಾಗಿ ಸಮೃದ್ಧವಾಗಿ ಬೆಳೆದು ನಿಂತಿದೆ.

ಬೆಳಗಾವಿಯಲ್ಲಿ ಗಾಂಧೀಜಿ ಮಾತನಾಡುವಾಗ ಅಸ್ಪೃಶ್ಯತೆಯನ್ನು ಬಲು ಜೋರಾಗಿ ವಿರೋಧಿಸಿದರು. "ಅನೇಕ ಕಡೆಗಳಲ್ಲಿ ಹರಿಜನ – ಶೂದ್ರ ಸಮುದಾಯಗಳ ಮೇಲೆ ಹಲ್ಲೆಗಳು ನಡೆದಿವೆ. ಅವರಿಗೆ ಸಮಾನ ಅವಕಾಶಗಳು ಇಲ್ಲ. ಈ ರೀತಿಯ ಅಸಮಾನತೆ ಯನ್ನು ನಮ್ಮ ಹೊಟ್ಟೆಯಲ್ಲಿ ಇಟ್ಟುಕೊಂಡರೆ ಬ್ರಿಟಿಷರು ನಮ್ಮನ್ನು ಬಿಟ್ಟು ಹೋಗುವುದೇ ಇಲ್ಲ. ಅಣ್ಣ – ತಮ್ಮಂದಿರ ಹಾಗೆ ಇರಬೇಕಾದ ನಮ್ಮನ್ನು ನಮ್ಮೊಳಗೆ ಹೊಡೆದಾಡಲು ಹಚ್ಚಿ ದೂರ ನಿಲ್ಲುತ್ತಾರೆ. ಇದು ಕೊನೆಯಾಗಬೇಕು. ಅದಕ್ಕೆ ನಾವೆಲ್ಲ ಪಣ ತೊಡಬೇಕು" ಎಂದರು.

ಈ ಸಾಮಾಜಿಕ ಅನಿಷ್ಟ ಪದ್ಧತಿ ಯನ್ನು ಹೋಗಲಾಡಿಸದೆ ನಮಗೆ ಬೇರೆ ದಾರಿ ಇಲ್ಲ. ಇದೇ ರೀತಿಯ ಸಾಮಾಜಿಕ ಸ್ಥಿತಿ ಇಟ್ಟುಕೊಂಡು ನಾವು ರಾಜಕೀಯ ಸ್ವಾತಂತ್ರ್ಯ ಪಡೆದರೆ ಏನು ಪ್ರಯೋಜನ? ಮುಟ್ಟು-ತಟ್ಟು, ಹಾಗೂ ಅಸಮಾನತೆಗಳು ಭಾರತ ಎಂಬ ಹೆಮ್ಮರಕ್ಕೆ ಹತ್ತಿದ ಗೆದ್ದಲು ಹುಳುಗಳು. ಅವನ್ನು ನಿವಾರಿಸಲೇಬೇಕು ಎಂದು ಹೇಳಿದರು.

ಬ್ರಿಟೀಷರ ದಬ್ಬಾಳಿಕೆಯ ವಿರುದ್ಧ ಚರಕದ ಮೂಲಕ ಹೋರಾಟ ಆರಂಭಿಸಿದ್ದ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರಿಗೆ, ಚರಕದ ಮಹತ್ವವನ್ನು ಮಹಾತ್ಮಾ ಗಾಂಧೀಜಿ ಮನಮುಟ್ಟುವಂತೆ ತಿಳಿ ಹೇಳಿದ್ದು ಇದೇ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ. ಮುಂದೆ ಖಾದಿ ಪ್ರಚಾರ ಚುರುಕು ಪಡೆದು, ಇಡೀ ದೇಶ ಖಾದಿಮಯವಾಗಿತ್ತು. ವಿದೇಶಿ ವಸ್ತ್ರ ದಹನ ಸಾಮನ್ಯ ಎಂಬಂತಾಗಿತ್ತು.




ಮಹಾತ್ಮಾ ಗಾಂಧೀಜಿ ಅವರು ಬೆಳಗಾವಿ ಅಧಿವೇಶನದಲ್ಲಿ ಮಾತನಾಡುತ್ತಿರುವುದು, ಡಿಸೆಂಬರ್ 1924

ಗಾಂಧೀಜಿಯವರ ಮೌಲ್ಯಗಳು ಹಾಗೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗಿ ತ್ಯಾಗ ಬಲಿದಾನಗಳನ್ನು ಮಾಡಿದ ನಾಯಕರ ಬಗ್ಗೆ ಇಂದಿನ ಪೀಳಿಗೆಗೆ ಪರಿಚಯಿಸುವ ಮತ್ತು ಆದರ್ಶಗಳ ಸಾರ್ವಕಾಲಿಕ ಪ್ರಸ್ತುತತೆಯನ್ನು ನೆನಪಿಸುವ ಉದ್ದೇಶದಿಂದ ಬೆಳಗಾವಿ ಅಧಿವೇಶನದ ಶತಮಾನೋತ್ಸವವನ್ನು ಸ್ಮರಣೀಯವಾಗಿ ಆಚರಿಸಲು ಉದ್ದೇಶಿಸಲಾಗಿದೆ. ಬೆಳಗಾವಿ ಅಧಿವೇಶನದಲ್ಲಿ ಗಾಂಧೀಜಿ ಅವರು ಪ್ರತಿಪಾದಿಸಿದ ಮೌಲ್ಯಗಳನ್ನು ಉತ್ತೇಜಿಸುವ ಹಾಗೂ ತತ್ವಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಅವಕಾಶವನ್ನು ಶತಮಾನೋತ್ಸವ ಒದಗಿಸಿದೆ.

'ಗಾಂಧಿ ಭಾರತ' ಹೆಸರಿನಲ್ಲಿ ಗಾಂಧಿ ವಿಚಾರಧಾರೆಯನ್ನು ಮತ್ತು ಬೆಳಗಾವಿ ಅಧಿವೇಶನದಲ್ಲಿ ಪ್ರಸ್ತಾವವಾದ ಸಂದೇಶಗಳನ್ನು ನಾಡಿಗೆ ಪರಿಚಯಿಸುವ ನಿಟ್ಟಿನಲ್ಲಿ ವರ್ಷವಿಡೀ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೆಳಗಾವಿ ಅಧಿವೇಶನದ ಹೆಜ್ಜೆಗಳನ್ನು ಗುರುತಿಸುವ, ಕೈಗೊಳ್ಳಲಾದ ನಿರ್ಣಯಗಳ ಹಿಂದಿನ ಆಶಯಗಳನ್ನು ಅರಿಯುವ, ಅದರ ಪ್ರೇರಣೆಗಳನ್ನು ಗುರುತಿಸುವ ಪ್ರಯತ್ನವನ್ನು ಈ ಪುಸ್ತಕದ ಮೂಲಕ ಮಾಡಲಾಗಿದೆ. ಗಾಂಧೀಜಿ ಅವರು ಪ್ರತಿಪಾದಿಸಿದ ಶಾಶ್ವತ ಮೌಲ್ಯಗಳನ್ನು ಪರಿಚಯಿಸುವ ಕಾರ್ಯವನ್ನು ಮಾಡಲಾಗಿದೆ. ಬೆಳಗಾವಿ ಅಧಿವೇಶನ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ನೀಡಿದ ಮಹತ್ವದ ಪಾತ್ರವನ್ನು ಸ್ಮರಿಸಲು ಹಾಗೂ ಅದರ ಸಂದೇಶಗಳನ್ನು ನೆನಪಿಸಲು ಈ ಪುಸ್ತಕ ನೆರವಾಗುವ ಆಶಯ ನಮ್ಮದು.





ಬೆಳಗಾವಿಯ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮಾ ಗಾಂಧೀಜಿ,
ಡಿಸೆಂಬರ್ 1924



ಗಾಂಧಿ ಭಾರತ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಗಾಂಧೀಜಿ ಕನಸು
ಕರ್ನಾಟಕದಲ್ಲಿ ನನಸು
ಶಕ್ತಿ
ಮಹಿಳೆಯರಿಗೆ
ಬಸ್ ಪ್ರಯಾಣ ಉಚಿತ
ಮಹಿಳೆಯರ ಸಬಲೀಕರಣಕ್ಕೆ
ಮಾದರಿ ಯೋಜನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಫಲಾನುಭವಿಗಳ ಸಂಖ್ಯೆ: 359 ಕೋಟಿ
ಒಟ್ಟು ವೆಚ್ಚ: ರೂ.8,688 ಕೋಟಿ
ನುಡಿದಂತೆ
ನಡೆದಿದ್ದೇವೆ...
ಗೃಹ ಜ್ಯೋತಿ
ಪ್ರತಿ ಮನೆಗೆ
200
ಅನ್ನಭಾಗ್ಯ
10 kg
ಗೃಹಲಕ್ಷ್ಮಿ
₹2000
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000
₹1500



ದಕ್ಷಿಣ ಆಫ್ರಿಕಾದಲ್ಲಿನ ಸತ್ಯಾಗ್ರಹ ಚಳವಳಿಯ
ಸಂದರ್ಭದಲ್ಲಿ ಮಹಾತ್ಮಾ ಗಾಂಧೀಜಿ 1913

ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷರ ಆರಂಭಿಕ ನುಡಿ

ಶ್ರೀ ಗಂಗಾಧರರಾಯರೇ, ಸೋದರ ಸೋದರಿಯರೇ,

ನನಗೆ ನೀವು ಮಾಡಿರುವ ಗೌರವಕ್ಕೆ ಚ್ಯುತಿ ಬರುವಂತಹ ದೊಡ್ಡ ಭಾಷಣ ನಾನು ಮಾಡುವುದಿಲ್ಲ; ನಾನು ಹೇಳಬೇಕಾಗಿರುವುದು ತಮಗೆ ಈಗಾಗಲೇ ಗೊತ್ತಾಗಿದೆ. ನನ್ನ ಭಾಷಣವನ್ನು ಹಿಂದಿ, ಕನ್ನಡ ಮರಾಠಿಗಳಿಗೆ ಭಾಷಾಂತರ ಮಾಡಲಾಗಿದೆ. ಇಂಗ್ಲಿಷಿಗೂ ಅನುವಾದಿಸಿ ನೀಡಿದ್ದಾರೆ. ನಿನ್ನೆ ಸಂಜೆಯ ಹೊತ್ತಿಗೇ ನಿಮಗೆಲ್ಲರಿಗೂ ಅದರ ಪ್ರತಿಗಳು ಸಿಗಬೇಕು ಎಂದು ಗಂಗಾಧರರಾಯರನ್ನು ನಾನು ಪ್ರಾರ್ಥಿಸಿದ್ದೆ. ನಿಮಗೆ ಸಿಕ್ಕಿದೆ ಎಂದೇ ಭಾವಿಸುತ್ತೇನೆ. ನೀವು ಅದನ್ನು ಚೆನ್ನಾಗಿ ಓದಿಕೊಂಡಿದ್ದೀರಿ ಎಂದು ತಿಳಿದಿದ್ದೇನೆ.

ನಾನು ಹೇಳಬೇಕಾದದ್ದು ಇಷ್ಟೇ. 1920–21ರಲ್ಲಿ ನಾವು ಏನು ಸಾಧಿಸಬೇಕು ಎಂದಿದ್ದೆವೋ ಅದನ್ನು ಸಾಧಿಸಲಾಗಲಿಲ್ಲ. ನಮ್ಮೊಳಗೆ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ವಿರಸ ತಲೆ ಎತ್ತಿಕೊಂಡಿದೆ. ಹಿಂದೂಗಳೂ, ಮುಸ್ಲಿಮರೂ ಪರಸ್ಪರ ಶತ್ರುಗಳು ಎಂದು ತಿಳಿದುಕೊಂಡು ದೈಹಿಕ ಹಿಂಸಾಚಾರದಲ್ಲಿ ತೊಡಗಿದ್ದಾರೆ. ಇದು ಸ್ವರಾಜ್ಯ ಸಾಧನೆಗೆ ದಾರಿಯಲ್ಲ ಎಂದು ಹೇಳುವ ಅಗತ್ಯವಿಲ್ಲ. ಹಿಂದೂಗಳು ನಾವು, ಅಸ್ಪೃಶ್ಯರನ್ನು ಕೀಳಾಗಿ ಕಾಣುತ್ತೇವೆ, ಅವರನ್ನು ಮುಟ್ಟಿದರೆ ಪಾಪ ಎಂದು ತಿಳಿದಿದ್ದೇವೆ. ಇದು ದೇವರೆದುರು ಮಾಡಿದ ಮಹಾಪಾಪ. ಈಗಾಗಲೇ ಮೂರ್ನಾಲ್ಕು ವರ್ಷಗಳಿಂದ ದೊಡ್ಡವರು ಚಿಕ್ಕವರು ಎಲ್ಲರೂ ಚರಕ ಬಳಸಬೇಕು ಎನ್ನುತ್ತಿದ್ದೇವೆ; ಕಾಂಗ್ರೆಸ್ಸಿನಲ್ಲಿ: ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಚರಕದ ಮೂಲಕ ಸ್ವರಾಜ್ಯ ಸಂಪಾದನೆ ಆಗಬೇಕು ಎಂದು ಹೇಳುತ್ತಿದ್ದೇವೆ.

ಈ ಚಳವಳಿಯ ಪ್ರಚಾರಕ್ಕಾಗಿ ನಾನು ಪೂನಾಕ್ಕೆ ಹೋಗಿದ್ದಾಗ, ಲೋಕಮಾನ್ಯ ತಿಲಕರು ಕೊಟ್ಟ 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಎಂಬ ಘೋಷಣೆಯ ವಾಕ್ಯಾರ್ಥವನ್ನು ಹೇಳಿ, ಅದನ್ನು ಪೂರ್ಣ ಮಾಡುವುದೇ ನನ್ನ ಬದುಕಿನ ಪರಮೋದ್ದೇಶ ಎಂದು ಹೇಳಿದೆ. ಇದು ನನ್ನ ನಂಬಿಕೆ: ನಾನು ಮತ್ತೆ ಅದನ್ನೇ ಹೇಳುತ್ತಿದ್ದೇನೆ. ನಮಗೆ ಸ್ವರಾಜ್ಯ ಬೇಕು ಎಂದರೆ ಅದಕ್ಕೆ ದಾರಿ ಚರಕ, ನೂಲು, ಖಾದಿ. ಇದು ನಮಗೆ ಗೊತ್ತಿದೆ. ಆದರೆ ಅದರಂತೆ ಮಾಡುತ್ತಿಲ್ಲ ಎಂದು ನನಗೆ ವಿಷಾದವಾಗುತ್ತಿದೆ. ನನಗೆ ಬೇರೆ ಏನೂ ಗೊತ್ತಿಲ್ಲ. ಬೇರೆ ಯೋಚಿಸುವುದೂ ಇಲ್ಲ.

ಸೋದರ ಸೋದರಿಯರೇ,

ನಿಮ್ಮ ಎದುರಿಗೆ ನಿಂತು ಭಾಷಣ ಮಾಡುವುದು ವ್ಯರ್ಥ. ಅದು ನಮ್ಮನ್ನು ಎಲ್ಲಿಗೂ ಒಯ್ಯುವುದಿಲ್ಲ. ನಿಮಗೂ ನನಗೂ ಅಮೂಲ್ಯವಾದ ಕಾಲಹರಣ ಮಾತ್ರ. ಏಕೆಂದರೆ ನಾನು ದೇವರ ಸೇವಕ ಎಂದುಕೊಂಡಿದ್ದೇನೆ. ಈ ರೀತಿ ನಮಗೆ ಸ್ವರಾಜ್ಯ ದೊರೆಯುವುದಿಲ್ಲ ಎಂದು ನಾನು ಬಲ್ಲೆ. ಬೇಗಂ ಮಹಮ್ಮದಾಲಿ ಒಂದು ಸಾರಿ ನನಗೆ ಹೇಳಿದರು: "ಕಾಂಗ್ರೆಸ್ ಅಧಿವೇಶನಕ್ಕೆ ಹೋದಾಗಲೆಲ್ಲ ಸ್ವರಾಜ್ಯ ಬಂತು ಎಂದು ಒಂದು ವಾರ ತಮಗೆ ಅನಿಸುತ್ತದೆ ಎಂದು. ಎಂದರೆ ಈ ಅಧಿವೇಶನದ ಸಂದರ್ಭದಲ್ಲಿ ನಾವು ಸ್ವರಾಜ್ಯದ ನಾಟಕ ಆಡುತ್ತೇವೆ ಎಂದಾಯಿತಲ್ಲವೇ?. ಒಬ್ಬ ವೇಷಧಾರಿ ಹರಿಶ್ಚಂದ್ರನ ಪಾತ್ರ ಮಾಡಿದಂತೆ ಆಗುತ್ತದೆ. ಹರಿಶ್ಚಂದ್ರನ ವೇಷ ಹಾಕಿದವನು ಸತ್ಯವಂತ ಹೌದೋ ಅಲ್ಲವೋ ನಮಗೆ ತಿಳಿಯದು. ಈ ಸ್ವರಾಜ್ಯೋತ್ಸವ ಒಂದು ನಾಟಕ ಆಗಿದೆ.



ಸುಭಾಷ್ ಚಂದ್ರ ಬೋಸ್ ಅವರು ಅಧಿವೇಶನಕ್ಕೆ ಆಗಮಿಸುತ್ತಿರುವುದು
(ಬೆಳಗಾವಿ 1924)



ಗಾಂಧೀಜಿ ಅಧಿವೇಶನಕ್ಕೆ ಶ್ರೀಮತಿ ಲಿಯಾಕತ್ ಅಲಿಯವರೊಂದಿಗೆ
ಹೋಗುತ್ತಿರುವುದು (ಬೆಳಗಾವಿ)

ಆದ್ದರಿಂದಲೇ ನಿಮಗೆ ನಾನು ಹೇಳುತ್ತೇನೆ. ದೇಶಬಂಧು ದಾಸರು ಒಂದು ಗೊತ್ತುವಳಿಯನ್ನು ಮಂಡಿಸುತ್ತಾರೆ. ನಿಮಗೆ ಇದು ಒಪ್ಪಿಗೆ ಇದ್ದರೆ ಒಪ್ಪಿಗೆ ಕೊಡಿ. ಇಲ್ಲದೇ ಇದ್ದರೆ ನಿರಾಕರಿಸಿ. ಅದರಲ್ಲಿ ಹಿಂದೂ ಮುಸ್ಲಿಂ ಐಕ್ಯದ ಮಾತು ಇಲ್ಲ; ಅಸ್ಪೃಶ್ಯತೆಯ ವಿಷಯವೂ ಇಲ್ಲ. ನಾವು ನೂಲಬಯಸುತ್ತೇವೆ ಎಂದಷ್ಟೇ ಅದರ ಮಾತು. ಇಲ್ಲಿ ಬಂದಿರುವ ಅಸ್ಪೃಶ್ಯರು ಕ್ರಿಶ್ಚಿಯನ್ನರು, ಇತರರು ಎಲ್ಲ ಪ್ರತಿನಿಧಿಗಳಿಗೂ ನನ್ನ ಬೇಡಿಕೆ ಇಷ್ಟೇ– ನೀವು ಯಾರನ್ನೂ ಪ್ರತಿನಿಧಿಸಲು ಬಂದಿದ್ದೀರೋ ಅವರ ಪ್ರತಿನಿಧಿಗಳು ನಿಜವಾಗಿ ಆಗಿದ್ದರೆ, ಮಹಮದಾಲಿ ಮತ್ತು ದಾಸರ ಶಪಥವನ್ನು ನೀವು ಎತ್ತಿ ಹಿಡಿಯಬಯಸಿದರೆ ದೇವರ ಸನ್ನಿಧಿಯಲ್ಲಿ ಹೇಗೆ ಮಾಡಬೇಕೋ ಹಾಗೆ ಮಾಡಿ. ಇದು ಸರಿ ಅಲ್ಲ, ಗಾಂಧಿ ನಿಮ್ಮನ್ನು ಮೋಸಗೊಳಿಸುತ್ತಿದ್ದಾನೆ ಎನಿಸಿದರೆ ಇದನ್ನು ತಿರಸ್ಕರಿಸಿಬಿಡಿ.

ಆದರೆ ನೀವು ಶಪಥ ಮಾಡಿದರೆ, ಈ ಗೊತ್ತುವಳಿಯನ್ನು ಒಪ್ಪಿಕೊಳ್ಳುವುದೇ ಒಂದು ಶಪಥ. ಆಮೇಲೆ ಅದರಂತೆ ಮಾಡದಿದ್ದರೆ ನಿಮ್ಮ ಹಣೇಬರಹ. ದೇಶಕ್ಕೆ ಗಾಂಧಿ ಹುಚ್ಚ ಎನಿಸಿದರೆ ಅವನನ್ನು ತಿರಸ್ಕರಿಸಿಬಿಡಿ. ಮತ್ತೊಮ್ಮೆ ಯೋಚಿಸಿ, ಭಾರತ ಸ್ವರಾಜ್ಯಕ್ಕೆ ಯೋಗ್ಯವೆ?

ಪ್ರತಿಜ್ಞೆಮಾಡಿ ಅದರಂತೆ ನಡೆಯದಿದ್ದರೆ ಆ ಮನುಷ್ಯನಿಗೆ ಜಗತ್ತು ಏನನ್ನುತ್ತದೆ? ಬೈಬಲ್ ಅಥವಾ ಗ್ರಂಥಸಾಹೇಬ್ ಅಥವಾ ಕುರಾನ್ ಯಾವುದನ್ನೇ ಅವನು ಓದಿದ್ದರೂ ನಿಮ್ಮ ಕಣ್ಣಿಗೆ ಕುಷ್ಠರೋಗಿ, ಅಪ್ರಯೋಜಕ, ನಕಲಿ ನಾಣ್ಯ ಎನಿಸಿದರೆ ಬಿಟ್ಟುಬಿಡಿ. ನಕಲಿನಾಣ್ಯವನ್ನು ಅಂಗಡಿಗೆ ತೆಗೆದುಕೊಂಡು ಹೋದರೆ, ಸರಕಾರ ನಿಮ್ಮನ್ನು ಹಿಡಿದುಹಾಕುತ್ತದೆ ಅಲ್ಲವೇ?

ನಿಮ್ಮನ್ನು ತಪ್ಪುದಾರಿಗೆ ಎಳೆಯುವ ಉದ್ದೇಶ ನನ್ನದಲ್ಲ. ನಿಮ್ಮ ಸಂಗಡ ಹುಡುಗಾಟಿಕೆ ಆಡುವುದಿಲ್ಲ. ನನಗೆ ತಿಳಿದದ್ದನ್ನು ನನಗೆ ಅನಿಸಿದ್ದನ್ನು ನಾನು ಹೇಳುತ್ತಿದ್ದೇನೆ; ನಮ್ಮ ಕೋಟಿ ಕೋಟಿ ಜನ ಸೋದರ ಸೋದರಿಯರು ಎಲ್ಲಿಯವರೆಗೆ ಚರಕದಲ್ಲಿ ವಿಶ್ವಾಸವಿಡುವುದಿಲ್ಲವೋ, ಚರಕದಲ್ಲಿ ನೂಲುವುದಿಲ್ಲವೋ, ಖಾದಿ ಬಟ್ಟೆಯನ್ನು ಸಿದ್ಧಪಡಿಸುವುದಿಲ್ಲವೋ ಮತ್ತು ಧರಿಸುವುದಿಲ್ಲವೋ ಅಲ್ಲಿಯವರೆಗೆ ಸ್ವರಾಜ್ಯ ಬರುವುದಿಲ್ಲವೆಂದು ನಾನು ಮನಗಂಡಿದ್ದೇನೆ. ಈ ಖಾದಿ ಕಾರ್ಯ ಆಗುವವರೆಗೆ ಭಾರತದ ಬಡತನ ನೀಗದು. ನಮ್ಮ ಕೋಟ್ಯಂತರ ಬಡಬಗ್ಗರಿಗೆ ಹಿಟ್ಟು ದೊರೆಯುವವರೆಗೆ ನಮಗೆ ಸ್ವರಾಜ್ಯ ಇಲ್ಲ.

ನಿಮಗೆ ಸ್ವರಾಜ್ಯ ಸಿಗಬೇಕಾದರೆ ಇದೇ ಕರಾರಿನ ಮೇರೆಗೆ ದೇಶಬಂಧು ದಾಸರೊಂದಿಗೆ, ಪಂಡಿತ್ ಮೋತಿಲಾಲರೊಂದಿಗೆ ನಾನು ಒಂದು ಒಪ್ಪಂದ ಮಾಡಿಕೊಂಡು, ಅದನ್ನು ಇಡೀ ದೇಶದ ಮುಂದೆ ಇಟ್ಟಿದ್ದೇನೆ. ನಾನು ಬಯಸಿದ್ದರಲ್ಲಿ ಏನೂ ತಪ್ಪಿಲ್ಲ ಎಂದು ನಂಬಿದ್ದೇನೆ. ತಾವು ಬಯಸಿದಂತೆ ಮಾಡುವ ಅವರ ಹಕ್ಕನ್ನು ಒಪ್ಪಿಕೊಳ್ಳುತ್ತೇನೆ. ನನ್ನ ಮಟ್ಟಿಗೆ ಶಾಸನಸಭೆಗಳಿಂದ ಏನೂ ಲಾಭ ಇಲ್ಲ ಎಂದುಕೊಂಡಿದ್ದೇನೆ. ಆದರೆ ಶಾಸನಸಭೆಗಳ ಮೂಲಕ ಲಾಭ ಉಂಟು ಎಂದು ತಿಳಿದ ಅನೇಕ ಮಹಾನಾಯಕರು ಇದ್ದಾರೆ. ಏನೂ ಆಗದಿದ್ದರೂ ಶಾಸನಸಭೆಗಳಿಗಾದರೂ ಹೋಗಬಹುದಲ್ಲ ಎನ್ನುತ್ತಾರೆ ಅವರು. ನಿಜ, ಶಾಸನಸಭೆಗಳಿಗೆ ಹೋಗುವುದರಲ್ಲಿ ಪ್ರಯೋಜನ ಇದೆ ಎನಿಸಿದರೆ ಅವರಿಗೆ, ಅವರು ಹೋಗಲೇಬೇಕು ಎನ್ನುತ್ತೇನೆ. ಅವರೂ ದೇಶದ ನಾಯಕರೇ. ನಾನು ಬೇಡ ಎಂದು ಹೇಳಲು ಯಾರು. ಹೋಗಬೇಕು ಎನ್ನುವವರು ಶಾಸನಸಭೆಗೆ ಹೋಗಲಿ ಎನ್ನುತ್ತದೆ ಒಪ್ಪಂದ. ಅಸಹಕಾರಿಗಳು ಅವರನ್ನು ಹಿಂಬಾಲಿಸಬೇಕು ಎಂದು ಅರ್ಥವಲ್ಲ. ಕಾಂಗ್ರೆಸ್ ಪರಿವರ್ತನ ವಾದಿಗಳಿಗೆ ಎಷ್ಟರ ಮಟ್ಟಿಗೆ ಸೊತ್ತೋ ಅಪರಿವರ್ತನವಾದಿಗಳಿಗೂ ಅಷ್ಟೇ. ಯಾರೊಬ್ಬರದೂ ಅಲ್ಲ. ಹಾಗೆ ತಿಳಿದರೆ ಅದು ತಪ್ಪು. ಆದ್ದರಿಂದ ಅವರು ಕಾಂಗ್ರೆಸ್ನ ಪರವಾಗಿ ಹೋಗುತ್ತಾರೆ. ಇದು ತಪ್ಪು ಎಂದು ಹೇಳಿದೆ. ಆದರೆ ನನ್ನದೇ ಸರಿ, ಉಳಿದವರು ತಪ್ಪು ಎಂಬ ಭಾವನೆಯು ಅಳಿಯಬೇಕು. ಜಗತ್ತಿನಲ್ಲಿ ಬೇರೆ ಬೇರೆ ಮನೋಧರ್ಮ ಇರುವವರೆಗೆ ಭಿನ್ನಾಭಿಪ್ರಾಯಗಳು ಇದ್ದೇ ಇರುತ್ತವೆ. ಆದರೆ ಸಹನೆಯನ್ನು ಹೆಚ್ಚಿಸಲು ನಾವು ಎಲ್ಲವನ್ನೂ ಅಪ್ಪಿಕೊಳ್ಳುತ್ತೇವೆ. ಇದು ಅಹಿಂಸೆಯ ಒಂದು ಅಂಗ. ಆದರೆ ನಾನು ಹೇಳಿದ ಹಾಗೆ ಇದು ಚಿಕ್ಕ ವಿಷಯ. ಈ ಪ್ರತಿಜ್ಞೆಯಲ್ಲಿ ಮುಖ್ಯ ವಿಷಯ ಚರಕ. ಚರಕಾಸ್ತ್ರದಲ್ಲಿ ನಿಮಗೆ ನಂಬಿಕೆ ಇಲ್ಲದಿದ್ದರೆ, ಖಾದಿಯಲ್ಲಿ ನಿಮಗೆ ಶ್ರದ್ಧೆ ಇಲ್ಲದಿದ್ದರೆ, ಈ ಹೊಸ ಮತದಾನ ಪದ್ಧತಿ ಕಾಂಗ್ರೆಸ್ಸನ್ನು ದುರ್ಬಲಗೊಳಿಸುತ್ತದೆ ಎಂದು ನಿಮಗನಿಸಿದರೆ, ಚರಕವನ್ನು ಕೈಬಿಡಿ ಎನ್ನುತ್ತೇನೆ.

ಸೋದರರೇ,

ಈ ಕೆಲಮಾತನ್ನು ನನ್ನ ಹರಕುಮುರುಕು ಹಿಂದಿಯಲ್ಲಿ ಹೇಳಿದ್ದೇನೆ.


ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ
ಬೆಳಕಿನೆಡೆಗೆ...
ಗಾಂಧೀಜಿ ಕನಸು
ಕರ್ನಾಟಕದಲ್ಲಿ
ನನಸು
ಗೃಹ ಜ್ಯೋತಿ
ಪ್ರತಿ ಮನೆಗೆ
200 ಯೂನಿಟ್‌ವರೆಗೆ
ವಿದ್ಯುತ್ ಉಚಿತ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಫಲಾನುಭವಿಗಳ ಸಂಖ್ಯೆ: 1.62 ಕೋಟಿ
ಒಟ್ಟು ವೆಚ್ಚ: ರೂ.11,810 ಕೋಟಿ
ನುಡಿದಂತೆ
ನಡೆದಿದ್ದೇವೆ...
ಶಕ್ತಿ
ಮಹಿಳೆಯರಿಗೆ
ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ
10kg
ಗೃಹಲಕ್ಷ್ಮಿ
₹2000
ಯುವನಿಧಿ
₹3000 ₹1500
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ



ಮಹಾತ್ಮಾ ಗಾಂಧೀಜಿ ಅವರನ್ನು ಗಂಗಾಧರರಾವ್ ದೇಶಪಾಂಡೆ ಅವರು ಬೆಳಗಾವಿಯಲ್ಲಿ ಬೀಳ್ಕೊಡುತ್ತಿರುವುದು.

ಕರ್ನಾಟಕದ, ದಕ್ಷಿಣಭಾರತದ ಕೆಲವರು ಇಂಗ್ಲಿಷ್ನಲ್ಲಿ ಮಾತನಾಡಿ ಎನ್ನುತ್ತಿದ್ದೀರಿ. ಇದರಿಂದ ನನಗೆ ನೋವಾಗುತ್ತದೆ. ನಾನು ಭಾರತಕ್ಕೆ ಬಂದಾಗಿನಿಂದ ಕನಿಷ್ಠ ಪಕ್ಷ ಕಾಂಗ್ರೆಸ್ಸಿನಲ್ಲಾದರೂ ಸ್ವರಾಜ್ಯದ ಮಾತನಾಡುವಾಗ, ಹಿಂದಿಯಲ್ಲೇ ಮಾತನಾಡೋಣ ಎನ್ನುತ್ತಿದ್ದೇನೆ. ನಮ್ಮ ದುರ್ದೈವ, ನಮ್ಮ ಶಿಕ್ಷಣ ಬಹಳ ತಪ್ಪು. ಅದರ ತುಂಬಾ ಸೋಮಾರಿತನ ಸೇರಿಕೊಂಡಿದೆ. ಇದಕ್ಕಾಗಿ ಎಷ್ಟು ಪ್ರಯತ್ನ ಮಾಡಬೇಕೋ ಅಷ್ಟು ಪ್ರಯತ್ನ ಮಾಡುತ್ತಿಲ್ಲ. ಈಗಲೂ ಕೂಡ ನನ್ನ ಹರಕುಮುರುಕು ಹಿಂದಿ ತಮಿಳುನಾಡಿನ, ಕರ್ನಾಟಕದ ಸೋದರರಿಗೆ ಸ್ವಲ್ಪಮಟ್ಟಿಗೆ ಅರ್ಥವಾಗುತ್ತದೆ ಎಂದು ನನಗೆ ಮನವರಿಕೆಯಾದರೆ ನಾನು ಸಮಾಧಾನಗೊಂಡು ಹೋಗುತ್ತೇನೆ. ಆದರೆ ಪರಿಸ್ಥಿತಿ ಹಾಗಿಲ್ಲ.

ದೇಶಬಂಧು ದಾಸರನ್ನು ನಾನು ಮರೆಯುತ್ತಿದ್ದೇನೆ. ಈ ಪಾಪಕ್ಕೆ ಬಂಗಾಲದ್ದೂ ಕಾಣಿಕೆ ಇದೆ. ರವೀಂದ್ರನಾಥ ಠಾಕೂರರು ಅಂಥ ಅದ್ಭುತ ಸಾಹಿತ್ಯ ಸೃಷ್ಟಿಸಿರುವ ಆ ಭಾಷೆಯನ್ನು ಕಲಿಯಲು ದೇವರು ನನಗೆ ಶಕ್ತಿ ಕೊಟ್ಟಿದ್ದರೆ ಚೆನ್ನಾಗಿತ್ತು. ನನ್ನ ಬಂಗಾಳಿ ಸೋದರರಿಗೆ ಆ ಭಾಷೆಯಲ್ಲಿ ಹೇಳಬಹುದಾಗಿತ್ತು.

ಇನ್ನು ಒಂದೇ ಒಂದು ಬಿನ್ನಹ. ಚೆನ್ನಾಗಿ ತಿಳಿದುಕೊಳ್ಳಿ, ನಾನು ಹೇಳಬೇಕಾದ್ದನ್ನೆಲ್ಲ ಹಿಂದಿಯಲ್ಲಿ ಹೇಳಿದ್ದೇನೆ. ನಿಮಗೂ ಅರ್ಥವಾಗಿದೆ. ದಾಸರು ಬಂದು ತಮಗೆ ಬೇಕಾದದ್ದನ್ನು ಹೇಳುತ್ತಾರೆ. ದಾಸರು ಗೊತ್ತುವಳಿಯನ್ನು ಓದುವುದಿಲ್ಲ. ಓದಲು ಒತ್ತಾಯ ಮಾಡಬೇಡಿ. ನೀವು ಓದಿರದಿದ್ದರೆ ನಾಳೆ ಪತ್ರಿಕೆಗಳಲ್ಲಿ ಓದಿ. ಅದರಲ್ಲಿ ಇರುವುದು ಇಷ್ಟೇ. ಪರಿವರ್ತನವಾದಿಗಳು, ಅಪರಿವರ್ತನವಾದಿಗಳು ಏಕಮತದಿಂದ ಇರಬೇಕು ಎಂಬುದು ಆಶಯ. ನಮ್ಮ ಅಭಿಪ್ರಾಯಗಳು ಬೇರೆ ಬೇರೆ. ಆದರೆ ನಮ್ಮ ಹೃದಯ ಒಂದೇ. ನೀವು ಅಪರಿವರ್ತನವಾದಿಗಳಾಗಿದ್ರೆ ನಿಮ್ಮ ಹೃದಯದಲ್ಲಿ ನನಗಿರುವಷ್ಟು ಸ್ಥಾನವೇ ದೇಶಬಂಧು ದಾಸರಿಗೆ, ಪಂಡಿತ್ ಮೋತೀಲಾಲರಿಗೆ, ಕೇಳ್ಕರರಿಗೆ ಇತರರಿಗೆ ಇರಬೇಕು. ನಿಮ್ಮ ನಾಯಕರುಗಳಿಗೆ ಕೊಡುವಷ್ಟು ಗೌರವವನ್ನು ನನಗೂ ಕೊಡಬೇಕು. ಇದೇ ಹಿಂದೂ-ಮುಸ್ಲಿಮ್ ಐಕ್ಯತೆ. ಹಿಂದೂ ಮುಸ್ಲಿಮ್ ಐಕ್ಯ ಎಂದರೆ ನಾನು ಸನಾತನ ಇದ್ದರೆ ನನ್ನ ಹೃದಯದಲ್ಲಿ ಮಾಲವೀಯ ಅವರಿಗೆ ಯಾವ ಸ್ಥಾನವಿದೆಯೋ ಮೌಲಾನಾ ಮಹಮದಾಲಿ, ಶೌಕತಾಲಿ ಮತ್ತು ಇತರ ಮುಸಲ್ಮಾನರ ಬಗ್ಗೆಯೂ ಅದೇ ಸ್ಥಾನ ಇರಬೇಕು. ಅವರು ನಮ್ಮನ್ನು ಶತ್ರುಗಳೆಂದು ತಿಳಿದರೂ ಕೂಡ ನಮ್ಮ ಈ ಭಾವ ಕದಲಕೂಡದು; ವಿಚಿತ್ರ ಅಲ್ಲವೇ ಇದು. ಮಾಲವೀಯರೊಂದು ಕಡೆ, ನಮ್ಮನ್ನು ಶತ್ರು ಎಂದು ತಿಳಿದ ಮುಸಲ್ಮಾನ ಒಂದು ಕಡೆ. ಆದರೆ ಈ ಗೀತೆ, ಭಾಗವತ, ರಾಮಾಯಣಗಳ ಅಭ್ಯಾಸದಿಂದ ನಾನು ಏನಾದರೂ ಕಲಿತಿದ್ದರೆ, ಅದು ಇದೇ. ಇನ್ನು ನೀವು ಗೊತ್ತುವಳಿ ಓದಿಕೊಳ್ಳಿ ಮತ್ತು ದಾಸರು ಹೇಳುವುದನ್ನು ಕೇಳಿಕೊಳ್ಳಿ ದಾಸರಿಗೆ ಗೊತ್ತುವಳಿ ಓದಲು ಒತ್ತಾಯಪಡಿಸಬೇಡಿರಿ.

ಇಲ್ಲಿಯವರೆಗೆ ಹಿಂದಿಯಲ್ಲಿ ಮಾತನಾಡಿದ್ದ ಗಾಂಧೀಜಿಯವರು ಇಂಗ್ಲಿಷಿನಲ್ಲಿ ಭಾಷಣ ಮುಂದುವರಿಸಿದರು:

ಹತ್ತು ನಿಮಿಷಕ್ಕಿಂತ ಹೆಚ್ಚಾಗಿ ಮಾತನಾಡುವುದಿಲ್ಲ. ಅರ್ಧಗಂಟೆ ಮಾತನಾಡುತ್ತೇನೆ ಎಂದುಕೊಂಡಿದ್ದೆ. ಅದರಲ್ಲೇ ಆಗಲೇ ಹಿಂದೂಸ್ತಾನಿ ಭಾಷಣಕ್ಕೆ ತುಂಬಾ ಹೊತ್ತು ತೆಗೆದುಕೊಂಡೆ. ನನ್ನ ಭಾಷಣ ನಿಮಗೆ ಆಗಲೇ ಸಿಕ್ಕಿದೆ. ಅದನ್ನು ನಾನು ಈಗ ಓದುವುದಿಲ್ಲ. ಅದರಿಂದ ನಿಮಗೂ ಕಾಲಹರಣ.

ನನಗೂ ಕಾಲಹರಣ. ನಿಮಗೆ ಬೇಸರ, ಆದ್ದರಿಂದ-ಭಾಷಣ ಓದುವುದಿಲ್ಲ.

ನಾವೆಲ್ಲರೂ ಆದಷ್ಟು ಕೆಲಸದಲ್ಲಿ ತೊಡಗಬೇಕು. ದೇಶಬಂಧು ದಾಸರು ಮುಖ್ಯ ಗೊತ್ತುವಳಿಯನ್ನು ಮಂಡಿಸುತ್ತಾರೆ. ನೀವು ಆ ಗೊತ್ತುವಳಿಯನ್ನು ತಿರಸ್ಕರಿಸಿದರೆ, ನಿಮ್ಮ ದಾರಿ ನೀವು ಹಿಡಿದು, ದೇಶಕ್ಕೂ ನಿಮಗೂ ಯಾವುದು ನಿಮಗೆ ಉತ್ತಮ ಎನಿಸುತ್ತದೆಯೋ ಆ ರೀತಿ ಮಾಡಬೇಕು; ನಾನು ಉತ್ತಮ ಎಂದು ತಿಳಿದುಕೊಂಡ ಕೆಲಸವನ್ನು ಎಂದರೆ ನೂಲುವುದಕ್ಕೆ ನನಗೆ ಅನುಮತಿ ಕೊಡಬೇಕು. ನಿಮ್ಮ ಮುಂದೆ ಮಂಡಿಸಲಾಗುವ ಗೊತ್ತುವಳಿಯನ್ನು ನೀವೆಲ್ಲರೂ ಪ್ರತಿಯೊಬ್ಬರೂ ಚೆನ್ನಾಗಿ ಪರ್ಯಾಲೋಚಿಸಿ ಎಂದು ಕೇಳಿಕೊಳ್ಳುತ್ತೇನೆ.

ರಾಷ್ಟ್ರದ ಮುಂದೆ ಒಂದು ಕ್ರಾಂತಿಕಾರಿ ಪರಿವರ್ತನೆಯ ವಿಚಾರವನ್ನು ಮಂಡಿಸಲಾಗುತ್ತಿದೆ. ಲಾಲಾಜಿ ಹೇಳಿದಂತೆ ಕೋಲ್ಕತ್ತಾದ ವಿಶೇಷ ಅಧಿವೇಶನದಲ್ಲಿ–1920ರಲ್ಲಿ ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರ ಕೈಕೊಂಡ ಪರಿವರ್ತನೆಯಷ್ಟೇ ಇದೂ ಕೂಡ ಕ್ರಾಂತಿಕಾರಿ ಎನ್ನುತ್ತೇನೆ. ನಾನು ದೇಶದ ಮುಂದಿಟ್ಟಿರುವ ಈ ಬದಲಾವಣೆಯು ಅದಕ್ಕಿಂತಲೂ ಹೆಚ್ಚು ಕ್ರಾಂತಿಕಾರಿ ಎಂದು ಹೇಳಿದ ಅವರ ಮಾತಿಗೆ ದನಿಗೂಡಿಸುತ್ತೇನೆ. ಈ ಗೊತ್ತುವಳಿಯನ್ನು ನೀವು ಪೂರ್ಣ ಮನಸ್ಸಿನಿಂದ ಒಪ್ಪಿಕೊಂಡು ಅದರಂತೆ ನಡೆದರೆ ಸ್ವರಾಜ್ಯದ ಹತ್ತಿರಹತ್ತಿರಕ್ಕೆ ನೀವು ಬರುತ್ತೀರಿ ಎಂದು ಧೈರ್ಯವಾಗಿ ಹೇಳುತ್ತೇನೆ. ಕೇವಲ ತೀರ್ಮಾನ ಮಾಡಿ, ಸಂತೋಷ ಪಟ್ಟು, ಆಮೇಲೆ ಅದನ್ನು ಮರೆತುಬಿಡುವ ದಿನಗಳು ಕಳೆದುಹೋಗಿವೆ. ಈ ಗೊತ್ತುವಳಿ ಅಸ್ಪಷ್ಟವಾಗಿಲ್ಲ. ಕೆಲಸಮಾಡುವ ಮನಸ್ಸು ಇದ್ದವರಿಗೆ ಎಲ್ಲರಿಗೂ ಇದೊಂದು ಕರೆ. ಅರ್ಥಮಾಡಿಕೊಳ್ಳಬಲ್ಲ ಗಂಡು ಹೆಣ್ಣು, ಯಾರು ಯಾರು ಈ ಸಭೆಯಲ್ಲಿದ್ದಿರೋ ಅವರಿಗಾಗಿಯೇ ಈ ಠರಾವು ಬಂದಿದೆ. ದೇಶಬಂಧು ದಾಸರಾಗಲೀ, ಮೌಲಾನಾ ಮಹಮ್ಮದಾಲಿ ಆಗಲಿ, ಈ ಠರಾವನ್ನು ಒಪ್ಪಿಕೊಳ್ಳಿ ಎಂದು ನಿಮ್ಮನ್ನು ಕೇಳದಿದ್ದರೂ ದೇವರ ಸಾಕ್ಷಿಯಾಗಿ ಒಪ್ಪಿಕೊಳ್ಳಲು ನಿಮ್ಮನ್ನು ನಾನು ಕೇಳಿಕೊಳ್ಳುತ್ತೇನೆ. ನೀವು ಈ ಠರಾವಿನ ಮೇಲೆ ಮತ ಕೊಡುವಾಗ ದೈವಸಾಕ್ಷಿಯಾಗಿ ಕೊಡುತ್ತಿದ್ದೇನೆ ಎಂದುಕೊಳ್ಳಿ, ರಾಷ್ಟ್ರಕ್ಕಾಗಿ, ದೇಶದ ಕಡುಬಡವರಿಗಾಗಿ, ಸ್ವರಾಜ್ಯ ಸಂಪಾದನೆಗಾಗಿ ಏನಾದರೂ ಮಾಡುವ ಸಂಕಲ್ಪ ಕೈಕೊಳ್ಳುವಿರಿ ಎಂದು ಅದರ ಅರ್ಥ. ಇದರ ಬಗ್ಗೆ ನಿಮ್ಮ ಮನಸ್ಸಿನಲ್ಲಿ ಸಂದೇಹ ಇದ್ದರೆ ತಿರಸ್ಕರಿಸಿ ಎನ್ನುತ್ತೇನೆ.

ಈ ಠರಾವಿನ ಹಿಂದೆ ನನ್ನ ವ್ಯಕ್ತಿತ್ವ ಇದೆ ಎಂದು ನೀವು ಚಿಂತಿಸಬೇಕಾಗಿಲ್ಲ. ನಾನು ಎಂದೂ ತಪ್ಪು ಮಾಡಲಾರದವನು ಅಲ್ಲ ಎಂದು ಪದೇ ಪದೇ ಹೇಳಿದ್ದೇನೆ. ನಾನೂ ತಪ್ಪು ಮಾಡುವವ ಎಂದು ಮತ್ತೆ ಮತ್ತೆ ಒಪ್ಪಿಕೊಂಡಿದ್ದೇನೆ. ನನ್ನ ಬದುಕಿನಲ್ಲಿ ಕೆಲವು ಸಲ ಹಿಮಾಲಯದಂಥ ತಪ್ಪು ಮಾಡಿದ್ದೇನೆ, ಒಪ್ಪಿಕೊಂಡಿದ್ದೇನೆ. ಅದಕ್ಕಾಗಿ ಪ್ರಾಯಶ್ಚಿತ್ತ ಮಾಡಿ ಕೊಂಡಿದ್ದೇನೆ. ತಪ್ಪು ಮಾಡದವನು ಪರಿಪೂರ್ಣ ಪುರುಷ. ಅವನು ತಪಸ್ಸು ಮಾಡಬೇಕಾಗಿಲ್ಲ. ಅವನಿಗೆ ಪ್ರಾಯಶ್ಚಿತ್ತ ಬೇಕಿಲ್ಲ. ಏಕೆಂದರೆ ಅವನು ತಪ್ಪನ್ನೇ ಮಾಡಲಾರ. ಅಂಥವನಿಗೆ ತಿಳಿಸಿ ಹೇಳಬೇಕಾದ ಅಗತ್ಯವೇನಿಲ್ಲ. ನಾನೂ ನಿಮ್ಮ ಹಾಗೆಯೇ ನಿಮ್ಮಷ್ಟೇ ಸದ್ಗುಣಿ, ಅಥವಾ ದುರ್ಗುಣಿ. ಆದ್ದರಿಂದ ನನ್ನ ವ್ಯಕ್ತಿತ್ವವನ್ನು ಮರೆತು ಈ ಸಮಸ್ಯೆಗೆ ಸರಿಯಾಗಿ ಉತ್ತರ ಹುಡುಕಿರಿ.

ಈ ತೀರ್ಮಾನ ಬಹಳ ಮಹತ್ತರವಾದದ್ದು. ಇದಕ್ಕೆ ವಿರುದ್ಧವಾಗಿ ಸಾಕಷ್ಟು ದೊಡ್ಡ ಗುಂಪು ಇದೆ ಎಂದು ಬಲ್ಲೆ. ಕೇವಲ ನೂಲುವುದನ್ನೇ ನಂಬಿ ಕುಳಿತುಕೊಳ್ಳುವುದು ಯೋಗ್ಯವಲ್ಲ ಎಂದು ಒಂದು ಗುಂಪು. ನೂಲುವುದು ಒಳ್ಳೆಯದೇ. ಆದರೆ ಇದು ಬಹಳ ಕಷ್ಟದಾಯಕ ದೀರ್ಘ ಪ್ರಯಾಸ ಎನ್ನುತ್ತದೆ ಇನ್ನೊಂದು ಗುಂಪು. ಖಾದಿ, ನೂಲುವುದು ಒಳ್ಳೆಯದೆ. ಆದರೆ ರಾಷ್ಟ್ರೀಯ ಮತಾಧಿಕಾರದಲ್ಲಿ ಇವಕ್ಕೆ ಸ್ಥಾನ ಇಲ್ಲ ಎನ್ನುತ್ತದೆ ಮೂರನೆಯ ಗುಂಪು.

ಇವಕ್ಕೆ ವಿರುದ್ಧವಾದ ಅಭಿಪ್ರಾಯ ನನ್ನದು. ದಿನೇ ದಿನೇ ಇದು ನನಗೆ ಹೆಚ್ಚು ಮನದಟ್ಟಾಗುತ್ತಿದೆ. ಸಾಧ್ಯವಾದರೆ ದಿನವೂ ಪ್ರತಿ ಗಂಟೆಯಲ್ಲಿಯೂ ನಾನು ನೂಲುತ್ತಿದ್ದೆ. ಚರಕದ ಒಂದೊಂದು ಸುತ್ತಿನಿಂದಲೂ ಸ್ವರಾಜ್ಯ ನಮಗೆ ಹತ್ತಿರ ಹತ್ತಿರ ಬರುತ್ತಿದೆ ಎಂದು ನನಗೆ ಅನಿಸುತ್ತದೆ. ಈ ಸುತ್ತುಗಳನ್ನು ಮೂವತ್ತು ಕೋಟಿಯಿಂದ ಗುಣಿಸಿ, ಅದರಿಂದ ಸ್ವರಾಜ್ಯ ಪ್ರಾಪ್ತಿಗೆ ಎಷ್ಟು ವೇಗ ಬರುತ್ತದೆಯೋ ನೋಡಿ. ಈ ಗತಿ, ಈ ವೇಗ ಬರಬೇಕಾದರೆ ನೂಲುವ ಕ್ರಿಯೆಯಲ್ಲಿ ಸ್ವರಾಜ್ಯ ಸಂಪಾದನೆಯ ಶಕ್ತಿ ಅಡಗಿದೆ ಎಂಬ ನನ್ನಲ್ಲಿರುವ ದೃಢವಿಶ್ವಾಸದ ಕಾವು ನಿಮ್ಮಲ್ಲೂ ಉಂಟಾಗಬೇಕು.

ನನ್ನ ಭಾಷಣದಲ್ಲಿ ಎಷ್ಟೋ ಮಾತು ಹೇಳಿದ್ದೇನೆ. ಶ್ರೀಮತಿ ಸರೋಜಿನಿದೇವಿ ಒಂದು ಮಾತನ್ನು ಮಾತ್ರ ಹೇಳಲು ನನಗೆ ಹೇಳಿದ್ದಾಳೆ. ದಕ್ಷಿಣ ಆಫ್ರಿಕಾದಲ್ಲಿ ಅಂಥ ಅದ್ಭುತಸೇವೆ ಮಾಡಿಬಂದ ಆಕೆಯ ಗೌರವಕ್ಕಾಗಿ ನಾನು ಅದನ್ನು ಹೇಳುತ್ತೇನೆ. ಇದು ಹಿಂದೂ ಮುಸ್ಲಿಂ ಐಕ್ಯದ ವಿಷಯ. ನನಗೆ ಇದರಿಂದ ತುಂಬಾ ಬೇಸರ ಆಗಿದೆ, ದಣಿದಿದ್ದೇನೆ. "ಹಿಂದೂ–ಮುಸ್ಲಿಂ ದಂಗೆ ಎಲ್ಲಿಯಾದರೂ ಆಗಲಿ. ಆದರ ಪಾಡಿಗೆ ಅದನ್ನು ಬಿಡೋಣ ಎನ್ನುತ್ತಾರೆ ಶೌಕತ್ ಆಲಿ. ಆ ದೊಡ್ಡ ತಲೆಯಲ್ಲಿ ಬೇಕಾದಷ್ಟು ವಿವೇಕ ಇದೆ; ಅದರಲ್ಲಿ ಬರೀ ಚರಬಿ ತುಂಬಿಲ್ಲ (ಹಾಸ್ಯವಾಗಿ ಹೇಳಿ ನಕ್ಕಿದ್ದರು). ಪದೇ ಪದೇ ಅವರು ಹೇಳುತ್ತಾರೆ, "ನನ್ನ ಈ ಮುಸಲ್ಮಾನರು ಶತ ಮೂರ್ಖರಾಗಿದ್ದರೆ. ಅವರ ತಲೆ ಕೆಟ್ಟಿದೆ, ಇದೇ ರೀತಿ ನಿಮ್ಮ ಹಿಂದೂಗಳೂ ಮೂರ್ಖರಾಗಿದ್ದರೆ. ಇವರ ಜಗಳಗಳನ್ನು ತೀರ್ಮಾನಿಸುವ ಪ್ರಯತ್ನದಲ್ಲಿ ಸ್ವರಾಜ್ಯ ನಮ್ಮ ಕೈಯಿಂದ ಜಾರಿ ಹೋಗುತ್ತದೆ. ಅವರ ಪಾಡಿಗೆ ಅವರನ್ನು ಬಿಟ್ಟುಬಿಡೋಣ ಎಂದು. ಆದರೆ ನಾನು ಹೇಗೆ ಕೈಬಿಡಲಿ. ಚರಕದಂತೆ ಹಿಂದೂ–ಮುಸ್ಲಿಂ ಐಕ್ಯವು ನನಗೆ ಒಂದು ಹುಚ್ಚು. ಅದರಲ್ಲಿ ನನಗೊಂದು ರಾಗ, ಭಕ್ತಿ ಇದೆ. ನಾನು ಅದನ್ನು ಕೈಬಿಟ್ಟು ಮರೆತು ಕೂಡಲಾರೆ. ನಾನು ಈ ಚಿಕ್ಕ ಹುಡುಗಿ ಗುಲ್ನಾರಳ ಮೇಲೆ ಬಹಳ ಪ್ರೀತಿ ಮಮತೆ ಇಟ್ಟುಕೊಂಡಿದ್ದೇನೆ. 'ಏಕೆ ಹೀಗೆ ಎಂದು ನೀವು ಕೇಳಿರಿ. ಒಂದು ಕಾರಣ ಇದೆ:



ಮಹಾತ್ಮಾ ಗಾಂಧೀಜಿಯವರು ಪ್ಯಾರಿಸ್ ನಿಂದ ಸ್ವಿಟ್ಜರ್ಲೆಂಡ್ ಗೆ ಪ್ರಯಾಣಿಸುತ್ತಿರುವುದು

ಈ ಹುಡುಗಿ ದೊಡ್ಡವಳಾದಾಗ ಒಬ್ಬ 'ಸನಾತನಿ ಗಾಂಧಿಯನ್ನು ನೆನೆದುಕೊಳ್ಳುತ್ತಾಳೆ. ಆ ಗಾಂಧಿ ಅವಳ ಜೊತೆಗೆ ಮಾಂಸ ತಿನ್ನುತ್ತಿರಲಿಲ್ಲ, ದನದ ಮಾಂಸ ಮುಟ್ಟುತ್ತಿರಲಿಲ್ಲ. ಯಾರಾದರೂ ದನದ ಮಾಂಸವನ್ನು ಇಷ್ಟಪಟ್ಟರೆ ತಿನ್ನಲಿ ಬಿಡಿ ಎಂದು ಬಿಟ್ಟು ಬಿಡುತ್ತಿದ್ದರು. ತನ್ನ ಪಾಡಿಗೆ ತಾನು ಗೋಪೂಜೆ ಮಾಡುತ್ತಿದ್ದರು. ಈ ಹುಡುಗಿ ಪ್ರೌಢೆ ಆಗುವ ವೇಳೆಗೆ ನಾನು ಸಾಯಬಹುದು. ಅವಳು ಪ್ರೌಢೆಯಾದಾಗ ನನ್ನ ಸಂದೇಶವನ್ನು ಪ್ರತಿಬಿಂಬಿಸುತ್ತಾಳೆ. ಇವತ್ತು ಅವಳು ಶುದ್ಧಳು ಏನೂ ಅರಿಯದವಳು. ಎಲ್ಲವು ಸರಿಯಾಗಿಯೇ ಇದೆ ಎಂದುಕೊಳ್ಳುತ್ತಾಳೆ. ದ್ವೇಷ ಎಂಬುದು ಅವಳಿಗಿಲ್ಲ. ಬರಿ ಪ್ರೇಮ. ಪ್ರೇಮದ ಪುತ್ಥಳಿ ಅವಳು. ನನಗೂ ಅವಳಿಗೂ ಸಮುದ್ರದಷ್ಟು ಅಂತರವಿದ್ದರೂ, ನನ್ನ ಸ್ವಂತ ಮಾಂಸ ರಕ್ತ ಎನ್ನುವ ಹಾಗೆ ನಡೆಸಿಕೊಳ್ಳುತ್ತಿದ್ದೇನೆ, ಈ ರೀತಿ ಮುಸಲ್ಮಾನರ ಸಂಗಡ ಏಕತೆಯನ್ನು ಸಾಧಿಸುತ್ತಿದ್ದೇನೆ. ಕುರಾನಿನ ಪ್ರಕಾರ ಗೋವನ್ನು ಕೊಲ್ಲುವುದು ನ್ಯಾಯ ಎಂದು ಅವಳು ತಿಳಿಯುತ್ತಾಳೆ, ನನ್ನ ಧರ್ಮ ಗೋವಧೆ ಮಾಡಕೂಡದು ಎಂದು ಹೇಳುತ್ತದೆ. ಹೀಗಿರುವಾಗ ಗೋವಧೆ ಮಾಡಬೇಡ ಎಂದು ಅವಳನ್ನು ಅಡ್ಡಿಪಡಿಸಲು ನಾನು ಯಾರು? ಹಾಗೆ ಅಡ್ಡಿ ಪಡಿಸದಿದ್ದರೆ ನನ್ನ ಧರ್ಮಕ್ಕೆ ನಾನು ತಪ್ಪಿ ನಡೆದಂತೆ. ಆದರೆ ಪ್ರೇಮದಿಂದ ಅವಳ ಮನಸ್ಸನ್ನು ಓಲೈಸಿ ಗೆಲ್ಲುತ್ತೇನೆ; "ಕುರಾನ್ ನೀನು ಗೋವನ್ನು ಕೊಂದೇ ತೀರಬೇಕು, ಗೋಮಾಂಸ ತಿಂದೇ ತೀರಬೇಕು ಎಂದು ಹೇಳುವುದಿಲ್ಲ. ನನ್ನ ಧರ್ಮ ನನಗೆ ಇದಕ್ಕೆ ಸಮ್ಮತಿ ಕೊಡುವುದಿಲ್ಲ. ಅಷ್ಟೇ ಅಲ್ಲ, ನನ್ನ 'ಕುರಾನ್ ನನಗೆ ಗೋವನ್ನು ಪೂಜಿಸುವಂತೆ ಒತ್ತಾಯಪಡಿಸುತ್ತದೆ. ನೀನು ಗೋಪೂಜೆಯನ್ನು ಬಿಡಬಹುದು. ಆದರೆ ನಾನು ಗೋಮಾಂಸ ತಿನ್ನದಿದ್ದರೆ, ಗೋಪೂಜೆ ಮಾಡಿದರೆ ನೀನು ಅದನ್ನು ಸಹಿಸಿಕೊಳ್ಳಲೇ ಬೇಕು. ನನ್ನ ಸ್ನೇಹಕ್ಕಾಗಿ ನೀನು ಗೋವಧೆ ಮಾಡದೆ ಬಿಡಬಹುದು ಎಂದು ಹೇಳುತ್ತೇನೆ. ಇದು ನನ್ನ ಪ್ರೇಮದ ರಹಸ್ಯ ಈ ಚಿಕ್ಕ ಹುಡುಗಿ, ಗುಲ್ನಾರ ಬಗ್ಗೆ ನನಗಿರುವ ಮಮತೆಯ ಗುಟ್ಟು ಇದೇ. ಆದ್ದರಿಂದ ಶೌಕತ್ ಆಲಿಯು ಜೇಬಿನಲ್ಲಿ ನನ್ನನ್ನು ಹೊತ್ತುಕೊಂಡು ಹೋಗಲಿ, ನನಗೆ ಒಪ್ಪಿಗೆ. ಮಾಲವೀಯರ ಬಗ್ಗೆ ನಾನೇಕೆ ವಿಚಾರ ಮಾಡುವುದಿಲ್ಲ? ಮಾಲವೀಯರ ಬಗ್ಗೆ ನನ್ನ ಪೂಜ್ಯಭಾವ ನನಗೆ ಸಹಜ, ಸ್ವಾಭಾವಿಕ. ಆದರೆ ನಾನು ಮುಸಲ್ಮಾನರ ಪಕ್ಷಪಾತಿ.'ಇಲ್ಲದೇ ಇದ್ದರೆ ಹೇಗೆ? ಮುಸಲ್ಮಾನರ ಪಕ್ಷಪಾತಿಯಾದರೇನೇ ಈ ಸಮಸ್ಯೆಗೆ ಸರಿಯಾದ ಉತ್ತರ, ಇದಕ್ಕೆ ಸರಿಯಾದ ಪರಿಹಾರ ನಿಮಗೆ ಸಿಗಲಿದೆ.

ಹಿಂದೂಗಳೂ ಮುಸಲ್ಮಾನರೂ ಈ ಸಮಸ್ಯೆಗೆ ಏನು ಮಾಡಬೇಕು ಎಂದು ಕೇಳಿದರೆ ಪ್ರತಿಯೊಬ್ಬ ಹಿಂದೂ-ಮುಸಲ್ಮಾನ ಪಕ್ಷಪಾತಿಯಾಗಬೇಕು, ಪ್ರತಿಯೊಬ್ಬ ಮುಸಲ್ಮಾನನೂ ಹಿಂದೂ ಪಕ್ಷಪಾತಿ ಆಗಬೇಕು ಎನ್ನುತೇನೆ. ದೇವರನ್ನು ನೋಡಬೇಕು ಇಂತು ಸಂಧಿಸಬೇಕು ಎನ್ನುವ ದ್ರಷ್ಟಾರ ಒಂದು ರೀತಿ ನೋಡುತ್ತಾನೆ, ನಾನು ಇನ್ನೊಂದು ರೀತಿ ನೋಡುತ್ತೇನೆ. ಅವನು ಮಾಡುವದೆಲ್ಲವು ನನ್ನ ದೃಷ್ಟಿಗೆ ವಕ್ರವಾಗಿ ಕಾಣುತ್ತದೆ. ಆಗ ನಾನು ಪಕ್ಷಪಾತಿ ಆಗಬೇಕು, ಆಗ ನಾನು ನ್ಯಾಯವಾಗಿ ಇರಬಲ್ಲೆ ಎಂದುಕೊಳ್ಳುತ್ತೇನೆ. ಮುಸಲ್ಮಾನರು ಹಿಂದೂ ಪಕ್ಷಪಾತಿಗಳಾಗಬೇಕು ಎಂದು ಪ್ರಾರ್ಥಿಸಬಯಸುತ್ತೇನೆ.

ಇನ್ನೊಂದು ಮಾತು ಹೇಳಲು ಶ್ರೀಮತಿ ನಾಯ್ಡು ನನಗೆ ಹೇಳಿದ್ದಾರೆ. ಅದು ಉದಾರವಾದಿಗಳ ಬಗ್ಗೆ. ಅವರು ಕೇಳುತ್ತಾರೆ; ಮಂದಗಾಮಿಗಳ ಬಗ್ಗೆ ಉದಾರವಾದಿಗಳ ಬಗ್ಗೆ (ಲಿಬರಲ್ಸ್) ಏನಾದರೂ ಹೇಳುತ್ತೀರಾ ಎಂದು. ಉದಾರವಾದಿಗಳು ನನಗೆ ಪೂಜ್ಯನೀಯರು ಎಂದು ಹೇಳುತ್ತೇನೆ. ಸ್ವರಾಜ್ಯವಾದಿಗಳು ಕಾಂಗ್ರೆಸ್ಸಿಗೆ ಬರಬೇಕು ಎನ್ನುವಂತೆಯೇ ಉದಾರ ವಾದಿಗಳೂ ಬರಬೇಕು ಎನ್ನುತ್ತೇನೆ. ಅವರ ಮುಂದೆ ನನ್ನ ಹೃದಯವನ್ನು ತೆರೆದಿಟ್ಟದ್ದೇನೆ.

'ಚರಕದ ಮುಂದೆ ಕುಳಿತು ನೂಲೋಣ ಎನ್ನುತ್ತೇನೆ. 'ಇಲ್ಲ, ಚರಕದ ಮುಂದೆ ಕುಳಿತು ನಾವು ನೂಲುವುದಿಲ್ಲ ಎನ್ನುತ್ತಾರೆ ಅವರು. 'ಅವರು ಹಾಗೆಂದರೆ ನಾನೇನು ಹೇಳಲಿ?, 'ಕಾಂಗ್ರೆಸ್ಸಿನೊಳಗೆ ಬನ್ನಿರಿ. ನನ್ನನ್ನು ಹೊರಗೆ ನೂಕಿಬಿಡಿರಿ ಎಂದು ಅವರಿಗೆ ಹೇಳುತ್ತೇನೆ.

ನಾನು ಮುಗಿಸಿದೆ. ದೇವರ ಸಾಕ್ಷಿಯಾಗಿ ಹೇಳಿ, "ನೀವು ಏನು ತೀರ್ಮಾನಿಸುತ್ತೀರೋ ಪ್ರಾಣಹೋದರೂ ಚಿಂತೆಯಿಲ್ಲ, ಅದನ್ನು ಮಾಡುತ್ತೇವೆ ಎಂದು.



ಮಹಾತ್ಮಾ ಗಾಂಧೀಜಿಯವರ **ಅಧ್ಯಕ್ಷೀಯ ಭಾಷಣ** (ಲಿಖಿತ ರೂಪ)

ಗೆಳೆಯರೇ,

ನನ್ನ ಹೆಗಲ ಮೇಲೆ ಗೌರವದ ಬಹಳ ದೊಡ್ಡಭಾರ ಹೊರಿಸಿದ್ದೀರಿ. ಇವತ್ತು ಈ ಭಾರವನ್ನು ಒಪ್ಪಿಕೊಳ್ಳುವ ಮೊದಲು ನಾನು ಬಹಳ ಮೀನ-ಮೇಷ ಎಣಿಸಿದೆ. ಈ ವರ್ಷದ ಈ ವಿಶಿಷ್ಟ ಗೌರವ ಶ್ರೀಮತಿ ಸರೋಜಿನಿ ನಾಯ್ಡುಗೆ ಹೋಗಬೇಕಾಗಿತ್ತು. ಕೆನ್ಯಾದಲ್ಲಿಯೂ, ದಕ್ಷಿಣ ಆಫ್ರಿಕಾದಲ್ಲಿಯೂ ಎಂಥ ಅದ್ಭುತ ಕೆಲಸ ಮಾಡಿದ್ದಾಳೆ ಆಕೆ! ಆದರೆ ಪರಿಸ್ಥಿತಿ ಹಾಗಾಗುವಂತಿರಲಿಲ್ಲ. ಆಂತರಿಕ ಪರಿಸ್ಥಿತಿಯೂ ಹೊರಗಿನ ಸನ್ನಿವೇಶವೂ ನಾನು ಈ ಭಾರವನ್ನು ಒಪ್ಪಿಕೊಳ್ಳುವಂತೆ ಮಾಡಿದೆ. ಈ ಉನ್ನತ ಸ್ಥಾನಕ್ಕೆ ತಕ್ಕರೀತಿಯಲ್ಲಿ ನಡೆದುಕೊಳ್ಳಲು ನಾನು ಮಾಡುವ ಪ್ರಯತ್ನಕ್ಕೆ ತಮ್ಮ ಬೆಂಬಲ ಇದೆ ಎಂದು ನನಗೆ ಗೊತ್ತು.

ಪ್ರಾರಂಭದಲ್ಲಿ, ಈ ವರ್ಷ ತೀರಿಕೊಂಡ ಸರ್ ಅಶುತೋಷ್ ಮುಖರ್ಜಿ, ಶ್ರೀ ಭೂಪೇಂದ್ರನಾಥ ಬಸು, ಡಾ. ಸುಬ್ರಹ್ಮಣ್ಯ ಐಯ್ಯರ್ ಮತ್ತು ಶ್ರೀ ದಾಲ್ಬಹದ್ದೂರ್ ಗಿರಿ ಇವರಿಗೆ ಹಾಗೂ ದಕ್ಷಿಣ ಆಫ್ರಿಕಾದಲ್ಲಿ ನಿಧನರಾದ ಸರ್ವಶ್ರೀ ರುಸ್ತುಮಜೀ ಮತ್ತು ಪಿ.ಕೆ. ನಾಯ್ಡು ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತೇನೆ ಮತ್ತು ಅವರ ಕುಟುಂಬ ವರ್ಗದವರಿಗೆ ನನ್ನ ಗೌರವಪೂರ್ಣ ಸಂತಾಪವನ್ನು ಸಲ್ಲಿಸಲು ಇಚ್ಛಿಸುತ್ತೇನೆ.

ಮುಖ್ಯವಾಗಿ ಕಾಂಗ್ರೆಸ್ 1920ರ ಸೆಪ್ಟೆಂಬರ್ ನಿಂದಲೂ ಆಂತರಿಕ ಶಕ್ತಿಯನ್ನು ಬೆಳೆಸಿಕೊಳ್ಳುತ್ತಾ ಬಂದ ಸಂಸ್ಥೆಯಾಗಿದೆ. ನಮಗೆ ಇರುವ ಕುಂದು ಕೊರತೆಗಳನ್ನು ಪರಿಹರಿಸುವಂತೆ ನಿರ್ಣಯಗಳನ್ನು ತೆಗೆದುಕೊಂಡು ಸರ್ಕಾರಕ್ಕೆ ಸಲ್ಲಿಸುವ



ಮಹಾತ್ಮಾ ಗಾಂಧೀಜಿಯವರು ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷೀಯ ಭಾಷಣ ಮಾಡುತ್ತಿರುವುದು.

ಕೆಲಸವನ್ನು ಕೈ ಬಿಟ್ಟಿದೆ. ಈಗಿನ ಸರ್ಕಾರದ ನಡವಳಿಕೆಯಿಂದ ಏನಾದರೂ ಲಾಭವಾದೀತು ಎಂಬ ನಂಬಿಕೆ ಹೋಗಿರುವುದೇ ಇದಕ್ಕೆ ಮುಖ್ಯ ಕಾರಣ. ಮುಸಲ್ಮಾನರ ವಿಷಯದಲ್ಲಿ ಸರ್ಕಾರ ತೋರಿದ ವಿಶ್ವಾಸಭಂಗವೇ ಸರ್ಕಾರದ ಬಗ್ಗೆ ನಂಬಿಕೆ ಹೋಗುವಂತೆ ಮಾಡಿದ ಕಟು ಪ್ರಸಂಗವಾಗಿದೆ. ರೌಲೆಟ್ ಶಾಸನ ಮತ್ತು ಬ್ರಿಗೇಡಿಯರ್ ರೆಜಿನಾಲ್ಡ್ ಮೈಕಲ್-ಓ-ಡಯರ್ ನಡೆಸಿದ ಜಲಿಯನ್ ವಾಲಾಬಾಗ್ ಹತ್ಯಾಕಾಂಡವು ಈ ವ್ಯವಸ್ಥೆಯ ನಿಜರೂಪ ಏನು ಎಂಬುದನ್ನು ಜನರು ತಿಳಿದುಕೊಳ್ಳುವಂತೆ ಮಾಡಿವೆ. ಈ ಆಡಳಿತ ವ್ಯವಸ್ಥೆ ನಡೆಯಲು ಕಾರಣ, ತಿಳಿದೋ ತಿಳಿಯದೆಯೋ, ಇಷ್ಟಪಟ್ಟೋ ಅಥವಾ ಬಲಾತ್ಕಾರವಾಗಿಯೋ ನಮ್ಮ ಜನರು ಸರಕಾರಕ್ಕೆ ಕೊಡುತ್ತಿರುವ ಸಹಕಾರವೇ ಎಂಬುದು ಕೂಡ ಅರ್ಥವಾಗಿದೆ. ಈ ವ್ಯವಸ್ಥೆಯನ್ನು ತಿದ್ದಬೇಕೋ ಅಥವಾ ನಾಶಮಾಡಬೇಕೋ ಎಂಬ ನಿಟ್ಟಿನಲ್ಲಿ ಈ ಸ್ವಯಂ ಸಹಕಾರಕ್ಕೆ ಮೇಲ್ಮಟ್ಟದಿಂದ ಅಂದರೆ ಶಾಸನಸಭೆಯಿಂದ ಮೊದಲು ನಿರಾಕರಿಸುತ್ತ ಬರಬೇಕು ಎಂದು ತೀರ್ಮಾನವಾಯಿತು.

ಕೊಲ್ಕತ್ತೆಯ ವಿಶೇಷ ಅಧಿವೇಶನ 1920ರಲ್ಲಿ ನಡೆದಾಗ, ಸರಕಾರ ಕೊಟ್ಟ ಮತ್ತು ಕೊಡುವ ಬಿರುದು (ಪ್ರಶಸ್ತಿ), ಸರಕಾರದ ನ್ಯಾಯಾಲಯ, ಸರಕಾರದ ಶಿಕ್ಷಣ ಸಂಸ್ಥೆ, ಶಾಸನಸಭೆಗಳು, ಪರದೇಶೀ ವಸ್ತ್ರ ಇವೇ ಮೊದಲಾದವನ್ನು ಬಹಿಷ್ಕರಿಸಬೇಕು ಎಂದು ತೀರ್ಮಾನವಾಯಿತು. ಈ ಬಹಿಷ್ಕಾರ ನಿರ್ಧಾರವನ್ನು ಯಾರು ಇಷ್ಟಪಡಲಿಲ್ಲವೋ, ಅಥವಾ ಅದನ್ನು ನಡೆಸಲು ಯಾರಿಗೆ ಸಾಧ್ಯವಿಲ್ಲವೋ ಅಂಥವರು ಕಾಂಗ್ರೆಸ್ಸಿನಿಂದ ಹೊರಗೆ ಹೋದರು. ಅಸಹಕಾರದ ಈ ಚಳವಳಿಯು ನಿರೀಕ್ಷಿಸಿದಷ್ಟು ಯಶಸ್ವಿಯಾಗಿ, ವ್ಯವಸ್ಥಿತವಾಗಿ ನಡೆಯಲಿಲ್ಲ. ಅದರ ವಿಮರ್ಶೆಗೆ ನಾನು ಈಗ ಹೋಗುವುದಿಲ್ಲ. ಯಾವ ಒಂದು ಬಹಿಷ್ಕಾರವು ಪೂರ್ಣ ಗತಿಯನ್ನು ಮುಟ್ಟದಿದ್ದರೂ, ನಾವು ಯಾವ ಸಂಸ್ಥೆಯನ್ನು ಬಹಿಷ್ಕರಿಸಿದೆವೋ ಆ ಸಂಸ್ಥೆಯ ಕೀರ್ತಿ ಪ್ರತಿಷ್ಠೆಗಳು ಖಂಡಿತವಾಗಿಯೂ ಮಣ್ಣುಪಾಲಾದವು.

ಎಲ್ಲದಕ್ಕಿಂತ ಮುಖ್ಯವಾದ ಬಹಿಷ್ಕಾರ ಹಿಂಸೆಯ ಬಹಿಷ್ಕಾರ. ಅಹಿಂಸೆ ಒಂದು ಸಲ ಪೂರ್ಣ ಯಶಸ್ವಿಯಾದಂತೆ ಕಂಡುಬಂದರೂ ಆ ಅಹಿಂಸೆಯು ಮೇಲು ಮೇಲಿನದು ಎಂದು ಶೀಘ್ರದಲ್ಲಿಯೇ ನಾವು ತಿಳಿಯುವಂತಾಯಿತು. ಅದು ಅಸಹಾಯಕತೆಯಿಂದ ಹುಟ್ಟಿದ ಕ್ರಿಯಾಶೂನ್ಯ ಅಹಿಂಸೆಯೇ ವಿನಃ ಸಮಯಸ್ಫೂರ್ತಿಯಿಂದ ಕೆಲಸಮಾಡುವ ವಿಚಾರಶೀಲ ಅಹಿಂಸೆ ಅದಾಗಿರಲಿಲ್ಲ. ಇದರಿಂದ ಏನಾಯಿತೆಂದರೆ ಯಾರು ಅಸಹಕಾರ ಮಾಡಲಿಲ್ಲವೋ ಅವರ ಬಗ್ಗೆ ಒಂದು ಅಸಹನೆಯ ಭಾವ ಚಿಮ್ಮಿಬಂತು. ಇದೂ ಸಹ ಒಂದು ಬಗೆಯ ಸೂಕ್ಷ್ಮ ಹಿಂಸೆ. ಇಷ್ಟೆಲ್ಲ ದೋಷಪೂರ್ಣವಾಗಿದ್ದರೂ ಹೊರಹೊಮ್ಮಬಹುದಾಗಿದ್ದ ದೈಹಿಕ ಹಿಂಸೆಯನ್ನು ಈ ಅಹಿಂಸಾ ಪ್ರಚಾರ ತಡೆಗಟ್ಟಿತು ಎಂದು ಧೈರ್ಯವಾಗಿ ಹೇಳುತ್ತೇನೆ. ಅಹಿಂಸಾತ್ಮಕ ಅಸಹಕಾರ ಹುಟ್ಟಿರದಿದ್ದರೆ ಖಂಡಿತವಾಗಿಯೂ ಶಾರೀರಿಕ ಹಿಂಸೆ ನಡೆದೇ ನಡೆಯುತ್ತಿತ್ತು. ಅಹಿಂಸಾತ್ಮಕ ಅಸಹಕಾರದಿಂದ ಜನರಿಗೆ ತಮ್ಮ ಅಂತಃಶಕ್ತಿಯ ಅರಿವು ಉಂಟಾಗಿದೆ ಎಂದು ವಿಚಾರಪೂರ್ವಕವಾಗಿ ನಾನು ಮನದಟ್ಟು ಮಾಡಿಕೊಂಡಿದ್ದೇನೆ. ಕಷ್ಟ ಸಹನೆಯಿಂದ ಜನತೆಯಲ್ಲಿ ಹುದುಗಿದ್ದ ಪ್ರತಿಭಟನಾಶಕ್ತಿಯು ಹೊರಹೊಮ್ಮಿದೆ. ಜನರು ಅಪಾರವಾಗಿ ಜಾಗೃತರಾಗಿದ್ದಾರೆ. ಬೇರೆ ಯಾವ ಪದ್ಧತಿಯಿಂದಲೂ ಇದು ಸಾಧ್ಯವಾಗುತ್ತಿರಲಿಲ್ಲ.

ಅಹಿಂಸಾತ್ಮಕ ಅಸಹಕಾರದಿಂದ ನಮಗೆ ಸ್ವರಾಜ್ಯ ಬರಲಿಲ್ಲ. ಕೆಲವು ವಿಷಾದಕರ ಘಟನೆಗಳು ನಡೆದು ಹೋದವು. ಯಾವ ಸಂಸ್ಥೆಗಳನ್ನು ನಾವು ಬಹಿಷ್ಕರಿಸಬೇಕು ಎಂದುಕೊಂಡೆವೋ ಅವು ಇನ್ನೂ ಮುಂದುವರಿಯತ್ತಲೇ ಇವೆ. ಆದರೂ ನನ್ನ ವಿನಯಪೂರ್ವಕ ಅಭಿಪ್ರಾಯ ಇಷ್ಟು-ರಾಜಕೀಯ ಸ್ವಾತಂತ್ರ್ಯ ವನ್ನು ಸಂಪಾದಿಸಲು ಅಹಿಂಸಾತ್ಮಕ ಅಸಹಕಾರ ಒಂದು ಸಾಧನ ಎಂಬ ಮಾತು ಸ್ಥಿರವಾಗಿ ನಿಂತುಹೋಯಿತು. ಆಂಶಿಕವಾಗಿ ಅದು ಸಫಲವಾಗಿದ್ದರೂ ಅದರಿಂದ ನಾವು ಸ್ವರಾಜ್ಯದ ಹತ್ತಿರ ಹತ್ತಿರ ಬಂದಿದ್ದೇವೆ. ಯಾವ ಧ್ಯೇಯಕ್ಕಾಗಿ ನಾವು ಕಷ್ಟ ಸಹಿಸಲು ಶಕ್ತರಾಗುತ್ತೇವೆಯೋ ಆ ಶಕ್ತಿಯು ಆ ಧ್ಯೇಯವನ್ನು ಸಾಧಿಸಬಲ್ಲದು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ರುಖ್ ಜಾವ

ಆದರೆ ಇಲ್ಲಿ ನಾವು ನಿಲ್ಲಬೇಕು, ನಮ್ಮನ್ನು ನಾವು ಎದುರು-ಬದರು ನಿಲ್ಲಿಸಿಕೊಳ್ಳಬೇಕು ಎಂಬ ಒಂದು ಸನ್ನಿವೇಶ ನಮ್ಮ ಎದುರಿಗೆ ಬಂದು ನಿಂತಿದೆ. ಜನರು ಬಹಳ ದೃಢವಾಗಿ ಅಹಿಂಸೆಯನ್ನು ನಂಬಿರಬಹುದು. ಆದರೆ ಈ ಚಳವಳಿಗೆ ಸಂಬಂಧಿಸಿದ ಬಹುಜನರು, ವಿದೇಶಿ ವಸ್ತ್ರ ಬಹಿಷ್ಕಾರ ಒಂದನ್ನು ಬಿಟ್ಟು, ಉಳಿದವುಗಳಲ್ಲಿ ನಂಬಿಕೆ ಕಳೆದುಕೊಂಡಿದ್ದಾರೆ.

ವಕೀಲರನೇಕರು ತಮ್ಮ ವೃತ್ತಿಯನ್ನು ಮತ್ತೆ ಆರಂಭಿಸಿದ್ದಾರೆ. ಕೆಲವರಿಗಂತೂ ನಾವು ಏಕೆ ಬಿಟ್ಟೆವೋ ಎಂದು ಪಶ್ಚಾತ್ತಾಪವು ಆಗಿದೆ. ಶಾಸನಸಭೆಗಳನ್ನು ಬಹಿಷ್ಕರಿಸಿದ್ದ ಅನೇಕರು ಮತ್ತೆ ಸಭೆಗಳಿಗೆ ಹೋಗಿದ್ದಾರೆ. ಶಾಸನಸಭೆಯನ್ನು ನಂಬುವ ಜನರ ಸಂಖ್ಯೆ ಹೆಚ್ಚುತ್ತಿದೆ. ಸರಕಾರಿ ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿದ್ದ ನೂರಾರು ಹುಡುಗರೂ ಹುಡುಗಿಯರೂ ಪಶ್ಚಾತ್ತಾಪಗೊಂಡು ಪುನಃ ಮರಳಿದ್ದಾರೆ. ತಮಗೆ ಪ್ರವೇಶ ಬೇಕು ಎಂದು ಹೇಳುವವರ ಸಂಖ್ಯೆ ಹೆಚ್ಚಿದ್ದು, ಸರಕಾರಿ ಶಾಲಾ ಕಾಲೇಜುಗಳಲ್ಲಿ ಸ್ಥಳ ಒದಗಿಸುವುದು ಕಷ್ಟವಾಗಿದೆ ಎಂದು ನಾನು ಕೇಳಿದ್ದೇನೆ. ಇಂಥ ಪರಿಸ್ಥಿತಿಯಲ್ಲಿ ಈ ಬಹಿಷ್ಕಾರಗಳಿಂದ ಯಾವ ಯಾವ ಜನರು ನೇರವಾಗಿ ಹಾನಿಗೆ ಒಳಗಾಗಿದ್ದಾರೆಯೋ ಅಂಥವರನ್ನು ಬಿಟ್ಟು ಕೂಡ ಕಾಂಗ್ರೆಸ್ಸಿಗರು ಈ ಬಹಿಷ್ಕಾರಗಳನ್ನು ಮುಂದುವರಿಸಲು ಸಿದ್ಧರಾಗದಿದ್ದರೆ ಇವುಗಳನ್ನು, ರಾಷ್ಟ್ರೀಯ ಕಾರ್ಯಕ್ರಮಗಳ ಅಂಗವಾಗಿ ನಡೆಸುವುದು ಸಾಧ್ಯವಾಗಲಾರದು. ಆದರೆ ಇಂಥಾ ಜನರನ್ನು ಕಾಂಗ್ರೆಸ್ಸಿನಿಂದ ಹೊರಗಿಡುವುದು ಕೂಡ ವ್ಯಾವಹಾರಿಕವಾಗಿ ಸುಲಭವಲ್ಲ. ಅಪರಿವರ್ತನ ವಾದಿಗಳನ್ನು ಹೊರಗೆ ಓಡಿಸಬೇಕು ಎಂಬುದು ಎಷ್ಟು ಅವ್ಯವಹಾರವೋ ಇದೂ ಅಷ್ಟೇ. ಇಬ್ಬರೂ ಕಾಂಗ್ರೆಸ್ಸಿನೊಳಗೇ ಇರಬೇಕು. ಪರಸ್ಪರ ಹಸ್ತಕ್ಷೇಪ ಮಾಡಬಾರದು. ಪರಸ್ಪರ ವಿರುದ್ಧವಾಗಿ ವೈರ ತುಂಬಿ ಟೀಕೆ ಮಾಡಬಾರದು. ಹಿಂದೂ-ಮುಸ್ಲಿಂ ಏಕತೆಗೆ ಯಾವುದು ಅನ್ವಯಿಸುತ್ತದೆಯೋ ಅದೇ ಭಿನ್ನ ಭಿನ್ನ ರಾಜಕೀಯ ಪಕ್ಷಗಳಿಗೂ ಅನ್ವಯಿಸುತ್ತದೆ ಎಂದು ನನ್ನ ಭಾವನೆ. ನಾವು ಪರಸ್ಪರ ಸಹನೆಯಿಂದ ಇರಬೇಕು. ಕಾಲಕ್ರಮೇಣ, ಒಬ್ಬರು ತಮ್ಮ ವಿರುದ್ಧವಾದ ಇನ್ನೊಂದು ಮತಕ್ಕೆ ಪರಿವರ್ತನೆ ಹೊಂದಬಹುದೆಂದು ನಾವು ನಂಬೋಣ.

ಇಷ್ಟೇ ಅಲ್ಲ, ಇನ್ನೂ ಮುಂದೆ ಹೋಗಿ ಕಾಂಗ್ರೆಸ್ಸನ್ನು ಬಿಟ್ಟಿರುವ ಉದಾರ ಮತವಾದಿಗಳನ್ನೂ ಇತರರನ್ನೂ ಮತ್ತೆ ಕಾಂಗ್ರೆಸ್ಸಿಗೆ ಸೇರುವಂತೆ



ಮಹಾತ್ಮಾ ಗಾಂಧೀಜಿಯವರು ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ
ಕಾಂಗ್ರೆಸ್ ಸ್ವಯಂಸೇವಕರ ಸೇವೆಯನ್ನು ಗುರುತಿಸಿ ಗೌರವಿಸುತ್ತಿರುವುದು.

ಪ್ರಾರ್ಥಿಸಬೇಕು. ಅಸಹಕಾರವನ್ನು ಸದ್ಯಕ್ಕೆ ನಿಲ್ಲಿಸಿದರೆ, ಅವರು ಹೊರಗೆ ಇರಲು ಯಾವ ಕಾರಣವೂ ಇಲ್ಲ. ಈ ಕೆಲಸದಲ್ಲಿ ಕಾಂಗ್ರೆಸ್ಸಿಗರೇ ಮೊದಲು ಹೆಜ್ಜೆ ಹಾಕಬೇಕು. ಅವರನ್ನು ಸ್ನೇಹಪೂರ್ಣವಾಗಿ ಆಹ್ವಾನಿಸಿ ಅವರು ಒಳಕ್ಕೆ ಬರಲು ಸುಲಭವಾಗುವಂತೆ ಮಾಡಬೇಕು. ಈಗ ನಿಮಗೆ ಅರ್ಥವಾಗಬಹುದು ಸ್ವರಾಜ್ಯ ಪಕ್ಷದವರೊಂದಿಗೆ ನಾನು ಏಕೆ ಒಪ್ಪಂದ ಮಾಡಿಕೊಂಡೆನು ಎಂಬುದು.


ವಿದೇಶಿ ವಸ್ತ್ರ ಬಹಿಷ್ಕಾರ

ನೀವು ಗಮನಿಸುವಂತೆ ಒಂದು ಬಹಿಷ್ಕಾರವನ್ನು ಉಳಿಸಿಕೊಳ್ಳಲಾಗಿದೆ. ಒಬ್ಬ ಇಂಗ್ಲಿಷ್ ಸ್ನೇಹಿತನ ಭಾವನೆಗಳಿಗೆ ಗೌರವ ತೋರಿ, ಒಪ್ಪಂದದಲ್ಲಿ 'ಬಹಿಷ್ಕಾರ' ಎನ್ನುವ ಪದವನ್ನು 'ವಿದೇಶಿ ಬಟ್ಟೆಗಳ ಬಳಕೆಯ ನಿರಾಕರಣೆ' ಎಂದು ಬದಲಾಯಿಸಲಾಗಿದೆ. 'ಬಹಿಷ್ಕಾರ' ಎನ್ನುವ ಪದದ ಬಗ್ಗೆ ಖಂಡಿತವಾಗಿಯೂ ಕೆಟ್ಟ ಭಾವನೆ ಇದೆ. ಇದು ಸಾಮಾನ್ಯವಾಗಿ ದ್ವೇಷವನ್ನು ಸೂಚಿಸುತ್ತದೆ. ಈ ಪದವು ಅಂತಹ ಯಾವುದೇ ಅರ್ಥವನ್ನು ಹೊಂದಬೇಕೆಂದು ನಾನು ಉದ್ದೇಶಿಸಿರಲಿಲ್ಲ. ಈ ಬಹಿಷ್ಕಾರವು ಬ್ರಿಟಿಷರಿಗಲ್ಲ ಬದಲಾಗಿ ವಿದೇಶಿ ಬಟ್ಟೆಗಳಿಗೆ ಸಂಬಂಧಿಸಿದೆ. ಈ ಬಹಿಷ್ಕಾರವು ಕೇವಲ ಹಕ್ಕಷ್ಟೇ ಅಲ್ಲ, ಅದು ಒಂದು ಕರ್ತವ್ಯವೂ ಹೌದು. ನಮ್ಮ ದೇಶದ ನದಿಗಳ ನೀರಿಗೆ ಬದಲಾಗಿ ವಿದೇಶಿ ನೀರನ್ನು ಆಮದು ಮಾಡಿಕೊಂಡರೆ ಅದರ ಬಹಿಷ್ಕಾರ ಹೇಗೆ ಕರ್ತವ್ಯವೋ ಹಾಗೆಯೇ ಇದೂ ಕೂಡ. ಆದರೆ, ಇದು ವಿಷಯಾಂತರವಾಗಿದೆ.

ನಾನು ಹೇಳಲು ಬಯಸಿದ್ದೇನೆಂದರೆ, ಈ ಒಪ್ಪಂದವು ವಿದೇಶಿ ಬಟ್ಟೆಗಳ ಬಹಿಷ್ಕಾರವನ್ನು ಮುಂದುವರಿಸಿ, ಅದರ ಅಗತ್ಯತೆಯನ್ನು ಒತ್ತಿಹೇಳುತ್ತದೆ. ನನಗೆ ಇದು ಹಿಂಸಾತ್ಮಕ ವಿಧಾನಗಳಿಗೆ ಒಂದು ಪರಿಣಾಮಕಾರಿ ಪರ್ಯಾಯವಾಗಿದೆ. ವೈಯಕ್ತಿಕ ನಿಂದನೆ, ಕಿರಿಕಿರಿ ಮಾಡುವ ನಡವಳಿಕೆ, ಸುಳ್ಳು ಹೇಳುವುದು, ನೋವುಂಟುಮಾಡುವುದು ಮತ್ತು ಕೊಲೆ ಮುಂತಾದ ಕೆಲವು ಕ್ರಿಯೆಗಳು ಹಿಂಸೆಯ ಸಂಕೇತಗಳಾಗಿರುವಂತೆ, ಅದೇ ರೀತಿ ಸೌಜನ್ಯ, ನಯ-ವಿನಯ, ಯಾರಿಗೂ ನೋವು ಕೊಡದ ನಡವಳಿಕೆ, ಸತ್ಯಸಂಧತೆ ಇತ್ಯಾದಿಗಳು ಅಹಿಂಸೆಯ ಸಂಕೇತಗಳಾಗಿವೆ.

ಹಾಗೆಯೇ ನನಗೆ ವಿದೇಶಿ ಬಟ್ಟೆಗಳ ಬಹಿಷ್ಕಾರವೂ ಅಹಿಂಸೆಯ ಸಂಕೇತವಾಗಿದೆ. ಕ್ರಾಂತಿಕಾರಿ ಅಪರಾಧವು ಒತ್ತಡವನ್ನು ಹೇರಲು ಉದ್ದೇಶದಿಂದ ಮಾಡಲಾಗುತ್ತದೆ. ಆದರೆ ಅದು ಕೋಪ ಮತ್ತು ದ್ವೇಷದ ಹುಚ್ಚುತನದ ಒತ್ತಡವಾಗಿದೆ. ಅಹಿಂಸಾತ್ಮಕ ಕ್ರಿಯೆಗಳು ಹಿಂಸಾತ್ಮಕ ಕ್ರಿಯೆಗಳಿಗಿಂತ ಹೆಚ್ಚು ಪರಿಣಾಮಕಾರಿ ಒತ್ತಡವನ್ನು ಹೇರುತ್ತವೆ ಎಂದು ನಾನು ವಾದಿಸುತ್ತೇನೆ, ಏಕೆಂದರೆ ಆ ಒತ್ತಡವು ಸದ್ಭಾವನೆ ಮತ್ತು ಸೌಮ್ಯತೆಯಿಂದ ಬರುತ್ತದೆ. ವಿದೇಶಿ ಬಟ್ಟೆಗಳ ಬಹಿಷ್ಕಾರವು ಅಂತಹ ಒತ್ತಡವನ್ನು ಹೇರುತ್ತದೆ. ನಾವು ಲ್ಯಾಂಕಾಶೈರ್‌ನಿಂದ ಅತಿ ಹೆಚ್ಚು ಪ್ರಮಾಣದ ವಿದೇಶಿ ಬಟ್ಟೆಯನ್ನು ಆಮದು ಮಾಡಿಕೊಳ್ಳುತ್ತೇವೆ. ಇದು ನಮ್ಮ ಎಲ್ಲ ಆಮದುಗಳಲ್ಲಿ ಅತ್ಯಂತ ದೊಡ್ಡದಾಗಿದೆ, ಸಕ್ಕರೆ ಎರಡನೇ ಸ್ಥಾನದಲ್ಲಿದೆ. ಬ್ರಿಟನ್ನ ಮುಖ್ಯ ಆಸಕ್ತಿಯು ಭಾರತದೊಂದಿಗಿನ ಲ್ಯಾಂಕಾಶೈರ್ ವ್ಯಾಪಾರದ ಸುತ್ತ ಕೇಂದ್ರೀಕೃತವಾಗಿದೆ. ಇದು ಭಾರತೀಯ ರೈತರನ್ನು ನಾಶಮಾಡಿ, ಅವರಿಗಿದ್ದ ಒಂದೇ ಪೂರಕ ಉದ್ಯೋಗವನ್ನು ಕಸಿದುಕೊಂಡು ಅವರನ್ನು ಸೋಮಾರಿಗಳನ್ನಾಗಿ ಮಾಡುತ್ತಿದೆ. ಆದ್ದರಿಂದ ರೈತರು ಬದುಕಬೇಕಾದರೆ ವಿದೇಶಿ ಬಟ್ಟೆಗಳ ಬಹಿಷ್ಕಾರ ಅನಿವಾರ್ಯವಾಗಿದೆ. ಈ ಕಾರ್ಯಕ್ರಮಕ್ಕೆ ಕೇವಲ ರೈತರಿಗೆ ಅಗ್ಗದ ಮತ್ತು ಚೆನ್ನಾಗಿ ಕಾಣುವ ವಿದೇಶಿ ಬಟ್ಟೆಯನ್ನು ಖರೀದಿಸದಂತೆ ಪ್ರೇರೇಪಿಸುವುದಷ್ಟೇ ಅಲ್ಲ, ಅವರ ಬಿಡುವಿನ ಸಮಯದಲ್ಲಿ ಅರಳೆಯನ್ನು ಹಿಂಜಿ, ನೂಲುವುದನ್ನು ಕಲಿಸಿ, ಅದನ್ನು ಗ್ರಾಮದ ನೇಕಾರರಿಂದ ನೇಯ್ದು ಖಾದಿಯನ್ನು ತಯಾರಿಸಿ ಧರಿಸುವಂತೆ ಮಾಡುವುದರ ಮೂಲಕ ವಿದೇಶಿ ಮತ್ತು ಭಾರತೀಯ ಮಿಲ್ಲುಗಳಲ್ಲಿ ತಯಾರಾದ ಬಟ್ಟೆಯನ್ನು ಖರೀದಿಸಲು ಆಗುವ ವೆಚ್ಚವನ್ನು ಉಳಿಸುವುದೂ ಆಗಿದೆ.

ಹೀಗೆ ಕೈನೂಲು ಮತ್ತು ಕೈನೇಯ್ಗೆಯ ಮೂಲಕ ವಿದೇಶಿ ಬಟ್ಟೆಗಳ ಬಹಿಷ್ಕಾರ, ಅಂದರೆ ಖಾದಿ ಬಟ್ಟೆಯನ್ನು ಸಿದ್ಧಪಡಿಸುವ ಮೂಲಕ ರೈತರ ಹಣವನ್ನು ಉಳಿಸುವುದಷ್ಟೇ ಅಲ್ಲದೆ, ನಮ್ಮ ಕಾರ್ಯಕರ್ತರಿಗೆ ಸಮಾಜಕ್ಕೆ ಅತ್ಯುತ್ತಮ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇದು ನಮ್ಮನ್ನು ನೇರವಾಗಿ ಗ್ರಾಮಸ್ಥರೊಂದಿಗೆ ಸಂಪರ್ಕದಲ್ಲಿರಿಸುತ್ತದೆ. ಅವರಿಗೆ ನಿಜವಾದ



ರಾಜಕೀಯ ಶಿಕ್ಷಣ ನೀಡಲು ಮತ್ತು ಸ್ವಾವಲಂಬಿಗಳಾಗಿ, ಸ್ವಾಶ್ರಯಿಗಳಾಗಿ ಮಾರ್ಪಡಲು ಸಹಾಯ ಮಾಡುತ್ತದೆ. ಖಾದಿಯ ಸಂಘಟನೆಯು ಹೀಗೆ ಸಹಕಾರಿ ಸಂಘಗಳು ಅಥವಾ ಇತರ ಯಾವುದೇ ಗ್ರಾಮೀಣ ಸಂಘಟನೆಗಿಂತ ಎಷ್ಟೋ ಪಾಲು ಉತ್ತಮವಾಗಲಿವೆ. ಇದು ಅತ್ಯಂತ ಮಹತ್ವದ ರಾಜಕೀಯ ಪರಿಣಾಮಗಳನ್ನು ಹೊಂದಿದೆ, ಏಕೆಂದರೆ ಇದು ಬ್ರಿಟನ್ಗೆ ಇರುವ ದುರಾಶೆಯನ್ನು ಕಳೆಯುತ್ತದೆ. ನಾನು ಲ್ಯಾಂಕಾಶೈರ್ನ ಈ ವ್ಯಾಪಾರವನ್ನು ಅನೈತಿಕವೆಂದು ಕರೆಯುತ್ತೇನೆ, ಏಕೆಂದರೆ ಇದು ಲಕ್ಷಾಂತರ ಭಾರತೀಯ ರೈತರ ನಾಶದ ಮೇಲೆ ನಿರ್ಮಿಸಲ್ಪಟ್ಟು , ನಿರ್ವಹಿಸಲ್ಪಡುತ್ತಿದೆ. ಒಂದು ಅನೈತಿಕತೆಯು ಮತ್ತೊಂದಕ್ಕೆ ದಾರಿ ಮಾಡಿಕೊಡುವಂತೆ, ಬ್ರಿಟನ್ನು ಎಷ್ಟೋ ಅನೀತಿಯ ಕೃತ್ಯಗಳನ್ನು ಮಾಡಿದೆ. ಅವುಗಳು ರುಜುವಾತುಗಳಾಗಿವೆ ಕೂಡ. ಅದರೆ ಅವೆಲ್ಲವೂ ಈ ಒಂದು ಅನೈತಿಕ ವ್ಯಾಪಾರದಿಂದಲೇ ಹುಟ್ಟಿದವು. ಆದ್ದರಿಂದ ಭಾರತದ ಸ್ವಯಂಪ್ರೇರಿತ ಪ್ರಯತ್ನದಿಂದ ಬ್ರಿಟನ್ನ ದಾರಿಯಿಂದ ಈ ಒಂದು ದೊಡ್ಡ ಪ್ರಲೋಭನೆ ಅಳಿದು ಹೋದರೆ, ಅದು ಭಾರತಕ್ಕೆ ಒಳ್ಳೆಯದು, ಬ್ರಿಟನ್ನೂಗ್ಗೆ ಒಳ್ಳೆಯದು. ಮತ್ತು ಬ್ರಿಟನ್ ಇಂದು ಪ್ರಬಲ ಜಾಗತಿಕ ಶಕ್ತಿಯಾಗಿರುವುದರಿಂದ, ಮಾನವಕುಲಕ್ಕೂ ಒಳ್ಳೆಯದು.

ಬೇಡಿಕೆಯನ್ನು ಅನುಸರಿಸಿ ಪೂರೈಕೆ ಸೃಷ್ಟಿಯಾಗುತ್ತದೆ ಎಂಬ ಪ್ರತಿಪಾದನೆಯನ್ನು ನಾನು ಒಪ್ಪುವುದಿಲ್ಲ. ಎಷ್ಟೋ ಸಲ ತದ್ವಿರುದ್ಧವಾಗಿ ನೈತಿಕತೆ ಇಲ್ಲದ ಮಾರಾಟಗಾರರು ಕೃತಕವಾಗಿ ಬೇಡಿಕೆಯನ್ನು ಸೃಷ್ಟಿಸುತ್ತಾರೆ. ವ್ಯಕ್ತಿಗಳಂತೆಯೇ ಒಂದು ರಾಷ್ಟ್ರವು ನೈತಿಕ ನಡವಳಿಕೆಯ ನಿಯಮಾವಳಿಯನ್ನು ಪಾಲಿಸಲು ಬದ್ಧವಾಗಿದೆ ಎಂದು ನಾನು ಭಾವಿಸುತ್ತೇನೆ. ಹೀಗಾಗಿ ಅದು ತನ್ನ ಪೂರೈಕೆ ಬಯಸುವವರ ಕಲ್ಯಾಣವನ್ನು ಪರಿಗಣಿಸಬೇಕು. ಉದಾಹರಣೆಗೆ, ಮದ್ಯಪಾನದ ದಾಸರಾಗಿರುವವರಿಗೆ ಹೆಂಡವನ್ನು ಪೂರೈಸುವುದು ಅಪರಾಧ ಮತ್ತು ಅನೈತಿಕವಾಗಿದೆ.

ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರಕ್ಕೆ ಆಹಾರಧಾನ್ಯವನ್ನೂ, ಬಟ್ಟೆಯನ್ನೂ



ಬೆಳಗಾವಿಯಲ್ಲಿ ಮಹಮ್ಮದ್ ಅಲಿ ಅವರು ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ಗಾಂಧೀಜಿ ಅವರಿಗೆ ಹಸ್ತಾಂತರಿಸುತ್ತಿರುವುದು

ನಿರ್ಯಾತ ಮಾಡುವದರಿಂದ, ಆಯಾತ ಮಾಡಿಕೊಳ್ಳುವ ರಾಷ್ಟ್ರದಲ್ಲಿ ಧಾನ್ಯ ಮತ್ತು ಬಟ್ಟೆಯ ಉತ್ಪಾದನೆ ನಿಂತು ಜನರು ಸೋಮಾರಿಗಳೂ ಬಡವರೂ ಆದರೆ, ಈ ಆಹಾರ ಧಾನ್ಯ ಹಾಗೂ ಬಟ್ಟೆಯ ನಿರ್ಯಾತ ಮಾಡುವುದು, ಹೆಂಡದ ನಿರ್ಯಾತದಷ್ಟೇ ಅಪರಾಧ. ಈ ಬಗೆಯ ಒತ್ತಾಯ ಸೋಮಾರಿತನ, ಬಡತನ ಮನುಷ್ಯನ ಆತ್ಮಕ್ಕೂ ದೇಹಕ್ಕೂ ಹೆಂಡದಷ್ಟೇ ಹಾನಿಕರ. ಮನಸ್ಸಿನ ಹತಾಶಾಭಾವವು, ತಿರುವುಮುರುವು ಆದ ಉದ್ವೇಗವೇ ಆಗಿದೆ. ಆದ್ದರಿಂದ ಅದರ ಪರಿಣಾಮ ಕೂಡ ಅಷ್ಟೇ ಹಾನಿಕರ, ಕೆಲವು ವೇಳೆ ಇದು ಇನ್ನೂ ಹೆಚ್ಚು ಹಾನಿಕರ, ಏಕೆಂದರೆ ಈ ಸೋಮಾರಿತನ ಮತ್ತು ಬಡತನದಿಂದ ಉಂಟಾಗುವ ಹತಾಶಾಭಾವವು ಅನೈತಿಕ, ಪಾಪ ಎಂಬುದು ನಮಗಿನ್ನೂ ತಿಳಿದಿಲ್ಲ.

ಬ್ರಿಟನ್ನಿನ ಕರ್ತವ್ಯ

ಆದ್ದರಿಂದ ಬ್ರಿಟನ್ನ ಕ್ಷೇಮವನ್ನು ಗಮನದಲ್ಲಿಟ್ಟುಕೊಂಡು ತನ್ನ ಆಮದುಗಳನ್ನು ನಿಯಂತ್ರಿಸುವಂತೆ, ಗ್ರೇಟ್ ಬ್ರಿಟನ್ ಕೂಡ ಭಾರತದ ಕ್ಷೇಮವನ್ನು ಗಮನದಲ್ಲಿಟ್ಟುಕೊಂಡು ತನ್ನ ರಫ್ತುಗಳನ್ನು ನಿಯಂತ್ರಿಸುವುದು ಕರ್ತವ್ಯವೆಂದು ನಾನು ಭಾವಿಸುತ್ತೇನೆ. ನೈತಿಕ ಮೌಲ್ಯಗಳನ್ನು ನಿರ್ಲಕ್ಷಿಸುವ ಅಥವಾ ಕಡೆಗಣಿಸುವ ಆರ್ಥಿಕತೆಯು ಸತ್ಯಕ್ಕೆ ದೂರವಾಗಿರುತ್ತದೆ. ಆರ್ಥಿಕತೆಯ ಕ್ಷೇತ್ರದಲ್ಲಿ ಅಹಿಂಸೆಯ, ನೈತಿಕತೆಯ ವಿಸ್ತರಣೆ ಎಂದರೆ ಅಂತರರಾಷ್ಟ್ರೀಯ ವಾಣಿಜ್ಯವನ್ನು ನಿಯಂತ್ರಿಸುವಲ್ಲಿ ಪರಿಗಣಿಸಬೇಕಾದ ಅಂಶವಾಗಿ ನೈತಿಕ ಮೌಲ್ಯಗಳನ್ನು ಪರಿಚಯ ಮಾಡುವುದಾಗಿದೆ. ಭಾರತದ ಪ್ರಯತ್ನಗಳ ಮೂಲಕ ಅಂತರರಾಷ್ಟ್ರೀಯ ಸಂಬಂಧಗಳನ್ನು ನೈತಿಕತೆಯ ಆಧಾರದ ಮೇಲೆ ನಿಲ್ಲಿಸುವುದೇ ನನಗಿರುವ ಮಹತ್ವಾಕಾಂಕ್ಷೆ. ಸೀಮಿತ ಸಾಮೂಹಿಕ ಅಹಿಂಸೆಯ ಬೆಳವಣಿಗೆಯ ಬಗ್ಗೆ ನಾನು ನಿರಾಶೆಗೊಳ್ಳುವುದಿಲ್ಲ. ಮಾನವ ಸ್ವಭಾವದ ಪ್ರವೃತ್ತಿ ಯಾವಾಗಲೂ ಕೆಳಮುಖವಾಗಿರುತ್ತದೆ ಎಂದು ನಂಬಲು ನಾನು ನಿರಾಕರಿಸುತ್ತೇನೆ.

ನೂಲುವುದರಿಂದ ಮತ್ತು ಖಾದಿಯ ಮೂಲಕ ವಿದೇಶಿ ಬಟ್ಟೆಗಳ ಬಹಿಷ್ಕಾರದ ಫಲಿತಾಂಶವು ಕೇವಲ ಪ್ರಥಮ ದರ್ಜೆಯ ರಾಜಕೀಯ ಫಲಿತಾಂಶವನ್ನು ತರುವುದಷ್ಟೇ ಅಲ್ಲ, ಭಾರತದ ಅತ್ಯಂತ ಬಡವರಲ್ಲಿ, ಅವರು ಪುರುಷರಾಗಿರಲಿ ಅಥವಾ ಮಹಿಳೆಯರಾಗಿರಲಿ, ಅವರಿಗೆ ತಮ್ಮ ಶಕ್ತಿಯ ಬಗ್ಗೆ ಅರಿವು ಮೂಡಿಸಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಕೂಡ ಇದರ ಹಿಂದಿನ ಉದ್ದೇಶವಾಗಿದೆ. ಬ್ರಿಟನ್ ವಸ್ತ್ರ ಬಹಿಷ್ಕಾರದ ಅಥವಾ ವಸ್ತು ಬಹಿಷ್ಕಾರದ ಹಿಂಸಾತ್ಮಕ ಸ್ವಭಾವವನ್ನೂ ಅದರ ವ್ಯರ್ಥತೆಯನ್ನೂ ತೋರಿಸುವ ಅಗತ್ಯ ಈಗ ಬಹಳಮಟ್ಟಿಗೆ ಇಲ್ಲ.

ವಿದೇಶಿ ವರ್ಸಸ್ ಬ್ರಿಟಿಷ್

ಅನೇಕ ದೇಶಭಕ್ತರು ಸೂಚಿಸಿದಂತೆ, ಭಾರತದ ಕಲ್ಯಾಣ ದೃಷ್ಟಿಯಿಂದ ಮಾತ್ರ ನಾನು ಈ ಬಹಿಷ್ಕಾರವನ್ನು ನೋಡುತ್ತಿದ್ದೇನೆ. ಬ್ರಿಟಿಷ್ ವಸ್ತುಗಳೆಲ್ಲವೂ ನಮಗೆ ಬಾಧಕವಲ್ಲ. ಉದಾಹರಣೆಗೆ, ಇಂಗ್ಲಿಷ್ ಪುಸ್ತಕಗಳಿಂದ ನಮ್ಮ ಬೌದ್ಧಿಕ, ಆಧ್ಯಾತ್ಮಿಕ ಲಾಭವೇ ಆಗುತ್ತದೆ. ಬಟ್ಟೆಯ ವಿಷಯದಲ್ಲಿ ಕೇವಲ ಬ್ರಿಟಿಷ್ ಬಟ್ಟೆ ಮಾತ್ರವಲ್ಲ, ಎಲ್ಲ ವಿದೇಶಿ ಬಟ್ಟೆಯೂ ನಮಗೆ ಬಾಧಕವೇ. ಹಾಗೆ ನೋಡಿದರೆ ಸ್ವಲ್ಪ ಕಡಿಮೆಯ ಪ್ರಮಾಣದಲ್ಲಿ ನಮ್ಮ ಗಿರಣಿಬಟ್ಟೆಯೂ ನಮಗೆ ಬಾಧಕವೇ.



ಕೈನೂಲು ಮತ್ತು ಖಾದಿ ಮೂಲಕ ಸಾಧಿಸುವ ಬ್ರಿಟಿಷ್ ಬಹಿಷ್ಕಾರವು ಎಷ್ಟು ಪ್ರಯೋಜನಕಾರಿ ಆಗಬಲ್ಲದೋ ಅಷ್ಟು ಇನ್ನಾವುದೇ ರೀತಿಯಿಂದ ಸಾಧಿಸಿದ ಬ್ರಿಟಿಷ್ ವಸ್ತ್ರ ಬಹಿಷ್ಕಾರವು ಪ್ರಯೋಜನಕಾರಿ ಆಗಲಾರದು. ಇದರಿಂದ ಕನಿಷ್ಠ ಪಕ್ಷ ಎಲ್ಲ ವಿದೇಶಿ ಬಟ್ಟೆಯ ಬಹಿಷ್ಕಾರವಾದರೂ ಅಗತ್ಯ ಆಗುತ್ತದೆ. ಈ ಬಹಿಷ್ಕಾರವು ಯಾರನ್ನೂ ಶಿಕ್ಷಿಸಲು ಮಾಡಿದ್ದಲ್ಲ. ಇದು ರಾಷ್ಟ್ರೀಯ ಅಸ್ತಿತ್ವಕ್ಕೆ ಅಗತ್ಯ

ಆಕ್ಷೇಪಣೆಗಳ ವಿಚಾರ

ವಿಮರ್ಶಕರು ಹೇಳುವಂತೆ, ಚರಕ ಜನರನ್ನು ಆಕರ್ಷಿಸಿಲ್ಲ, ಅದು ಸಾಕಷ್ಟು ರೋಮಾಂಚಕಾರಿಯಾಗಿಲ್ಲ, ಅದು ಕೇವಲ ಮಹಿಳೆಯರಿಗೆ ಮಾತ್ರ ಉದ್ಯೋಗ ನೀಡೀತು, ಹೀಗೆ ಮಾಡುವುದರಿಂದ ಮತ್ತೆ ನಾವು ಮಧ್ಯಯುಗಕ್ಕೆ ಹೋದಂತೆ ಆಗುತ್ತದೆ. ಯಂತ್ರಗಳು ಪ್ರತಿನಿಧಿಸುವ ವೈಜ್ಞಾನಿಕ ಜ್ಞಾನದ ಮಹತ್ವಪೂರ್ಣ ಮುನ್ನಡೆಯ ವಿರುದ್ಧ ಚರಕವನ್ನು ನಿಲ್ಲಿಸುವುದು ವ್ಯರ್ಥ ಪ್ರಯತ್ನ. ಇತ್ಯಾದಿ.



ತಮ್ಮ ಮೊಮ್ಮಗ ಕಾನುಭಾಯಿ ಜತೆ ಜುಹು ಕಡಲತೀರ, ಬಾಂಬೆಯಲ್ಲಿ ಮಹಾತ್ಮಾ ಗಾಂಧೀಜಿ, 1937

ನನ್ನ ವಿನಮ್ರ ಅಭಿಪ್ರಾಯದಲ್ಲಿ ಭಾರತಕ್ಕೆ ಬೇಕಾಗಿರುವುದು ರೋಮಾಂಚನಕಾರಿ ಐಡಿಯಾಗಳಲ್ಲ, ಬದಲಾಗಿ ಘನವಾದ ಕೆಲಸದ ಅಗತ್ಯವಿದೆ. ಲಕ್ಷಾಂತರ ಜನರಿಗೆ ಗಟ್ಟಿಯಾದ ಕೆಲಸವೇ ರೋಮಾಂಚನಕಾರಿ ಮತ್ತು ಟಾನಿಕ್ ಕೂಡ.

ವಾಸ್ತವದಲ್ಲಿ ನಾವು ಚರಕದ ಪ್ರಯೋಗಕ್ಕೆ ಸಾಕಷ್ಟು ಪ್ರಯತ್ನ ನೀಡಿಲ್ಲ. ನಮ್ಮಲ್ಲಿ ಅನೇಕರು ಇದರ ಬಗ್ಗೆ ಗಂಭೀರವಾಗಿ ಯೋಚಿಸಿಲ್ಲ ಎಂದು ಹೇಳಲು ವಿಷಾದಿಸುತ್ತೇನೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರು ಕೂಡ ಕಾಲಕಾಲಕ್ಕೆ ತಾವೇ ಅಂಗೀಕರಿಸಿದ ಕೈಮಗ್ಗದ ನಿರ್ಣಯಗಳನ್ನು ಜಾರಿಗೊಳಿಸುವಲ್ಲಿ ವಿಫಲರಾಗಿದ್ದಾರೆ. ನಮ್ಮಲ್ಲಿ ಹೆಚ್ಚಿನವರಿಗೆ ಇದರಲ್ಲಿ ನಂಬಿಕೆಯೇ ಇಲ್ಲ. ಈ ಸಂದರ್ಭದಲ್ಲಿ, ರೋಮಾಂಚನದ ಕೊರತೆಯಿಂದ ನೂಲುವಿಕೆಯ ಚಳವಳಿ ವಿಫಲವಾಗಿದೆ ಎಂದು ಹೇಳುವುದು ನ್ಯಾಯಸಮ್ಮತವಲ್ಲ.

ಇದು ಕೇವಲ ಮುದುಕರ ಉದ್ಯೋಗ ಎಂದು ಹೇಳುವುದರಿಂದ ವಾಸ್ತವಾಂಶಗಳನ್ನು ನಿರ್ಲಕ್ಷಿಸುವುದಾಗಿದೆ. ನೂಲಿನ ಮಿಲ್ಗಳು ಕೂಡ ಚರಕಗಳಂತೆ ಕೆಲಸ ಮಾಡುವವುಗಳಾಗಿವೆ. ಅವುಗಳನ್ನು ಪುರುಷರು ನಿರ್ವಹಿಸುತ್ತಾರೆ. ಕೆಲವು ಉದ್ಯೋಗಗಳು ಪುರುಷರ ಘನತೆಗೆ ಕೆಳಮಟ್ಟದ್ದು ಎಂಬ ಮೂಢನಂಬಿಕೆಯಿಂದ ನಾವು ಹೊರಬರುವ ಕಾಲ ಬಂದಿದೆ. ಸಾಮಾನ್ಯ ಪರಿಸ್ಥಿತಿಗಳಲ್ಲಿ ನೂಲುವಿಕೆಯು ಖಂಡಿತವಾಗಿಯೂ ಮಹಿಳೆಯರ ಉದ್ಯೋಗವಾಗಿರುತ್ತದೆ. ಆದರೆ ಭವಿಷ್ಯದ ಆಡಳಿತವು ಯಾವಾಗಲೂ ಕೆಲವು ಪುರುಷರನ್ನು ಚರಕದ ಕೆಲಸಕ್ಕೆ ಮೀಸಲಾಗಿಡಬೇಕಾಗುತ್ತದೆ, ಇದರಿಂದ ನೂಲು ತೆಗೆಯುವುದನ್ನು ಗೃಹ ಉದ್ಯಮವಾಗಿ ಅದರ ಮಿತಿಗಳೊಳಗೆ ಸುಧಾರಣೆಗಳನ್ನು ಮಾಡಬಹುದು. ನಮ್ಮಲ್ಲಿ ಕೆಲವು ಪುರುಷರು ಅದರಲ್ಲಿ ಕೆಲಸ ಮಾಡದಿದ್ದರೆ ಮತ್ತು ಹಗಲಿರುಳು ಅದರ ಬಗ್ಗೆ ಯೋಚಿಸದಿದ್ದರೆ, ಚರಕದ ಯಾಂತ್ರಿಕತೆಯು ಮಾಡಿರುವ ಪ್ರಗತಿ ಅಸಾಧ್ಯವಾಗುತ್ತಿತ್ತು ಎಂದು ನಾನು ನಿಮಗೆ ತಿಳಿಸಬೇಕು.

ಯಂತ್ರಗಳು

ಯಂತ್ರಗಳ ಕುರಿತು ನನ್ನ ಬಗ್ಗೆ ಹೇಳಲಾಗುತ್ತಿರುವ ಅಭಿಪ್ರಾಯಗಳನ್ನು ನೀವು ನಿಮ್ಮ ಮನಸ್ಸಿನಿಂದ ತೆಗೆದುಹಾಕಬೇಕೆಂದು ನಾನು ಬಯಸುತ್ತೇನೆ. ಮೊದಲನೆಯದಾಗಿ, ನಾನು ಅಹಿಂಸೆಯ ಬಗ್ಗೆ ನನ್ನ ಸಂಪೂರ್ಣ ನಂಬಿಕೆಯನ್ನು ಮಂಡಿಸಿದಂತೆಯೇ, ಯಂತ್ರಗಳ ಬಗ್ಗೆ ನನ್ನ ಎಲ್ಲಾ ಅಭಿಪ್ರಾಯಗಳನ್ನು ರಾಷ್ಟ್ರ ಮಟ್ಟದಲ್ಲಿ ಒಪ್ಪಿಗೆ ಪಡೆಯಲು ಜನರ ಮುಂದೆ ಮಂಡಿಸುತ್ತಿಲ್ಲ.

ಚರಕವು ತಾನೇ ಅತ್ಯಂತ ಸೂಕ್ಷ್ಮವಾದ ಯಂತ್ರವಾಗಿದೆ. ನನ್ನ ತಲೆ ಪ್ರತಿದಿನ ಅದರ ಅಜ್ಞಾತ ಸಂಶೋಧಕನಿಗೆ ಗೌರವದಿಂದ ಬಾಗುತ್ತದೆ. 1900 ಮೈಲು ಉದ್ದ ಮತ್ತು 1500 ಮೈಲು ಅಗಲದ ಈ ಭೂಭಾಗದಲ್ಲಿ ಹರಡಿರುವ ಸಾವಿರಾರು ಮನೆಗಳ ಬಾಗಿಲಿನಿಂದ ಹಸಿವನ್ನು ದೂರವಿಟ್ಟ ಭಾರತದ ಏಕೈಕ ಗೃಹ ಉದ್ಯಮವಾದ ಬಟ್ಟೆ ನೇಯುವುದನ್ನು ಅನಾವಶ್ಯವಾಗಿ ಮತ್ತು ದುಷ್ಟತನದಿಂದ ನಾಶ ಮಾಡುವುದನ್ನು ನಾನು ವಿರೋಧಿಸುತ್ತೇನೆ.

ನೂಲಿನ ಮತಾಧಿಕಾರ

ಚರಕದ ಬಗ್ಗೆ ನನಗಿರುವ ಈ ಅನುರಾಗವನ್ನು ನೋಡಿ. ಅಥವಾ ನಮ್ಮ ಚುನಾವಣೆಯ ಮತಾಧಿಕಾರದಲ್ಲಿ ಇದನ್ನು ಸೇರಿಸುವ ಸಾಹಸವನ್ನು ನೋಡಿ ಈಗ ನಿಮಗೆ ಆಶ್ಚರ್ಯವಾಗದು. ಪಂಡಿತ್ ಮೋತಿಲಾಲ ನೆಹರು ಹಾಗೂ ದೇಶಬಂಧು ದಾಸರು ಸ್ವರಾಜ್ಯ ಪಕ್ಷದ ಪರವಾಗಿ ಇದನ್ನು ಏಕೆ ಒಪ್ಪಿಕೊಂಡರು ಎಂಬ ಬಗ್ಗೆಯೂ ನಿಮಗೆ ಆಶ್ಚರ್ಯವಾಗದು. ನನ್ನ ಮಾತೇ ನಡೆಯಬೇಕು ಎಂದಿದ್ದರೆ, ಕಾಂಗ್ರೆಸ್ಸಿನ ಪಟ್ಟಿಯಲ್ಲಿ ನೂಲಲು ಇಷ್ಟ ಇಲ್ಲದವರು ಅಥವಾ ಯಾವಾಗಲೂ ಖಾದಿಯನ್ನು ಧರಿಸದವರು ಒಬ್ಬರೂ ಇರುತ್ತಿರಲಿಲ್ಲ. ಸ್ವರಾಜ್ಯ ಪಕ್ಷವು ಎಷ್ಟು ಒಪ್ಪಿಕೊಂಡಿದೆಯೋ ಅಷ್ಟಕ್ಕೆ ನಾನು ಕೃತಜ್ಞ. ಈ ತಿದ್ದುಪಡಿಯಾಗಲೀ ಸುಧಾರಣೆ ಯಾಗಲೀ ನಮ್ಮ ದೌರ್ಬಲ್ಯಕ್ಕೆ ಅಥವಾ ಶ್ರದ್ಧಾಹೀನತೆಗೆ ಒಂದು ರಿಯಾಯಿತಿ. ಆದರೆ ಯಾರಿಗೆ ಚರಕದಲ್ಲಿ ಖಾದಿಯಲ್ಲಿ ಪೂರ್ಣ ನಂಬಿಕೆ ಇದೆಯೋ ಅವರಿಗೆ ಇದರಿಂದ ಹೆಚ್ಚು ಹೆಚ್ಚು ಸ್ಫೂರ್ತಿ ಬರುವಂತೆ ಆಗಬೇಕು.

ಮತ್ತಾವ ಸಂದೇಶವೂ ಇಲ್ಲ

ಚರಕದ ಬಗ್ಗೆ ಇಷ್ಟು ಹೊತ್ತು ನಾನು ಹೇಳಿದೆ. ವಿಸ್ತಾರವಾಗಿಯೂ ಹೇಳಿದೆ. ಕಾರಣ ಇದಕ್ಕಿಂತ ಉತ್ತಮ ಸಂದೇಶ ಅಥವಾ ಬೇರೆ ಸಂದೇಶ ರಾಷ್ಟ್ರದ ಮುಂದೆ ಇಡಲಾರೆ. ಸ್ವರಾಜ್ಯ ಸಾಧನೆ ಶಾಂತಿಯುತ ಮತ್ತು ನ್ಯಾಯಸಮ್ಮತ ಮಾರ್ಗದಿಂದ ಆಗಬೇಕೆಂದರೆ ಅದಕ್ಕೆ ಇದಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ಸಾಧನ ನನಗೆ ಯಾವುದೂ ಗೊತ್ತಿಲ್ಲ. ಆಗಲೇ ನಾನು ಹೇಳಿದ್ದೇನೆ, ಹಿಂಸೆಗೆ ಬದಲು ಇಡೀ ರಾಷ್ಟ್ರವು ಯಾವುದನ್ನಾದರೂ ಒಪ್ಪಿಕೊಳ್ಳಬೇಕಾಗಿದ್ದರೆ ಇದೊಂದೇ ಎಂದು.

ಸವಿನಯ ಶಾಸನಭಂಗದಲ್ಲಿ ನನಗೆ ದೃಢ ವಿಶ್ವಾಸ. ಆದರೆ ವಿದೇಶಿ ವಸ್ತ್ರ ಬಹಿಷ್ಕಾರದ ಶಕ್ತಿ ನಮ್ಮಲ್ಲಿ ಮೂಡುವವರೆಗೆ ಸ್ವರಾಜ್ಯ ಸಂಪಾದನೆಗಾಗಿ ಸವಿನಯ ಶಾಸನ ಭಂಗ ಮಾಡುವುದು ಅಸಾಧ್ಯ ಈಗ ನಿಮಗೆ ಸುಲಭವಾಗಿ ಅರ್ಥವಾಗ ಬಹುದು– ಚರಕದ ಬಗ್ಗೆ ನನ್ನ ಅಭಿಪ್ರಾಯಗಳನ್ನು ನೀವು



ಅಂಗೀಕರಿಸದೇ ಇದ್ದರೆ ನನ್ನಿಂದ ಕಾಂಗ್ರೆಸ್ಸಿಗೆ ಯಾವ ಮಾರ್ಗದರ್ಶನವೂ ದೊರೆಯಲಾರದು. ಚರಕದ ಹಿನ್ನೆಲೆಯಲ್ಲಿ ಇರುವ ಸಿದ್ಧಾಂತವನ್ನು ನಾನು ಪ್ರತಿಪಾದಿಸಿದ್ದು ತಪ್ಪು ಎನಿಸಿ, ನಿಮಗೆ ರಾಷ್ಟ್ರೀಯ ಪ್ರಗತಿಗೆ ನಾನು ಅಡ್ಡ ಎಂದು ನೀವು ಭಾವಿಸಿದರೆ, ಅದು ನ್ಯಾಯವೇ. ಕೆಲವು ಗೆಳೆಯರು ಹಾಗೆ ತಿಳಿದೂ ಇದ್ದಾರೆ. ನಿಮ್ಮ ಬುದ್ಧಿಗೂ ನಿಮ್ಮ ಹೃದಯಕ್ಕೂ ಇದು ಒಪ್ಪಿಗೆ ಆಗದೇ ಹೋದರೆ, ನನ್ನ ನಾಯಕತ್ವವನ್ನು ನೀವು ತ್ಯಜಿಸಬೇಕಾದ್ದೇ. ಹಾಗೆ ಮಾಡದೇ ಹೋದರೆ ನೀವು ಕರ್ತವ್ಯ ಚ್ಯುತರಾಗುತ್ತೀರಿ. ಲಾರ್ಡ್ ವಿಲಿಂಗಡನ್ ಒಮ್ಮೆ ನಮ್ಮ ಬಗ್ಗೆ ಬಹಳ ಯೋಗ್ಯ ಮಾತೊಂದನ್ನು ಹೇಳಿದರು. “ನಮಗೆ ಇಲ್ಲ ಎನ್ನುವ ಧೈರ್ಯ ಮತ್ತು ಶಕ್ತಿ ಸಾಲದು ಎಂದು. ಇನ್ನು ಮುಂದೆ ಅಂಥ ಪ್ರಸಂಗ ಬರದಿರಲಿ. ನಿಮಗೆ ನಂಬಿಕೆ ಇಲ್ಲದಿದ್ದರೆ ನನ್ನ ಸೂಚನೆಯನ್ನು ನೀವು ತಿರಸ್ಕರಿಸುವುದೇ ಸ್ವರಾಜ್ಯ ಪ್ರಾಪ್ತಿಗೆ ನೀವು ಇಟ್ಟ ಮೊದಲನೆಯ ಹೆಜ್ಜೆ ಎನ್ನುತ್ತೇನೆ.

ಹಿಂದೂ ಮುಸ್ಲಿಂ ಐಕ್ಯತೆ

ಹಿಂದೂ ಮುಸ್ಲಿಂ ಒಗ್ಗಟ್ಟು ಚರಕಕ್ಕಿಂತ ಕಡಿಮೆ ಮುಹತ್ವದ ವಿಷಯವೇನಲ್ಲ. ಬಾಳಿನ ಉಸಿರು ಇದು. ಈ ವಿಷಯವಾಗಿ ನಿಮ್ಮ ಹೊತ್ತನ್ನು ನಾನು ಹೆಚ್ಚು ಕಳೆಯಬೇಕಾಗಿಲ್ಲ. ಸ್ವರಾಜ್ಯಕ್ಕೆ ಇದು ಅಗತ್ಯವೆಂಬುದು ಬಹಳ ಮಟ್ಟಿಗೆ ಸಾರ್ವತ್ರಿಕವಾಗಿ ಒಪ್ಪಿಗೆಯಾಗಿದೆ. ಇಲ್ಲಿ ‘ಬಹಳಮಟ್ಟಿಗೆ’ ಎಂದದ್ದು ಏಕೆ



ಮಹಾತ್ಮ ಗಾಂಧೀಜಿ ಮತ್ತು ಪತ್ನಿ ಕಸ್ತೂರ್ಬಾ ಸೇವಾಗ್ರಾಮ ಆಶ್ರಮದಲ್ಲಿ ಜನವರಿ 1942

ಎಂದರೆ, ಕೆಲವರು ಹಿಂದೂಗಳು ಕೆಲವರು ಮುಸಲ್ಮಾನರು ಸಂಪೂರ್ಣವಾಗಿ ಹಿಂದೂ ಭಾರತ ಅಥವಾ ಮುಸಲ್ಮಾನ ಭಾರತ ಆಗದೇ ಇದ್ದರೆ ಈಗಿನ ಹಾಗೆ ಬ್ರಿಟಿನ್ನಿನ ಆಶ್ರಯವೇ ಇರಲಿ ಎನ್ನುತ್ತಿದ್ದಾರೆ. ಹಾಗೆ ಹೇಳುವರ ಸಂಖ್ಯೆ ಬಹಳ ಕಡಿಮೆ ಎಂಬುದು ಸಂತೋಷದ ವಿಷಯ.

ಮೌಲಾನಾ ಶೌಕತ್ ಆಲಿಗೆ ಬಹಳ ಪ್ರಬಲವಾದ ಆಶಾಭಾವನೆ. ಈಗಿನ ಈ ವಿರಸವು ತಾತ್ಕಾಲಿಕ ಎನ್ನುತ್ತಾರೆ. ನನಗೂ ಹಾಗೆಯೇ ಅನ್ನಿಸುತ್ತದೆ. ಹಿಂದೂಗಳೂ ಭಾಗವಹಿಸಿ ತಮ್ಮದಾಗಿ ಮಾಡಿಕೊಂಡ ಖಿಲಾಫತ್ ಚಳವಳಿ, ಆಮೇಲೆ ಬಂದ ಅಸಹಕಾರ, ಇದುವರೆಗೆ ನಿದ್ದೆ ಮಾಡುತ್ತಿದ್ದ ಜನತೆಯನ್ನು ಎಚ್ಚರಿಸಿದವು. ಮೇಲಿನ ವರ್ಗಕ್ಕೂ ಕೆಳಗಿನ ವರ್ಗಕ್ಕೂ ಇದು ಒಂದು ಹೊಸ ಜಾಗೃತಿಯನ್ನು ಕೊಟ್ಟಿತು. ಅಸಹಕಾರದ ಉತ್ಕರ್ಷದ ದಿನಗಳಲ್ಲಿ ನಿರಾಶೆಗೊಂಡಿದ್ದ ಸ್ವಾರ್ಥಿಗಳು ಈಗ ಹೊಸತನದ ಆಕರ್ಷಣೆ ಕಡಿಮೆಯಾದ ಮೇಲೆ ಅವಕಾಶ ಪಡೆದು ಎರಡೂ ಸಮಾಜಗಳ ಸ್ವಾರ್ಥವನ್ನು ಅಥವಾ ಮತಾಂಧತೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ನಡೆದ ಜಗಳಗಳು ಅದರ ಫಲ.

ಧರ್ಮವನ್ನು ವಿದ್ರೂಪಗೊಳಿಸಿ ಅಪಹಾಸ್ಯಗೊಳಿಸಲಾಗಿದೆ. ಕ್ಷುಲ್ಲಕ ವಿಷಯಗಳನ್ನು ಧರ್ಮದ ಹೆಸರಿನಲ್ಲಿ ದೊಡ್ಡದು ಮಾಡಿದ್ದಾರೆ. ಏನು ಬೇಕಾದರೂ ಆಗಲಿ ಅದನ್ನು ನಡೆಸಿಯೇ ತೀರಬೇಕು ಎನ್ನುತ್ತಾರೆ ಮತಾಂಧರು. ವಿರಸ ಹುಟ್ಟಿಸಲು ಆರ್ಥಿಕ ರಾಜಕೀಯ ಕಾರಣಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದು ಕೋಹಾಟನಲ್ಲಿ ಶಿಖರಕ್ಕೆ ಮುಟ್ಟಿತು. ಮೊದಲೇ ದುರಂತ, ಆ ಬೆಂಕಿಗೆ ಸ್ಥಳೀಯ ಅಧಿಕಾರಿಗಳ ಹೃದಯಹೀನ ಔದಾಸೀನ್ಯದಿಂದ ತುಪ್ಪ ಸುರಿದಂತಾಯಿತು. ಆ ದುರಂತದ ಕಾರಣಗಳನ್ನು ಪರಿಶೀಲಿಸಲು ಅಥವಾ ಅಪರಾಧವನ್ನು ನಿಷ್ಕರ್ಷಿಸಲು ನಾನು ಇಲ್ಲಿ ತೊಡಗುವದಿಲ್ಲ. ನನಗೆ ಒಂದು ವೇಳೆ ಮನಸ್ಸಿದ್ದರೂ ಅದಕ್ಕೆ ಬೇಕಾದ ಸಾಮಗ್ರಿ ಇಲ್ಲ. ಇಷ್ಟು ಹೇಳಿದರೆ ಸಾಕು. ಹಿಂದೂ ಶರಣಾರ್ಥಿಗಳು ಪ್ರಾಣಭಯದಿಂದ ಓಡಿಹೋದರು. ಕೋಹಾತ್ನಲ್ಲಿ ಮುಸಲ್ಮಾನರ ಸಂಖ್ಯೆ ಅತ್ಯಧಿಕ. ಪರದೇಶೀಯ ಪ್ರಭುತ್ವದಲ್ಲಿ ಎಷ್ಟು ಸಾಧ್ಯವೋ ಅಷ್ಟು ಪರಿಣಾಮಕಾರಿ ರಾಜಕೀಯ ಅಧಿಕಾರ ಅವರ ಕೈಯ್ಯಲ್ಲಿದೆ. ಕೋಹಾತ್ನ ಸಂಪೂರ್ಣ ಜನ ಹಿಂದೂಗಳೇ ಆಗಿದ್ದ ಪಕ್ಷದಲ್ಲಿ ಅಲ್ಲಿ ಹಿಂದೂಗಳು ಎಷ್ಟು ಸುರಕ್ಷಿತವಾಗಿ ಇರಬಹುದಾಗಿತ್ತೋ ಅಷ್ಟೇ ಸುರಕ್ಷಿತವಾಗಿ ಮುಸಲ್ಮಾನರು ಬಹುಸಂಖ್ಯಾತರಾಗಿ ಇದ್ದಾಗ ಕೂಡ ಅವರು ಇರಬಲ್ಲರು ಎಂಬುದನ್ನು ತೋರಿಸಿ ಕೊಡುವುದು ಮುಸಲ್ಮಾನರ ಕರ್ತವ್ಯ. ಹಿಂದೂ ಶರಣಾರ್ಥಿಗಳು ಪ್ರತಿಯೊಬ್ಬರೂ ಊರಿಗೆ ಬರುವಂತೆ ಮಾಡುವವರೆಗೂ ಕೋಹಾತ್ ಮುಸಲ್ಮಾನರು ಸುಮ್ಮನೆ ಇರಲಾಗದು. ಸರಕಾರ ಒಡ್ಡಿದ ಬೋನಿನಲ್ಲಿ ಹಿಂದೂಗಳು ಬೀಳಬಾರದು ಎಂದು ನಾನು ಆಶಿಸುತ್ತೇನೆ. ತಮ್ಮ ಪ್ರಾಣ ಸೊತ್ತುಗಳ ಬಗ್ಗೆ ಕೋಹಾಟ ಮುಸಲ್ಮಾನರು ಪೂರ್ಣ ಭರವಸೆ ಕೊಡುವವರೆಗೆ ಹಿಂದೂ ಶರಣಾರ್ಥಿಗಳು ಹಿಂದಕ್ಕೆ ಹೋಗಲು ದೃಢವಾಗಿ ತಿರಸ್ಕರಿಸಬೇಕು ಎನ್ನುತ್ತೇನೆ.

ಮುಸಲ್ಮಾನರ ಸಂಖ್ಯೆ ಅತ್ಯಧಿಕವಾಗಿರುವ ಕಡೆಗಳಲ್ಲಿ, ಅವರ ನಡುವೆ ಹಿಂದೂಗಳು ಇರಬೇಕೆಂದರೆ ಮುಸಲ್ಮಾನರು ಅವರನ್ನು ಬರಮಾಡಿಕೊಂಡು ತಮ್ಮ ಗೆಳೆಯರಂತೆ, ಸಮಾನರಂತೆ ನೋಡುವ ಪರಿಸ್ಥಿತಿ ಇರಬೇಕು. ಮುಸಲ್ಮಾನರು ಕಡಿಮೆ ಸಂಖ್ಯೆ ಇರುವ ಕಡೆಯೂ ಅಷ್ಟೇ. ಹಿಂದೂಗಳು ಹೆಚ್ಚಾಗಿ ಇರುವ ಕಡೆ, ಅವರ ನಡುವೆ ಇವರು ಗೌರವದಿಂದ ಬಾಳಬೇಕೆಂದರೆ ಹಿಂದೂಗಳ ಸ್ನೇಹ ಅತ್ಯಗತ್ಯ. ಸರಕಾರ ಕಳ್ಳಕಾಕರ ದರೋಡೆಕಾರರಿಂದ ರಕ್ಷಣೆ ಕೊಡಬಹುದು, ಆದರೆ ಒಂದು ಇಡೀ ಸಮಾಜ ಇನ್ನೊಂದು ಸಮಾಜವನ್ನು ಸಂಪೂರ್ಣವಾಗಿ ಬಹಿಷ್ಕರಿಸಿದರೆ ಅದಕ್ಕೆ ರಕ್ಷಣೆ ಕೊಡಲು ಸ್ವರಾಜ್ಯ ಸರಕಾರಕ್ಕೂ ಸಾಧ್ಯವಿಲ್ಲ. ಸರಕಾರ ಅಸಾಧಾರಣ ಪರಿಸ್ಥಿತಿಯಲ್ಲಿ ಇಂತಹ ವಿಷಯಗಳಲ್ಲಿ ಮಾತ್ರ ಕೈಹಾಕಬಹುದು. ಜಗಳಗಳು ಜೀವನದ ಸಾಮಾನ್ಯ ಅಂಗವಾದಾಗ, ಅದನ್ನು ಅಂತಃಕಲಹ ಎಂದು ಕರೆಯಲಾಗುತ್ತದೆ ಮತ್ತು ಎರಡೂ ಸಮುದಾಯಗಳು ಅದನ್ನು ತಾವೇ ಹೋರಾಡಿ ಪರಿಹರಿಸಿಕೊಳ್ಳಬೇಕು.

ಪ್ರಸ್ತುತ ಸರಕಾರವು ವಿದೇಶಿಯದಾಗಿದ್ದು, ವಾಸ್ತವದಲ್ಲಿ ಮರೆಮಾಚಿದ ಮಿಲಿಟರಿ ಆಳ್ವಿಕೆಯಾಗಿದೆ. ನಾವು ಎಷ್ಟೇ ಸಂಘಟಿತ ರಾದರೂ ತನ್ನನ್ನು ಕಾಪಾಡಿಕೊಳ್ಳುವ ಶಕ್ತಿ ಸರಕಾರಕ್ಕಿದೆ. ಆದ್ದರಿಂದಲೇ ಅದಕ್ಕೆ ಮನಸ್ಸಿದ್ದರೆ ನಮ್ಮ ಈ ಅಂತಃಕಲಹವನ್ನು ತಡೆಗಟ್ಟಬಹುದು. ಆದರೆ ಜನಪ್ರಿಯ ಎನ್ನಿಸಿಕೊಳ್ಳಬಯಸಿದ ಯಾರ ಸ್ವರಾಜ್ಯ ಸರಕಾರವೂ ಯಾವಾಗಲೂ ಯುದ್ಧ ಸಿದ್ಧತೆಯಲ್ಲಿ ಇರಲಾರದು. ಸ್ವರಾಜ್ಯ ಸರಕಾರ ಎಂದರೆ ಹಿಂದೂಗಳ. ಮುಸಲ್ಮಾನರ ಹಾಗೂ ಇತರರ ಸ್ವತಂತ್ರ ಸಾಮುದಾಯಿಕ ಇಚ್ಛೆಯಿಂದ ಸ್ಥಾಪಿತವಾದದ್ದು. ಹಿಂದೂಗಳಿಗೆ ಮುಸಲ್ಮಾನರಿಗೆ ಸ್ವರಾಜ್ಯ ಬೇಕಾದರೆ ತಮ್ಮ

ತಮ್ಮ ಭಿನ್ನಾಭಿಪ್ರಾಯಗಳನ್ನು ಅವರು ಸ್ನೇಹದಿಂದ ಬಗೆಹರಿಸಿಕೊಳ್ಳಬೇಕು.

ದಿಲ್ಲಿಯಲ್ಲಿ ನಡೆದ ಐಕ್ಯತಾ ಸಮ್ಮೇಳನವು ಮತೀಯ ಭಿನ್ನತೆಗಳ ಪರಿಹಾರಕ್ಕೆ ದಾರಿಮಾಡಿದೆ. ಹಿಂದೂಗಳಿಗೂ, ಮುಸಲ್ಮಾನರಿಗೂ ಅಷ್ಟೇ ಅಲ್ಲ–ಎಲ್ಲ ಜಾತಿಗಳಿಗೂ ಪಂಥಗಳಿಗೂ ಇರುವ ರಾಜಕೀಯ ಭೇದಗಳನ್ನು ನ್ಯಾಯವಾಗಿ ಪರಿಹರಿಸಲು ಸರ್ವಪಕ್ಷ ಪರಿಷತ್ತಿನ ಸಮಿತಿಯು ಒಂದು ಮಾರ್ಗವನ್ನು ಹುಡುಕಬೇಕಾಗಿದೆ. ಮತೀಯ ಪಂಥೀಯ ಪ್ರಾತಿನಿಧ್ಯಗಳನ್ನು ಆದಷ್ಟು ಬೇಗ ತೆಗೆದು ಹಾಕುವುದೇ ನಮ್ಮ ಗುರಿಯಾಗಬೇಕು. ಮತದಾರ ವರ್ಗವು ಸಕಲರದೂ ಆಗಿ ಕೇವಲ ಯೋಗ್ಯತೆಯ ಆಧಾರದ ಮೇಲೆ ನಿಷ್ಪಕ್ಷಪಾತವಾಗಿ ತಮ್ಮ ಪ್ರತಿನಿಧಿಗಳನ್ನು ಆರಿಸಬೇಕು. ನಮ್ಮ ನೌಕರ ವರ್ಗದಲ್ಲಿ ಹಾಗೆಯೇ ನಿಷ್ಪಕ್ಷಪಾತವಾಗಿ ಕೇವಲ ಅರ್ಹತೆಯ ಆಧಾರದ ಮೇಲೆ ಗಂಡಸರನ್ನು, ಹೆಂಗಸರನ್ನು ನಿಯಮಿಸಿಕೊಳ್ಳಬೇಕು. ಆದರೆ ಆ ಸಮಯ ಬರುವವರೆಗೆ ಮತ್ತು ಸಾಂಪ್ರದಾಯಿಕ ಅಸೂಯೆಗಳು ಅಥವಾ ಆದ್ಯತೆಗಳು ಭೂತಕಾಲದ ವಿಷಯವಾಗುವವರೆಗೆ, ಬಹುಸಂಖ್ಯಾತರ ಉದ್ದೇಶಗಳನ್ನು ಸಂಶಯಿಸುವ ಅಲ್ಪಸಂಖ್ಯಾತರಿಗೆ ಅವರ ದಾರಿಯಲ್ಲಿ ನಡೆಯಲು ಅವಕಾಶ ಇರಬೇಕು. ಬಹುಸಂಖ್ಯಾತರು ಸ್ವ–ತ್ಯಾಗದ ಮಾದರಿಯನ್ನು ತೋರಬೇಕು.

ಅಸ್ಪೃಶ್ಯತೆ

ಅಸ್ಪೃಶ್ಯತೆಯು ಸ್ವರಾಜ್ಯಕ್ಕೆ ಮತ್ತೊಂದು ಆತಂಕವಾಗಿದೆ. ಹಿಂದೂ–ಮುಸ್ಲಿಂ ಐಕ್ಯತೆಯ ಸಾಧನೆಯಂತೆಯೇ ಅದರ ನಿರ್ಮೂಲನೆಯೂ ಸ್ವರಾಜ್ಯಕ್ಕೆ ಅತ್ಯಗತ್ಯವಾಗಿದೆ. ಇದು ಮೂಲಭೂತವಾಗಿ ಹಿಂದೂಗಳ ಸಮಸ್ಯೆಯಾಗಿದ್ದು, ದಮನಕ್ಕೊಳಗಾದ ವರ್ಗಗಳ ಸ್ವಾತಂತ್ರ್ಯವನ್ನು ಮರುಸ್ಥಾಪಿಸುವವರೆಗೆ ಹಿಂದೂಗಳಿಗೆ ಸ್ವರಾಜ್ಯವನ್ನು ಕೇಳುವ ಹಕ್ಕಿಲ್ಲ ಅಥವಾ ಪಡೆಯಲಾಗದು. ಅವರನ್ನು ತುಳಿತುಳಿದು ನಾವೂ ಅಧಃಪತನ ಹೊಂದಿದ್ದೇವೆ.

ಬ್ರಿಟಿಷ್ ಆಕ್ರಮಣಕಾರರು ನಮ್ಮನ್ನು ಹೇಗೆ ನಡೆಸಿ ಕೊಳ್ಳುತ್ತಾರೆಯೋ ಅದಕ್ಕಿಂತ ಹೀನವಾಗಿ ಅಲ್ಲದಿದ್ದರೂ ಅಷ್ಟೇ ಹೀನವಾಗಿ ಹಿಂದೂಸ್ತಾನದ ಮೂಲ ನಿವಾಸಿಗಳನ್ನು ಆರ್ಯರ ಆಕ್ರಮಣಕಾರರು ನಡೆಸಿಕೊಂಡರು ಎಂದು ಇತಿಹಾಸ ಬಲ್ಲವರು ಹೇಳುತ್ತಾರೆ. ಹಾಗೆ ಒಂದು ಅಸ್ಪೃಶ್ಯರ ವರ್ಗವನ್ನು ನಿರ್ಮಿಸಿದ್ದಕ್ಕಾಗಿ ಈಗ ಗುಲಾಮಗಿರಿಯ ರೂಪದ ಪ್ರತಿಫಲವನ್ನು ನಾವು ಅನುಭವಿಸುತ್ತಿದ್ದೇವೆ. ಈ ಕಳಂಕವನ್ನು ನಾವು ಎಷ್ಟು ಬೇಗ ತೆಗೆದುಹಾಕುತ್ತೇವೋ ಅಷ್ಟು ಒಳ್ಳೆಯದು. ಆದರೆ ಅಸ್ಪಶ್ಯತೆಯು ದೈವನಿರ್ಮಿತವೆಂದು ಪಂಡಿತರೂ ಪುರೋಹಿತರೂ ಹೇಳುತ್ತಾರೆ. ಹಿಂದೂ ಧರ್ಮದ ಬಗ್ಗೆ ನನಗೂ ಸ್ವಲ್ಪ ಗೊತ್ತಿದೆ. ಈ ಪಂಡಿತರದು ಶುದ್ಧ ತಪ್ಪು ಎಂದು ನನ್ನ ದೃಢ ಅಭಿಪ್ರಾಯ. ಭಗವಂತ ಮಾನವಕುಲದ ಒಂದು ಭಾಗವನ್ನು ಅಸ್ಪಶ್ಯ ಎಂದು ಬೇರೆ ಮಾಡಿದ ಎಂಬ ಮಾತು ದೈವದ್ರೋಹ. ಕಾಂಗ್ರೆಸ್ಸಿಗರಾದ ಹಿಂದೂಗಳು ಆದಷ್ಟು ಬೇಗ ಈ ಆತಂಕವನ್ನು ತೆಗೆದು ಹಾಕಬೇಕು. ವೈಕಂ ಸತ್ಯಾಗ್ರಹಿಗಳು ನಮಗೆ ದಾರಿತೋರಿಸುತ್ತಿದ್ದಾರೆ. ಸಜ್ಜನಿಕೆಯಿಂದಲೂ ದೃಢತೆಯಿಂದಲೂ ಸೌಮ್ಯದಿಂದಲೂ ಅವರು ತಮ್ಮ ಹೋರಾಟ ಮುನ್ನಡೆಸುತ್ತಿದ್ದಾರೆ. ಅವರಿಗೆ ಸಹನೆ ಇದೆ, ಧೈರ್ಯ ಇದೆ, ಶ್ರದ್ಧೆ ಇದೆ. ಈ ಗುಣಗಳು ಯಾವ ಚಳವಳಿಯಲ್ಲಿ ಇದ್ದರೂ ಅದು ಅಪ್ರತಿಮವಾಗುತ್ತದೆ; ಅದನ್ನು ತಡೆಯಲು ಸಾಧ್ಯವಿಲ್ಲ.



ಫೀನಿಕ್ಸ್‌ನಲ್ಲಿ ಮಗುವಿನೊಂದಿಗೆ ಮಹಾತ್ಮ ಗಾಂಧೀಜಿ ಮತ್ತು ಅವರ ಪತ್ನಿ ಕಸ್ತೂರ್ಬಾ, ಆಗಸ್ಟ್ 1913



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಗಾಂಧೀಜಿ ಕನಸು
ಕರ್ನಾಟಕದಲ್ಲಿ ನನಸು
ಗೃಹಲಕ್ಷ್ಮಿ
ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು
₹2000
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಫಲಾನುಭವಿಗಳ ಸಂಖ್ಯೆ: 1.22 ಕೋಟಿ
ಒಟ್ಟು ವೆಚ್ಚ: ರೂ.35,109 ಕೋಟಿ
ನುಡಿದಂತೆ ನಡೆದಿದ್ದೇವೆ...
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹ ಜ್ಯೋತಿ
ಪ್ರತಿ ಮನೆಗೆ 200
ಅನ್ನಭಾಗ್ಯ
10 kg
ಯುವನಿಧಿ
₹3000 ₹1500



ಮಹಾತ್ಮ ಗಾಂಧೀಜಿಯವರು ಬಿರ್ಲಾ ಹೌಸ್‌ನಲ್ಲಿ ತಮ್ಮ ಅಂತಿಮ ಪ್ರಾರ್ಥನಾ ಸಭೆಯಲ್ಲಿ, ನವದೆಹಲಿ, ಜನವರಿ 1948

ಆದರೆ ಈಚೆಗೆ ಒಂದು ಮಾತು ಪ್ರಾರಂಭವಾಗಿದೆ. ರಾಜಕೀಯ ಗುರಿಗಳನ್ನು ಸಾಧಿಸಲು ದಲಿತವರ್ಗವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಹಿಂದೂಗಳಿಗೆ ನಾನು ಎಚ್ಚರಿಕೆ ಕೊಡಬಯಸುತ್ತೇನೆ. ಅಸ್ಪೃಶ್ಯತಾ ನಿವಾರಣೆ ಒಂದು ಪ್ರಾಯಶ್ಚಿತ್ತ. ಸವರ್ಣ ಹಿಂದೂಗಳು ತಮಗೂ ಹಿಂದೂಧರ್ಮಕ್ಕೂ ಪ್ರಾಯಶ್ಚಿತ್ತ ಮೂಲಕ ಋಣಮುಕ್ತರಾಗಬೇಕು. ನಿಜವಾಗಿ ಅಸ್ಪಶ್ಯರು ಶುದ್ಧರಾಗಬೇಕಾದ್ದಿಲ್ಲ. ಶುದ್ಧರಾಗಬೇಕಾದವರು ಮೇಲ್ ಜಾತಿಯವರು ಅಸ್ಪಶ್ಯರಿಗೆ ಮೀಸಲಾದ ಪಾಪ ಯಾವುದೂ ಇಲ್ಲ, ಹೊಲಸು, ಅನ್ಯೆರ್ಮಲ್ಯ ಅವರಿಗೇ ಮೀಸಲಿಲ್ಲ. ನಮ್ಮ ದುರಹಂಕಾರವು ನಮ್ಮ ಕಣ್ಣೊಳಗೆ ಪೊರೆಕಟ್ಟಿ, ನಮ್ಮ ತಪ್ಪುಗಳು ಕಾಣದಂತೆ ಮಾಡುತ್ತವೆ. ಆ ಅಹಂಕಾರವೇ ನಾವು ತುಳಿದ ಇನ್ನೂ ತುಳಿಯುತ್ತಿರುವ, ದಲಿತ ಸಹೋದರರ ಅಲ್ಪ ದೋಷಗಳನ್ನು ಗುಡ್ಡದ ಹಾಗೆ ಕಾಣುವಂತೆ ಮಾಡುತ್ತದೆ. ರಾಷ್ಟ್ರಗಳಿಗೆ ಹೇಗೋ ಧರ್ಮಗಳಿಗೂ ಹಾಗೇಯೇ ಇದು ಪರೀಕ್ಷಾ ಸಮಯ. ದೇವರ ಅನುಗ್ರಹವು, ದೇವರ ಸಾಕ್ಷಾತ್ಕಾರವು ಯಾವ ಜಾತಿಗೂ ಯಾವ ರಾಷ್ಟಕ್ಕೂ ಗುತ್ತಿಗೆಯಲ್ಲ. ದೇವರಲ್ಲಿ ಶ್ರದ್ಧೆ ಇಟ್ಟರೆ ಅವನ ಬಾಗಿಲು ಕಾಯುವವರೆಲ್ಲರಿಗೂ ಸಮಾನವಾಗಿ ಅದು ಲಭಿಸುತ್ತದೆ. ಯಾವ ರಾಷ್ಟ್ರ, ಯಾವ ಮತ, ಅನ್ಯಾಯಕ್ಕೆ, ಅಸತ್ಯಕ್ಕೆ, ಹಿಂಸೆಗೆ ಅವಕಾಶಗಳನ್ನು ಮಾಡಿಕೊಡುತ್ತದೆ. ಅದು ಈ ಭೂಮಿಯಿಂದ ಮಾಯವಾಗುತ್ತದೆ.

ದೇವರು ಎಂದರೆ ಪ್ರಕಾಶ. ಅಂಧಕಾರವಲ್ಲ. ದೇವರು ಎಂದರೆ ಪ್ರೇಮ, ದ್ವೇಷವಲ್ಲ. ದೇವರು ಎಂದರೆ ಸತ್ಯ, ಅಸತ್ಯವಲ್ಲ. ದೇವರು ಒಬ್ಬನೇ ಶ್ರೇಷ್ಠ, ಅವನು ಸೃಷ್ಟಿಸಿದ ನಾವು ಬರೀ ಮಣ್ಣು. ವಿನಯವಂತರಾಗಿ ಅವನ ಸೃಷ್ಟಿಯಲ್ಲಿನ ತೀರ ಕಟ್ಟಕಡೆಯ ಪ್ರಾಣಿಯನ್ನು ಗುರುತಿಸಿಕೊಳ್ಳೋಣ. ಸುಧಾಮನು ಚಿಂದಿ ಉಟ್ಟಿದ್ದರೂ ಕೃಷ್ಣ ಅವನನ್ನು ಗೌರವಿಸಿದ. ಅಷ್ಟು ಗೌರವ ಬೇರೆ ಯಾರಿಗೂ ತೋರಲಿಲ್ಲ. ಧರ್ಮದ ಅಥವಾ ತ್ಯಾಗದ ಬೇರು ಪ್ರೇಮ. ಈ ಅಶಾಶ್ವತ ದೇಹವು ಎಲ್ಲ ಅಧರ್ಮಕ್ಕೂ ಎಲ್ಲ ಸ್ವಾರ್ಥಕ್ಕೂ ಮೂಲಕಾರಣ ಎನ್ನುತ್ತಾರೆ ತುಳಸೀದಾಸರು. ಸ್ವರಾಜ್ಯವು ಬರಲಿ ಬಿಡಲಿ, ವೇದದ ತತ್ವವನ್ನು ಪುನರುಜ್ಜೀವನ ಗೊಳಿಸಿ ಅದನ್ನು ಜೀವಂತವಾಗಿ ಮಾಡುವ ಆಸೆ ಇದ್ದರೆ ಹಿಂದೂಗಳು ಮೊಟ್ಟ ಮೊದಲು ತಮ್ಮನ್ನು ಶುದ್ಧೀಕರಿಸಿಕೊಳ್ಳಬೇಕು.

ಸ್ವರಾಜ್ಯದ ಯೋಜನೆ

ಈ ಚರಕ ಹಿಂದೂ-ಮುಸ್ಲಿಂ ಏಕತೆಯ ಸಂಕೇತ. ಅಸ್ಪೃಶ್ಯತೆಯ ನಿರ್ಮೂಲನೆ ಇವೆಲ್ಲವೂ ಕೇವಲ ಗುರಿಯನ್ನು ತಲುಪುವ ಸಾಧನಗಳು ಮಾತ್ರ. ಗುರಿ ಏನೆಂಬುದು ನಮಗೆ ತಿಳಿದಿಲ್ಲ. ನನ್ನ ಮಟ್ಟಿಗಂತೂ ಸಾಧನ ಮಾರ್ಗವನ್ನು ತಿಳಿದುಕೊಂಡರೆ ಸಾಕು. ನನ್ನ ಜೀವನ ತತ್ವಶಾಸ್ತ್ರದಲ್ಲಿ ಸಾಧನ ಮತ್ತು ಸಾಧ್ಯ ಒಂದಕ್ಕೊಂದು ಪರ್ಯಾಯ ಪದಗಳಾಗಿವೆ. ಆದರೆ ಬಾಬು ಭಗವಾನದಾಸರು ಸಾರ್ವಜನಿಕರ ಮುಂದಿಟ್ಟ ಅಭಿಪ್ರಾಯವನ್ನು ನಾನು ಬಹಳ ಹಿಂದಿನಿಂದಲೂ ಒಪ್ಪಿಕೊಂಡಿದ್ದೇನೆ, ಜನರು ಗುರಿಯನ್ನು ತಿಳಿದಿರಬೇಕು, ಅದೂ ಅಸ್ಪಷ್ಟವಾಗಿ ಅಲ್ಲ, ನಿಖರವಾಗಿ.

ಅವರು ಸ್ವರಾಜ್ಯದ ಪೂರ್ಣ ವ್ಯಾಖ್ಯಾನವನ್ನು ತಿಳಿದಿರಬೇಕು. ಅಖಿಲ ಭಾರತಕ್ಕೆ ಯಾವ ಸ್ವರಾಜ್ಯದ ಯೋಜನೆ ಬೇಕೋ, ಯಾವುದಕ್ಕಾಗಿ ಹೋರಾಡಬೇಕೋ ಅದು ತಿಳಿದಿರಿಬೇಕು. ಸರ್ವಪಕ್ಷ ಸಮ್ಮೇಳನದ ಸಮಿತಿಗೆ ಈ ಕೆಲಸವನ್ನು ವಹಿಸಿಕೊಟ್ಟಿದ್ದಾರೆ. ಸರ್ವಪಕ್ಷಗಳಿಗೂ ಸಮ್ಮತವಾಗುವಂತಹ ಒಂದು ಯೋಜನೆಯನ್ನು ಆ ಸಮಿತಿ ತಯಾರಿಸಿತು ಎಂದು ಆಶಿಸೋಣ.

ಅದರ ಪರಿಶೀಲನೆಗೆ ಈ ಕೆಳಗಿನ ಅಂಶಗಳನ್ನು ನಾನು ಸೂಚಿಸಲೇ?

1. ಆಸ್ತಿಗಾಗಲೀ ಅಧಿಕಾರಕ್ಕಾಗಲೀ ಮತದಾನದ ಅರ್ಹತೆ ಇರಬಾರದು. ಶರೀರ ಶ್ರಮದ ಅರ್ಹತೆ ಮತದಾನಕ್ಕೆ ಇರಬೇಕು. ಈಗ ಕಾಂಗ್ರೆಸ್ಸಿಗೆ ಇದ್ದ ಹಾಗೆಯೇ, ಓದು ಬರಹದ ಅಥವಾ ಸೊತ್ತಿನ ನಿಯಮವು ಒಂದು ರೀತಿಯಲ್ಲಿ ವಂಚನಾತ್ಮಕ. ಆಡಳಿತದಲ್ಲಿ ರಾಜ್ಯದ ಯೋಗಕ್ಷೇಮದಲ್ಲಿ ಭಾಗವಹಿಸಬೇಕು ಎನ್ನುವವರಿಗೆಲ್ಲ ಶರೀರ ಶ್ರಮವು ಸಮಾನ ಅವಕಾಶ ಕೊಡುತ್ತದೆ.

2. ಸಾಮಾನ್ಯ ದಿನಗಳಲ್ಲಿ ಪ್ರಾಣವನ್ನೂ. ಸ್ವತ್ತನ್ನೂ ಕಾಪಾಡಲು ಎಷ್ಟು ಅಗತ್ಯವೋ ಅಷ್ಟು ಸೇನಾ ವೆಚ್ಚ ಸಾಕು. ಈಗ ಮಾಡುತ್ತಿರುವ ಖರ್ಚು ವಿನಾಶಕಾರಿ. ಅದನ್ನು ಕಡಿಮೆ ಮಾಡಬೇಕು.

3. ನ್ಯಾಯವಿತರಣೆ ಅಗ್ಗವಾಗಬೇಕು. ಈ ದೃಷ್ಟಿಯಿಂದ ಪರಮೋಚ್ಚ ನ್ಯಾಯಾಲಯವು ಲಂಡನ್ನಿನಲ್ಲಿ ಇರಬಾರದು, ದಿಲ್ಲಿಯಲ್ಲಿರಬೇಕು. ಸಿವಿಲ್ ದಾವೆಗಳಲ್ಲಿ ಸಾಧಾರಣವಾಗಿ ಎರಡೂ ಪಕ್ಷಗಳವರನ್ನೂ ಪಂಚಾಯತಿಗೆ ಒಪ್ಪಿಸುವಂತೆ ಒತ್ತಾಯಿಸಬೇಕು.

   ಲಂಚಕೋರತನ, ಕಾನೂನಿನ ದುರುಪಯೋಗ ಇಲ್ಲದ ಸಂದರ್ಭಗಳಲ್ಲಿ ಪಂಚಾಯತಿಯ ತೀರ್ಪು ಕಟ್ಟಕಡೆಯದಾಗಬೇಕು. ನಡುವೆ ಇರುವ ಎಷ್ಟೋ ಕೋರ್ಟುಗಳು ಎಲ್ಲವೂ ಹೋಗಬೇಕು. ಕೇಸ್ ಲಾ ಕೊನೆಗೊಳ್ಳಬೇಕು. ಸಾಧಾರಣ ಕ್ರಮ ಸರಳವಾಗಬೇಕು.ಇಂಗ್ಲಿಷರ ಕ್ರಮ ಬಹಳ ಹಳೆಯದು ಮತ್ತು ಬಹಳ ಎಳಸು. ನಾವು ಅದನ್ನೇ ಅನುಕರಿಸುತ್ತಿದ್ದೇವೆ. ಈ ಕ್ರಮವನ್ನು ಸರಳಮಾಡಿ, ಕೋರ್ಟಿಗೆ ಬರುವವರು. ತಮ್ಮ ಪಕ್ಷವನ್ನು (ವಾದವನ್ನು) ತಾವೇ ಮಂಡಿಸಲು ಸಾಧ್ಯವಾಗುವಂತೆ ಸುಲಭವಾಗುವಂತೆ ನಡೆಸುವುದು ಎಲ್ಲ ವಸಾಹತುಗಳಲ್ಲಿ ನಡೆಯುತ್ತಿದೆ.

4. ಮಾದಕ ಪಾನೀಯಗಳ ಮತ್ತು ಔಷಧಗಳ ಮೂಲಕ ಬರುವ ರಾಜ್ಯದ ಆದಾಯವನ್ನು ನಿಲ್ಲಿಸಬೇಕು.

5. ಸಿವಿಲ್ ಮತ್ತು ಸೈನಿಕ ನೌಕರಿಗಳ ಸಂಬಳಗಳನ್ನು ದೇಶದ ಪರಿಸ್ಥಿತಿಗೆ ಅನುಗುಣವಾದ ಮಟ್ಟಕ್ಕೆ ಇಳಿಸಬೇಕು.

6. ದೇಶವನ್ನು ಭಾಷಾನುಗುಣವಾಗಿ ವಿಂಗಡಿಸತಕ್ಕದ್ದು. ಪ್ರತಿಯೊಂದು ಪ್ರಾಂತಕ್ಕೂ ಒಳಾಡಳಿತವನ್ನೂ, ವಿಕಾಸವನ್ನೂ ಸಾಧಿಸಲು ಪೂರ್ಣ ಸ್ವಾತಂತ್ರ್ಯ ಇರತಕ್ಕದ್ದು.

7. ವಿದೇಶಿಯರಿಗೆ ಕೊಟ್ಟಿರುವ ಎಲ್ಲ ಗುತ್ತಿಗೆಗಳನ್ನು ಪರೀಕ್ಷೆ ಮಾಡಲು ಒಂದು ಆಯೋಗ ರಚಿಸಬೇಕು. ಆ ಆಯೋಗದ ವರದಿಗೆ ವಿರೋಧವಾಗದಂತೆ ನ್ಯಾಯವಾಗಿ ಸಂಪಾದಿಸಿದ ಎಲ್ಲ ಹಕ್ಕುಗಳಿಗೂ ಪೂರ್ಣ ಭರವಸೆ ಕೊಡಬೇಕು.

8. ಸಂಸ್ಥಾನಿಕರಿಗೆ ಅವರ ಸ್ಥಾನಮಾನಗಳ ಬಗ್ಗೆ ಅಭಯ ಕೊಡಬೇಕು. ಕೇಂದ್ರ ಸರಕಾರ ಯಾವ ಆತಂಕವನ್ನೂ ಅವರಿಗೆ ಒಡ್ಡಬಾರದು. ಯಾವ ಅಪರಾಧವನ್ನೂ ಮಾಡದ ಸಂಸ್ಥಾನಿ ಪ್ರಜೆಗಳು ಸ್ವತಂತ್ರ ಭಾರತದಲ್ಲಿ ನೆಲೆಸಲು ಅವಕಾಶ ಇರಬೇಕು.

9. ಎಲ್ಲ ನಿರಂಕುಶಾಧಿಕಾರವನ್ನೂ ತೆಗೆದುಹಾಕಬೇಕು.

10. ದೇಶದ ಪರಮೋಚ್ಚ ಪದವಿ, ಅರ್ಹರಾದವರೆಲ್ಲರಿಗೂ ಲಭ್ಯ ಇರಬೇಕು. ಸಿವಿಲ್ ಮತ್ತು ಸೈನಿಕ ನೌಕರಿಗಳಿಗೆ ಪರೀಕ್ಷೆಗಳು ಭಾರತದಲ್ಲಿಯೇ ನಡೆಯಬೇಕು.

11. ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯ ಇರಬೇಕು. ಆದರೆ ಪರಸ್ಪರ ಸಹನೆಯೂ ಇರಬೇಕು.

12. ಪ್ರಾಂತೀಯ ಸರ್ಕಾರಗಳಿಗೆ ಶಾಸನ ಸಭೆಗಳಿಗೆ, ಕೋರ್ಟುಗಳಿಗೆ ಇಂತಿಷ್ಟು ಕಾಲದಲ್ಲಿ ಎಂದು ನಿಗದಿ ಮಾಡಿ, ಆ ಕಾಲದೊಳಗಾಗಿ ಆಯಾ ಪ್ರಾಂತೀಯ ಭಾಷೆಯೇ ಅಧಿಕೃತ ಭಾಷೆ ಆಗಬೇಕು. ಪರಮೋಚ್ಚ ಪುನರ್ವಿಮರ್ಶೆ ನ್ಯಾಯಾಲಯಕ್ಕೆ ಹಿಂದೂಸ್ಥಾನೀ ಭಾಷೆ ಮಾಧ್ಯಮವಾಗಬೇಕು. ಲಿಪಿ ಪಾರ್ಶಿ ಆದರೂ ಆಗಬಹುದು. ದೇವನಾಗರೀ ಆದರೂ ಆಗಬಹುದು, ಕೇಂದ್ರ ಸರಕಾರದ ಮತ್ತು ಕೇಂದ್ರ ಶಾಸನ ಸಭೆಯ ಭಾಷೆಯು ಹಿಂದೂಸ್ಥಾನಿಯೇ ಆಗಬೇಕು. ಅಂತರರಾಷ್ಟ್ರೀಯ ರಾಜ್ಯತಂತ್ರದ ಭಾಷೆ ಇಂಗ್ಲೀಷ್ ಇರಬೇಕು.

ನನ್ನ ಅಭಿಪ್ರಾಯದಲ್ಲಿ ಸ್ವರಾಜ್ಯಕ್ಕೆ ಏನು ಬೇಕೋ ಅದನ್ನು ಹೇಳಿದ್ದೇನೆ. ಇದರಲ್ಲಿ ಕೆಲವು ಅತಿಯಾಯಿತು ಎಂದು ನಗಲಾರಿರಿ ಎಂದು ನಂಬಿದ್ದೇನೆ. ನಾನು ಹೇಳಿರುವ ಈ ಕೆಲಸವನ್ನು ಸಾಧಿಸಲು ಇವತ್ತು ನಮಗೆ ಅಧಿಕಾರವಿಲ್ಲ. ಹೋಗಲಿ, ಸಂಕಲ್ಪವಾದರೂ ಇದೆಯೇ? ಕನಿಷ್ಠ ಪಕ್ಷ ಹಂಬಲ ಬೆಳೆಸಿಕೊಳ್ಳೋಣ. ಈ ವಿಚಾರ ಬಹಳ ಆಕರ್ಷಕ. ಏಕೆಂದರೆ, ಇದು ಊಹಾ ಪ್ರಪಂಚದ್ದು. ನನ್ನ ಈ ಸೂಚನೆಗೆ ಬೇರಾವ ವ್ಯಕ್ತಿಯ ಸೂಚನೆಗಿಂತಲೂ ಹೆಚ್ಚು ಗಮನ ಕೊಡಬೇಕೆಂದು ನಾನು ಕೇಳುವುದಿಲ್ಲ ಎಂದು ಸ್ವರಾಜ್ಯ ಯೋಜನೆಯನ್ನು ತಯಾರಿಸುವ ಆ ಸಮಿತಿಗೆ ಭರವಸೆ ಕೊಡುತ್ತೇನೆ. ಈ ಭಾಷಣದಲ್ಲಿ ಅದನ್ನು ಸೇರಿಸಿರುವ ಕಾರಣ, ಅದಕ್ಕೆ ಹೆಚ್ಚು ಪ್ರಚಾರ ಸಿಗಲಿ ಎಂದು. ಬೇರೆ ರೀತಿಯಿಂದ ಇಷ್ಟು ಪ್ರಚಾರ ಸಿಗಲಿಕ್ಕಿಲ್ಲ.

ಸ್ವಾತಂತ್ರ್ಯ

ಮೇಲೆ ಹೇಳಿದ್ದೆಲ್ಲವು ಬ್ರಿಟಿಷರ ಸಂಬಂಧವು. ಸಮಾನತೆಯ ಆಧಾರದ ಮೇಲೆ ಪೂರ್ಣ ಗೌರವದಿಂದ ಇರಬೇಕು ಎಂಬುದನ್ನು ತಿಳಿಸುತ್ತದೆ. ಆದರೆ ಎಂಥ ಸಂದರ್ಭವೇ ಬರಲಿ, ಪೂರ್ಣ ಸ್ವಾತಂತ್ರ್ಯವನ್ನು ಬಯಸಿ ಬ್ರಿಟಿಷಿನ ಸಂಬಂಧವು ಸ್ವಲ್ಪವೂ ಇರಕೂಡದು ಎಂಬ ಜನರು ಕಾಂಗ್ರೆಸ್ಸಿನಲ್ಲಿಯೂ ಇದ್ದಾರೆ. ಅವರಿಗೆ ಸಮಾನತೆಯ ಸಂಬಂಧವೂ ಬೇಡ. ನನ್ನ ಅಭಿಪ್ರಾಯ

ಹೀಗಿದೆ: ಬ್ರಿಟಿಷ್ ಸರಕಾರ ತಾನು ಆಡಿದಂತೆ ಮಾಡಬಯಸಿದರೆ, ನಮಗೆ ಸಮಾನತೆ ಸಿಗುವುದಾದರೆ, ಸಂಪೂರ್ಣವಾಗಿ ಬ್ರಿಟಿಷರ ಸಂಬಂಧ ತ್ಯಾಗಕ್ಕಿಂತ ಅದು ಹೆಚ್ಚಿನ ಗೆಲವು. ಆದ್ದರಿಂದ ಸಾಮ್ರಾಜ್ಯದ ಒಳಗೆಯೇ ಸ್ವರಾಜ್ಯಕ್ಕಾಗಿ ಎಂದರೆ ವಸಾಹತು ಸ್ವರಾಜ್ಯಕ್ಕಾಗಿ ಪ್ರಯತ್ನ ಮಾಡುತ್ತೇನೆ. ಆದರೆ ಬ್ರಿಟನ್ನಿನ ತಪ್ಪಿನಿಂದ ಸಂಬಂಧತ್ಯಾಗ ಅಗತ್ಯವಾದರೆ ನಾನು ಅದಕ್ಕೂ ಸಿದ್ಧ. ಈ ವಿಷಯದಲ್ಲಿ ಹಿಂದೆ ಮುಂದೆ ನೋಡಲಿಕ್ಕಿಲ್ಲ. ಹೀಗೆ ಪರಸ್ಪರ ವಿಯೋಗ ಆದರೆ ಅದರ ಹೊಣೆ ಅವರ ಮೇಲೆಯೇ. ಜಗತ್ತಿನ ಬುದ್ಧಿಜೀವಿಗಳೆಲ್ಲರೂ, ಪರಸ್ಪರ ಅವಲಂಬಿತವಾಗಿರುವ ರಾಜ್ಯ-ಸಮೂಹ ಇರಬೇಕು, ಒಂದರೊಡನೆ ಒಂದು ಸದಾ ಯುದ್ಧ ಮಾಡುತ್ತಿರುವ ಪೂರ್ಣ ಸ್ವತಂತ್ರ ರಾಜ್ಯಗಳು ಬೇಡವೇ ಬೇಡ ಎನ್ನುತ್ತಾರೆ. ಅಂಥಹ ದಿನ ಬೇಗ ಬರಲಿಕ್ಕಿಲ್ಲ. ನಮ್ಮ ದೇಶಕ್ಕಾಗಿ ನಾನು ಹೆಚ್ಚು ಏನನ್ನೂ ಹೇಳುವುದಿಲ್ಲ. ಆದರೆ ಸ್ವಾತಂತ್ರ್ಯಕ್ಕಿಂತಲೂ ಜಾಗತಿಕ ಅನ್ಯೋನ್ಯ ಅವಲಂಬನೆಗೆ ನಾವು ಸಿದ್ಧರಾಗಿದ್ದೇವೆ ಎಂದು ಹೇಳುವುದು ಹೆಚ್ಚುಗಾರಿಕೆಯೂ ಅಲ್ಲ ಅಸಾಧ್ಯವಾದ ಮಾತೂ ಅಲ್ಲ. ಭಾರತದ ಜೊತೆಗೆ ಯಾವ ಸಂಬಂಧವೂ ಬೇಡ ಎಂದು ಬ್ರಿಟನ್ ಬೇಕಾದರೆ ಹೇಳಲಿ; ಸಂಪೂರ್ಣ ಸ್ವಾತಂತ್ರ್ಯವನ್ನು ಘೋಷಿಸದೆಯೇ ಪೂರ್ಣ ಸ್ವತಂತ್ರವಾಗಿರುವ ಸಾಮರ್ಥ್ಯವನ್ನು ನಾನು ಬಯಸುತ್ತೇನೆ. ಸಾಮ್ರಾಜ್ಯದೊಳಗೆ ಭಾರತಕ್ಕೆ ಸಂಪೂರ್ಣ ಸಮಾನತೆ ಇದೆ ಎಂದು ಬ್ರಿಟನ್ ಘೋಷಿಸುವದಾದರೆ, ನನ್ನ ಯೋಜನೆಯಲ್ಲಿ ಒಂದು ಸ್ನೇಹ ಸಂಬಂಧ ಇದ್ದೇ ಇರುತ್ತದೆ. ಸಂಬಂಧವಿಲ್ಲದ ಸಂಪೂರ್ಣ ಸ್ವಾತಂತ್ರ್ಯ ಇರದು. ಕಾಂಗ್ರೆಸ್ಸಿಗರು ಪ್ರತಿಯೊಂದು ಸಂದರ್ಭದಲ್ಲಿಯೂ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಒತ್ತಾಯ ಮಾಡಬಾರದೆಂದು ಪ್ರತಿಯೊಬ್ಬರನ್ನೂ ಪ್ರಾರ್ಥಿಸುತ್ತೇನೆ. ಅದು ಅಸಾಧ್ಯವೆಂದಲ್ಲ. ಆದರೆ ಅನವಶ್ಯಕ. ಬ್ರಿಟನ್ ಸಂಪೂರ್ಣ ಸಮಾನತೆ ಕೊಡುವ ಘೋಷಣೆ ಮಾಡಿದರೂ, ಅವರ ನಿಜವಾದ ಉದ್ದೇಶ ನಮ್ಮನ್ನು ಅಧೀನದಲ್ಲೇ ಇಟ್ಟುಕೊಳ್ಳುವುದು ಸ್ಪಷ್ಟ ಎನ್ನುವುದು ವ್ಯಕ್ತವಾಗುವವರೆಗೆ ಸಂಪೂರ್ಣ ಸ್ವಾತಂತ್ರ್ಯಕ್ಕೆ ಒತ್ತಾಯ ಪಡಿಸುವುದು ಅನವಶ್ಯಕ.

ಸ್ವರಾಜ್ಯ ಪಕ್ಷ

ಇಲ್ಲಿಯವರೆಗೆ ಒಪ್ಪಂದದ ಮೂಲವನ್ನೂ ಅದರಿಂದ ಹುಟ್ಟುವ ಅನೇಕ ಪ್ರಶ್ನೆಗಳನ್ನು ಪರಿಶೀಲಿಸಿದ್ದಾಯಿತು. ಸ್ವರಾಜ್ಯ ಪಕ್ಷಕ್ಕೆ ಕೊಟ್ಟ ಸಮಾನತೆಯ ಬಗ್ಗೆ ಹೆಚ್ಚು ಹೇಳಬೇಕಾದ್ದು ಏನೂ ಇಲ್ಲ. ಇದನ್ನು ತಪ್ಪಿಸಿದ್ದರೆ ಚನ್ನಾಗಿತ್ತು. ಆ ಪಕ್ಷ ಅಯೋಗ್ಯವೆಂದಲ್ಲ, ಶಾಸನಸಭಾ ಪ್ರವೇಶದ ಬಗ್ಗೆ ಅವರ ಅಭಿಪ್ರಾಯಗಳು ನನಗೆ ಸಮತವಿಲ್ಲ ಎಂದು. ಆದರೆ ಕಾಂಗ್ರೆಸ್ಸಿನೊಳಗೆ ಇದ್ದು, ಮುಂದೆ ನಿಂತು ಅದನ್ನು ನಡೆಸಲು ಬೇಕಾದರೆ ಇದ್ದ ಸಂಗತಿಗಳನ್ನು ಇದ್ದ ಹಾಗೆಯೇ ಗ್ರಹಿಸಬೇಕು. ಕಾಂಗ್ರೆಸನ್ನು ಬಿಟ್ಟು ಹೋಗುವುದೂ ನನಗೆ ಸುಲಭವಾಗಿತ್ತು. ಈ ಅಧ್ಯಕ್ಷ ಪದವಿಯ ಗೌರವವನ್ನು ನಿರಾಕರಿಸಲೂ ಬರುತ್ತಿತ್ತು. ಆದರೆ ಹಾಗೆ ಮಾಡುವುದು ದೇಶಕ್ಕೆ ಹಿತವಲ್ಲ ಎಂದು ನಾನು ಯೋಚಿಸಿದೆ. ಈಗಲೂ ನನ್ನ ಯೋಚನೆ ಹಾಗೆಯೇ ಇದೆ. ಸ್ವರಾಜ್ಯ ಪಕ್ಷಕ್ಕೆ ಕಾಂಗ್ರೆಸ್ಸಿನಲ್ಲಿ ಬಹುಸಂಖ್ಯೆ ಇರದಿದ್ದರೂ, ದಿನೇ ದಿನೇ ಬೆಳೆಯುತ್ತಿರುವ ಬಲಿಷ್ಠವಾದ ಅಲ್ಪಸಂಖ್ಯೆ ಅದು. ಆ ಪಕ್ಷದವರ ಗೌರವದ ಪ್ರಶ್ನೆಯ ಮೇಲೆ ಕಾಂಗ್ರೆಸ್ಸನ್ನು ಇಬ್ಭಾಗ ಮಾಡಬಾರದೆಂದು ನಾನೆಂದರೆ ಅವರ ಕರಾರುಗಳಿಗೆ ನಾನು ಒಪ್ಪಲೇಬೇಕು.



ಬೆಳಗಾವಿಯ ಕಾಂಗ್ರೆಸ್ ಮಹಾ ಅಧಿವೇಶನಕ್ಕೆ ಆಗಮಿಸುತ್ತಿರುವ ಕಾಂಗ್ರೆಸ್ ನಾಯಕರು, ಡಿಸೆಂಬರ್ 1924



ಗೋಪಾಲಕೃಷ್ಣ ಗೋಖಲೆ ಅವರ ಡರ್ಬನ್ ಭೇಟಿ, 1912. ಮುಂಭಾಗ (ಎಡದಿಂದ ಬಲಕ್ಕೆ): ಕಲ್ಲೆನ್‌ಬಾಕ್, ಗಾಂಧೀಜಿ, ಗೋಖಲೆ, ರುಸ್ತಮ್‌ಜೀ

ಇಷ್ಟೇ, ಆ ಕರಾರು ನನ್ನ ಅಂತರಂಗಕ್ಕೆ ವಿರುದ್ಧವಾಗಿರಬಾರದು. ಅವರೇನೂ ಅವಿಚಾರಿಗಳಲ್ಲ. ತಮ್ಮ ಧೋರಣೆಗೆ ಸ್ವರಾಜ್ಯ ಪಕ್ಷದವರು ಕಾಂಗ್ರೆಸ್ಸಿನ ಹೆಸರನ್ನು ಬಳಸಬಯಸುತ್ತಾರೆ. ಅವರು ಹಾಗೆ ಮಾಡಲು ಅವಕಾಶ ಇರಬೇಕು. ಆದರೆ ಅವರು ತಮ್ಮ ಧೋರಣೆಯಿಂದ ಅಪರಿವರ್ತನವಾದಿಗಳನ್ನು ಬದಲಾಯಿಸಲು ಪ್ರಯತ್ನಿಸಬಾರದು. ಇಂಥ ಒಂದು ಸೂತ್ರವನ್ನು ಹುಡುಕಬೇಕಾಗಿತ್ತು. ಅದನ್ನು ಮಾಡಲು ಒಂದು ಮಾರ್ಗ ಅವರ ಧೋರಣೆಯನ್ನು ಅವರು ಅನುಸರಿಸಲು, ಅದನ್ನು ನಿಶ್ಚಯಿಸಲು, ಅವರಿಗೆ ಆರ್ಥಿಕ ಮತ್ತು ವ್ಯಾವಹಾರಿಕ ಜವಾಬ್ದಾರಿಯನ್ನೂ ಅಧಿಕಾರವನ್ನೂ ಕೊಡುವುದು. ಇಡೀ ಕಾಂಗ್ರೆಸ್ಸೇ ಆ ಕೆಲಸ ಮಾಡಬೇಕು ಎಂದರೆ ಆ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ನಾನು ಅದನ್ನು ಹೊರಲಾರೆ. ಅಪರಿವರ್ತನವಾದಿಗಳಾದರೂ ಹೊರಲಾರರು ಎಂದು ನನಗೆ ಅನಿಸುತ್ತದೆ. ಅದರ ಧೋರಣೆಯನ್ನು ನಾನು ನಿಶ್ಚಯಿಸಲಾರೆ. ನನಗೆ ಅದರಲ್ಲಿ ಮನಸ್ಸಿಲ್ಲ. ನಂಬಿಕೆ ಇದ್ದರಷ್ಟೇ ಆ ಕಡೆ ಒಲವು. ಹೀಗೆ ಸ್ವರಾಜ್ಯ ಪಕ್ಷಕ್ಕೆ, ತನ್ನ ಶಾಸನಾಸಭಾ ಪ್ರವೇಶದ ಕಾರ್ಯಕ್ರಮಕ್ಕೆ ಕಾಂಗ್ರೆಸ್ಸಿನ ಹೆಸರು ಬಳಸಲು ಪೂರ್ಣ ಅಧಿಕಾರ ಕೊಟ್ಟರೆ ಕಾಂಗ್ರೆಸ್ಸಿಗೆ ಸೇರಬಯಸುವ ಇತರ ಪಕ್ಷಗಳಿಗೆ ಯಡವಟ್ಟಾಗುತ್ತದೆ. ಇದು ಅನಿವಾರ್ಯ ಎಂದು ನನಗೆ ಅಂಜಿಕೆ. ಸ್ವರಾಜ್ಯಪಕ್ಷ ತನಗೆ ಈಗಿರುವ ವಿಶೇಷ ಅನುಕೂಲತೆಯನ್ನು ಬಿಟ್ಟುಕೊಡಲಾರದು. ಅದಕ್ಕೆ ಈ ಅನುಕೂಲ ತನಗಾಗಿ ಬೇಕಾಗಿಲ್ಲ, ದೇಶದ ಸೇವೆಗಾಗಿ ಬೇಕು. ಎಲ್ಲ ಪಕ್ಷಗಳಿಗೂ ಇರುವಂತಹ ಆಸೆ ಅದೇ. ಬೇರೆ ಸಾಧ್ಯವಿಲ್ಲ. ಆದ್ದರಿಂದ ಇತರರು ಕಾಂಗ್ರೆಸ್ಸಿಗೆ ಸೇರಿ ಒಳಗೆ ನಿಂತು ಕೆಲಸಮಾಡಿ, ದೇಶದ ಧೋರಣೆಗಳನ್ನು ರೂಪಿಸಬಹುದು. ಡಾ. ಅನಿಬೆಸೆಂಟ್ ಆ ದಾರಿಯಲ್ಲಿ ಕೆಲಸಮಾಡಿದ್ದಾರೆ. ಇನ್ನೂ ಎಷ್ಟೋ ಕೆಲಸ ಆಗಬೇಕೆಂದು ಆಕೆಯ ಮನಸ್ಸು. ಆದರೆ ಸಂಸ್ಥೆಯ ಒಳಗಡೆ ಇದ್ದುಕೊಂಡು ಕಾಂಗ್ರೆಸ್ಸಿನ ಮತದಾರರನ್ನು ತನ್ನ ಅಭಿಪ್ರಾಯಕ್ಕೆ ಒಪ್ಪುವಂತೆ ಮಾಡಬಹುದು ಎಂದು ಆಕೆ ಭಾವಿಸಿದ್ದಾಳೆ. ಪರಿವರ್ತನವಾದಿಗಳು ನಿಸ್ಸಂಕೋಚವಾಗಿ ಈ ಒಪ್ಪಂದಕ್ಕೆ ಮತ ಕೊಡಬಹುದು ಎಂದು ನನ್ನ ಅಭಿಪ್ರಾಯ. ಎಲ್ಲರೂ ಎಲ್ಲ ಗುಂಪುಗಳು ಒಟ್ಟುಗೂಡಿ ನಡೆಸಬಹುದಾದ ರಾಷ್ಟ್ರೀಯ ಕಾರ್ಯಕ್ರಮ ಎಂದರೆ ಖಾದಿ, ಹಿಂದೂ ಮುಸ್ಲಿಂ ಐಕ್ಯ, ಹಿಂದೂಗಳಿಗಾಗಿ ಅಸ್ಪೃಶ್ಯತಾ ನಿವಾರಣೆ. ಇಷ್ಟೆ ಅಲ್ಲವೇ ಅವರಿಗೆ ಬೇಕಾದ್ದು.

ಕೇವಲ ಸಾಮಾಜಿಕ ಸುಧಾರಣೆಯೋ?

ಈ ಕಾರ್ಯಕ್ರಮವು ಕಾಂಗ್ರೆಸ್ಸನ್ನು ಕೇವಲ ಸಾಮಾಜಿಕ ಸುಧಾರಣೆಯ ಸಂಸ್ಥೆಯಾಗಿ ಮಾಡುತ್ತದೆ ಎನ್ನುತ್ತಾರೆ ಕೆಲವರು. ನನ್ನ ಅಭಿಪ್ರಾಯ ಬೇರೆ. ಸ್ವರಾಜ್ಯಕ್ಕೆ ಬೇಕಾದ ಅತ್ಯಗತ್ಯ ವಿಷಯಗಳು ಸಮಾಜ ಸುಧಾರಣೆಗಿಂತ ಹೆಚ್ಚಿನವು. ಅವನ್ನು ಕಾಂಗ್ರೆಸ್ಸು ಕೈಕೊಳ್ಳಬೇಕು. ಕಾಂಗ್ರೆಸ್ಸು ಯಾವಾಗಲೂ ಇದೊಂದೇ ಕೆಲಸ ಮಾಡುತ್ತ ಇರಬೇಕೆಂದು ನನ್ನ ವಿಚಾರವಲ್ಲ. ಆದರೆ ಬರುವ ವರ್ಷ ಪೂರಾ ತನ್ನ ಶಕ್ತಿಯನ್ನು ರಚನಾತ್ಮಕ ಕಾರ್ಯಕ್ಕೆ ಅಥವಾ ನನ್ನ ವಿವರಣೆಯಂತೆ ಆಂತರಿಕ ವಿಕಾಸಕ್ಕೆ ಕಾಂಗೆಸ್ಸು ಗಮನ ಕೊಡಬೇಕು.

ಈ ಒಪ್ಪಂದದಲ್ಲಿ ಸೇರಿಸಿದ ರಚನಾತ್ಮಕ ಕಾರ್ಯಗಳನ್ನೇ ಕಾಂಗ್ರೆ

ಕೈಕೊಳ್ಳಬೇಕಾದ ರಚನಾತ್ಮಕ ಕಾರ್ಯಕ್ರಮಗಳು ಎಂದರ್ಥವಲ್ಲ. ಅವು ಇನ್ನೂ ಬೇಕಾದಷ್ಟಿವೆ. ಈಗ ನಾನು ಹೇಳಲಿರುವ ಕಾರ್ಯಕ್ರಮಗಳು ಸಹ ಬಹಳ ಮುಖ್ಯವಾದವು. ಅವು ವಿವಾದಾತ್ಮಕ ಅಲ್ಲದ್ದರಿಂದ ಮತ್ತು ಮೇಲೆ ಹೇಳಿದ ಮೂರು ಕಾರ್ಯಕ್ರಮಗಳಷ್ಟು ಸ್ವರಾಜ್ಯಕ್ಕೆ ಅವಶ್ಯಕವಲ್ಲದ್ದರಿಂದ ಅವನ್ನು ಈ ಒಪ್ಪಂದದಲ್ಲಿ ಸೇರಿಸಿಲ್ಲ.

ರಾಷ್ಟ್ರೀಯ ಶಾಲೆಗಳು

ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಅಂಥದೊಂದು ಕಾರ್ಯ. ಜನತೆಗೆ ಗೊತ್ತಿದೆಯೋ ಇಲ್ಲವೋ ಖಾದಿಯ ತರುವಾಯ ಈ ಸಂಸ್ಥೆಗಳ ನಿರ್ವಹಣೆಯ ಹೆಚ್ಚು ಯಶಸ್ವಿಯಾಗಿದ್ದು, ಇದನ್ನು ಕೈಬಿಡಲು ಆಗದು. ಕೆಲವೇ ವಿದ್ಯಾರ್ಥಿಗಳಾದರೂ ಚಿಂತೆ ಇಲ್ಲ, ತಮ್ಮ ಕಾಲೇಜುಗಳನ್ನು ರಾಷ್ಟ್ರೀಯ ಶಾಲೆಗಳನ್ನೂ ಮುಂದುವರಿಸಿಕೊಂಡು ಹೋಗಬೇಕಾದ್ದು ಪ್ರಾಂತಗಳಿಗೆ ಒಂದು ಗೌರವದ ವಿಷಯ. ಅಸಹಕಾರವನ್ನು ನಿಲ್ಲಿಸಿದ್ದರಿಂದ ಈ ಸಂಸ್ಥೆಗಳ ಮೇಲೆ ಯಾವ ಕೆಟ್ಟ ಪರಿಣಾಮವೂ ಆಗಬಾರದು. ಅದಕ್ಕೆ ಬದಲು ಇವನ್ನು ಸ್ಥಿರಗೊಳಿಸಿ, ಬಲಪಡಿಸಲು ಹೆಚ್ಚು ಪ್ರಯತ್ನ ನಡೆಯಬೇಕು. ಅನೇಕ ಪ್ರಾಂತಗಳಲ್ಲಿ ರಾಷ್ಟ್ರೀಯ ಶಾಲೆಗಳು ಕಾಲೇಜುಗಳು ಇವೆ. ಗುಜರಾತ್ ಪ್ರಾಂತ ಒಂದರಲ್ಲೇ ರಾಷ್ಟ್ರೀಯ ವಿದ್ಯಾಪೀಠ ಇದೆ. ಸುಮಾರು 1 ಲಕ್ಷ ರೂಪಾಯಿ ವೆಚ್ಚ ಮಾಡಿ ನಿರ್ವಹಣೆ ಮಾಡಲಾಗುತ್ತಿದೆ. 3 ಕಾಲೇಜುಗಳು ಮತ್ತು 9,000 ವಿದ್ಯಾರ್ಥಿಗಳನ್ನು ಹೊಂದಿರುವ 70 ಶಾಲೆಗಳ ಮೇಲೆ ನಿಯಂತ್ರಣ ಹೊಂದಿದೆ ಈ ಪೀಠ. ಇದು ಅಹಮದಾಬಾದ್ನಲ್ಲಿ ತನ್ನದೇ ಆದ ಜಮೀನನ್ನು ಪಡೆದುಕೊಂಡಿದೆ ಮತ್ತು ಈಗಾಗಲೇ ಕಟ್ಟಡಗಳಿಗಾಗಿ ರೂ. 2,05,323 ವೆಚ್ಚ ಮಾಡಿದೆ. ದೇಶಾದ್ಯಂತ ಈ ರೀತಿಯ ಕೆಲಸ ಸದ್ದಿಲ್ಲದೇ ಅತ್ಯುತ್ತಮವಾಗಿ ನಡೆದಿದೆ. ಅಸಹಕಾರ ಮಾಡಿದ ವಿದ್ಯಾರ್ಥಿಗಳ ಕೆಲಸವಿದು. ಅವರ ತ್ಯಾಗವು ಅತ್ಯುತ್ತಮ, ಅತಿ ಶ್ರೇಷ್ಠ. ಪ್ರಾಪಂಚಿಕ ದೃಷ್ಟಿಯಿಂದ ಅವರು ತಮ್ಮ ಉಜ್ವಲ ಭವಿಷ್ಯವನ್ನು ಕಳೆದುಕೊಂಡಿರಬಹುದು. ಆದರೆ ರಾಜಕೀಯ ದೃಷ್ಟಿಯಿಂದ, ಅವರಿಗಾದ ನಷ್ಟಕ್ಕಿಂತ ಲಾಭವೇ ಹೆಚ್ಚು ಎನ್ನುತ್ತೇನೆ. ಈ ವಿದ್ಯಾರ್ಥಿಗಳು ತಮ್ಮ ಮೊದಲಿನ ಶಾಲೆ ಕಾಲೇಜುಗಳನ್ನು ತೊರೆದರು. ಏಕೆಂದರೆ ಈ ಶಾಲೆ ಕಾಲೇಜುಗಳಲ್ಲಿ ತರಬೇತಾದ ಜನರಿಂದಲೇ ರಾಷ್ಟ್ರದ ತರುಣ ಜನಾಂಗಕ್ಕೆ ಪಂಜಾಬಿನಲ್ಲಿ ಅಪಮಾನವಾಯಿತು, ತೇಜೋಭಂಗವಾಯಿತು. ನಮ್ಮ ಗುಲಾಮಗಿರಿಯ ಮೊದಲನೇಯ ಕೊಂಡಿ ಈ (ಬ್ರಿಟಿಷ್ ಚಾಲಿತವಾದ) ಶಾಲೆಗಳಲ್ಲಿ ಸಿದ್ಧವಾಗುತ್ತದೆ. ಇದಕ್ಕೆ ವಿರುದ್ಧವಾದ ರಾಷ್ಟ್ರೀಯ ಶಾಲೆಗಳು ಎಷ್ಟೇ ಕ್ಷಮತೆಯಿಂದ ಕಾರ್ಯ ನಿರ್ವಹಿಸಿದರೂ, ನಮ್ಮ ಸ್ವಾತಂತ್ರ್ಯದ ಮೊದಲ ಸಾಧನಗಳನ್ನು ರೂಪಿಸುವ ಕಾರ್ಖಾನೆಗಳಾಗಿವೆ. ಮುಂದಿನ ಭವಿಷ್ಯವು ನಮ್ಮ ಈ ರಾಷ್ಟ್ರೀಯ ಸಂಸ್ಥೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರ ಕೈಯಲ್ಲೇ ಇದೆ. ಆದ್ದರಿಂದ ನಾನು ಈ ಸಂಸ್ಥೆಗಳ ನಿರ್ವಹಣೆಯನ್ನು ಪ್ರಾಂತೀಯ ನಿಧಿಗಳ ಮೊದಲ ಜವಾಬ್ದಾರಿ ಎಂದು ಪರಿಗಣಿಸುತ್ತೇನೆ.

ಆದರೆ ಈ ಸಂಸ್ಥೆಗಳು ನಿಜವಾಗಿಯೂ ರಾಷ್ಟ್ರೀಯವಾಗಬೇಕಾದರೆ, ನಿಜವಾದ ಹಿಂದೂ–ಮುಸ್ಲಿಂ ಐಕ್ಯತೆಯನ್ನು ಉತ್ತೇಜಿಸಬೇಕು. ಹಿಂದೂ ಬಾಲಕ–ಬಾಲಕಿಯರು ಅಸ್ಪೃಶ್ಯತೆಯನ್ನು ಹಿಂದೂ ಧರ್ಮದ ಮೇಲಿನ ಕಳಂಕ ಮತ್ತು ಮಾನವೀಯತೆಯ ವಿರುದ್ಧದ ಅಪರಾಧವೆಂದು ಪರಿಗಣಿಸಲು ತರಬೇತಿ ನೀಡುವ ನರ್ಸರಿಗಳಾಗಿಯೂ (ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ) ಇರಬೇಕು. ಅವರಿಗೆ ಈ ವಿಷಯದಲ್ಲಿ ತರಬೇತಿ ದೊರೆಯುವಂತಾಗಬೇಕು. ನೂಲುವವರಿಗೆ ನೇಯುವವರಿಗೆ ಅತ್ಯುತ್ತಮ ತಾಂತ್ರಿಕ ಶಿಕ್ಷಣ ಕೊಡಬೇಕು. ಚರಕದಲ್ಲಿ ಖಾದಿಯಲ್ಲಿ ಕಾಂಗ್ರೆಸ್ಸಿಗೆ ವಿಶ್ವಾಸ ಉಳಿದುಕೊಂಡಿದ್ದರೆ ಚರಖಾಶಾಸ್ತ್ರವನ್ನು ಈ ಸಂಸ್ಥೆಗಳು ಒದಗಿಸಬೇಕು ಎಂದು ಅಪೇಕ್ಷಿಸುವ ಅಧಿಕಾರ ನಮಗಿದೆ. ಇವು ಖಾದಿ ನಿರ್ಮಾಣದ ಕಾರ್ಖಾನೆಗಳಾಗಬೇಕು. ಹೀಗೆಂದರೆ ವಿದ್ಯಾರ್ಥಿಗಳಿಗೆ ಅಕ್ಷರ ಶಿಕ್ಷಣವೇ ಬೇಡ ಎಂದಲ್ಲ. ಆದರೆ ಹಸ್ತಕೌಶಲದ ಶಿಕ್ಷಣ ಮತ್ತು ಅಂತಃ ಕರಣದ ಶಿಕ್ಷಣ ಬೌದ್ಧಿಕ ಶಿಕ್ಷಣದ ಜೊತೆಗೆಯೇ ನಡೆಯಬೇಕೆಂದು ನನ್ನ ಅಭಿಪ್ರಾಯ. ರಾಷ್ಟ್ರೀಯ ಸಂಸ್ಥೆಯ ಯೋಗ್ಯತೆ ಅದರ ಪ್ರಯೋಜನ ನಮಗೆ ತಿಳಿಯಬೇಕಾದುದು ವಿದ್ಯಾರ್ಥಿಗಳ ಗ್ರಂಥ ಪಾಂಡಿತ್ಯದ ಹಿರಿಮೆಯಿಂದಲ್ಲ. ರಾಷ್ಟ್ರೀಯ ಚಾರಿತ್ರ್ಯ, ಹಿಂಜುವ ಬಿಲ್ಲನ್ನು ಚರಕವನ್ನು ಮಗ್ಗವನ್ನು ಉಪಯೋಗಿಸುವ ಕೌಶಲ್ಯಗಳಿಂದ ಅಳೆಯಬೇಕು. ರಾಷ್ಟ್ರೀಯ ಶಾಲೆ ಕಾಲೇಜು ಯಾವುದೂ ಮುಚ್ಚಬಾರದು ಎಂದು ನನ್ನ ಚಿಂತನೆ. ಆದರೆ ಹಿಂದೂಗಳಲ್ಲದವರನ್ನು ಸೇರಿಸಿಕೊಳ್ಳಲು ಹಿಂದೆ ಮುಂದೆ ನೋಡುವ ಅಸ್ಪೃಶ್ಯರನ್ನು ಸೇರಿಸಿಕೊಳ್ಳದ ಅಥವಾ ಹಿಂಜುವುದನ್ನೂ ನೂಲುವುದನ್ನೂ ಶಿಕ್ಷಣದ ಅನಿವಾರ್ಯ ಭಾಗ ಎಂದು ಕಲಿಸದ ಶಾಲೆ ಕಾಲೇಜುಗಳನ್ನು ಮುಚ್ಚಿಬಿಡಲು ನಾನು ಕಿಂಚಿತ್ತೂ ಹಿಂದೆ ಮುಂದೆ ನೋಡುವುದಿಲ್ಲ. ಶಾಲೆಯ ನಾಮಫಲಕದ ಮೇಲೆ ರಾಷ್ಟ್ರೀಯ ಎಂಬ ಶಬ್ದವನ್ನು ಬರೆಯಿಸಿ, ಸರಕಾರಕ್ಕೆ ಇದು ಸಂಬಂಧಿಸಿಲ್ಲ, ಸರಕಾರದ ನಿಯಂತ್ರಣ ಇದಕ್ಕಿಲ್ಲ ಎಂಬಷ್ಟರಿಂದಲೇ ತೃಪ್ತಿ ಹೊಂದುವ ಕಾಲ ಹಿಂದಾಯಿತು. ಅನೇಕ ರಾಷ್ಟ್ರೀಯ ಸಂಸ್ಥೆಗಳಲ್ಲಿ ಇನ್ನೂ ಪ್ರಾಂತೀಯ ಭಾಷೆಗಳಿಗೆ ಮತ್ತು ಹಿಂದೂಸ್ಥಾನಿಗೆ ಗಮನ ಕೊಡುತ್ತಿಲ್ಲ ಎಂಬುದನ್ನು ಹೇಳದೆ ಇರಲಾರೆ. ಪ್ರಾಂತೀಯ ಭಾಷೆಯ ಮೂಲಕ ಅಥವಾ ಹಿಂದೂಸ್ಥಾನಿಯ ಮೂಲಕ ಶಿಕ್ಷಣ ನೀಡುವ ಅಗತ್ಯವನ್ನು ಇನ್ನೂ ಅನೇಕ ಉಪಾಧ್ಯಾಯರು ಅರಿತುಕೊಂಡಿಲ್ಲ. ರಾಷ್ಟ್ರೀಯ ಶಿಕ್ಷಣಶಾಸ್ತ್ರಜ್ಞರ ಸಭೆಯನ್ನು ಏರ್ಪಡಿಸಿ, ನಾನು ಈಗ ಹೇಳಿದ ಕೆಲವು ವಿಷಯಗಳ ಬಗ್ಗೆ ತಮ್ಮ ಅನುಭವವನ್ನು ವಿನಿಮಯ ಮಾಡಿಕೊಂಡು, ಸಾಧ್ಯವಿದ್ದರೆ ಒಂದು ಸರ್ವ ಸಾಧಾರಣ ರಾಷ್ಟ್ರೀಯ ಶಿಕ್ಷಣ ಯೋಜನೆಯನ್ನು ಸಿದ್ಧಗೊಳಿಸಲು ಶ್ರೀ ಗಂಗಾಧರರಾಯರು ಏರ್ಪಾಟು ಮಾಡಿದ್ದಾರೆ. ಅದು ನನಗೆ ತುಂಬಾ ಸಂತೋಷ ನೀಡಿದೆ.

ನಿರುದ್ಯೋಗಿ ಅಸಹಕಾರಿಗಳು

ರಾಷ್ಟ್ರದ ಕರೆಗೆ ಓಗೊಟ್ಟು ವಕೀಲಿಕೆಯನ್ನು ಬಿಟ್ಟ ವಕೀಲರ ಬಗ್ಗೆ, ಸರಕಾರಿ ನೌಕರಿಯನ್ನು ಬಿಟ್ಟ ಶಿಕ್ಷಕರ ಬಗ್ಗೆ ಮತ್ತು ಸರಕಾರಿ ನೌಕರರ ಬಗ್ಗೆ ಒಂದು ಮಾತು ಹೇಳಲು ಇದೇ ಸರಿಯಾದ ಜಾಗ. ನಾನು ಬಲ್ಲೆ ಅವರಲ್ಲಿ ಅನೇಕರಿಗೆ ಎರಡು ಹೊತ್ತಿನ ಊಟಕ್ಕೂ ಕಷ್ಟವಾಗಿದೆ. ಅವರಿಗೆ ರಾಷ್ಟ್ರದ ಸಹಾಯ ದೊರೆಯಬೇಕು. ಖಾದಿ ಬೋರ್ಡು, ರಾಷ್ಟ್ರೀಯ ಶಾಲೆ ಕಾಲೇಜುಗಳು ಎರಡೂ ಪ್ರಾಮಾಣಿಕರಾದ ಉದ್ಯೋಗಶೀಲರಾದ ಅನೇಕರನ್ನು ನೇಮಿಸಿ ಕೊಳ್ಳಬಹುದು. ಆದರೆ ಈ ಜನರು ಕಷ್ಟಪಡಲು, ಕಲಿಯಲು, ಅಲ್ಪತೃಪ್ತರಾಗಿರಲು ಸಿದ್ಧರಾಗಿರಬೇಕು, ರಾಷ್ಟ್ರೀಯ ಸೇವೆಗಾಗಿ ಏನೂ ಪ್ರತಿಫಲವನ್ನು ಸ್ವೀಕರಿಸದ ಮನೋವೃತ್ತಿ ಒಂದು ಬೆಳೆಯುತ್ತಿದೆ. ಪ್ರತಿಫಲವಿಲ್ಲದೇ ಸೇವೆ ಸಲ್ಲಿಸುವುದು



ನಟಾಲ್ ಇಂಡಿಯನ್ ಕಾಂಗ್ರೆಸ್ ಸ್ಥಾಪಕರು 1985; ಗಾಂಧೀಜಿ ಮೇಲಿನ ಸಾಲಿನಲ್ಲಿ, ಎಡದಿಂದ ನಾಲ್ಕನೆಯವರು

ಪ್ರಶಂಸನೀಯವೇ ಸರಿ. ಆದರೆ ಇದು ಎಲ್ಲರಿಗೂ ಸಾಧ್ಯವಿಲ್ಲ. ಪ್ರತಿಯೊಬ್ಬನಿಗೂ ಅವನ ಪಾರಿಶ್ರಮಿಕ ಸಲ್ಲಬೇಕು. ಪ್ರತಿಫಲ ತೆಗೆದುಕೊಳ್ಳದ ಕಾರ್ಯಕರ್ತರನ್ನು ಯಾವ ದೇಶವೂ ಸಾವಿರಗಟ್ಟಲೆ ಉತ್ಪನ್ನ ಮಾಡಲಾರದು. ಆದ್ದರಿಂದ ದೇಶಾಭಿಮಾನಿಗಳು ದೇಶಸೇವೆ ಸಲ್ಲಿಸಿ, ಅದಕ್ಕೆ ತಕ್ಕ ಪ್ರತಿಫಲ ಪಡೆಯುವುದು ಒಂದು ಗೌರವ ಎಂಬ ವಾತಾವರಣವು ನಿರ್ಮಾಣವಾಗಬೇಕಾಗಿದೆ.

ಮಾದಕ ಪದಾರ್ಥಗಳು

ರಾಷ್ಟ್ರೀಯ ಪ್ರಾಮುಖ್ಯತೆಯ ಇನ್ನೊಂದು ಸಂಗತಿ ಎಂದರೆ ಹೆಂಡದ ಮಾರಾಟ ಮತ್ತು ಅಫೀಮಿನ ವ್ಯಾಪಾರ. ಪಾನ ನಿಷೇಧದ ಬಗ್ಗೆ 1921ರಲ್ಲಿ ದೇಶದಲ್ಲಿ ಸಂಚಲನ ಮೂಡಿಸಿದ ಆಂದೋಲನ ಅಹಿಂಸಾತ್ಮಕವಾಗಿ ಉಳಿದಿದ್ದರೆ, ಇವತ್ತು ನಮಗೆ ಅದರಲ್ಲಿ ಒಂದಿಷ್ಟು ಆಶಾದಾಯಕ ಬೆಳವಣಿಗೆಗಳು ಕಾಣುತ್ತಿದ್ದವು. ನಮ್ಮ ದುರಾದೃಷ್ಟ ನಮ್ಮ ಪಿಕೆಟಿಂಗ್ ಹಿಂಸಾತ್ಮಕವಾಯಿತು. ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಹಿಂಸಾಚಾರಕ್ಕೆ ಕಾರಣವಾಯಿತು. ಆದ್ದರಿಂದ ಪಿಕೆಟಿಂಗ್ ಅನ್ನು ನಿಲ್ಲಿಸಲಾಯಿತು. ಹೆಂಡದ ಗಂಡಂಗಗಳೂ ಅಫೀಮಿನ ಅಂಗಡಿಗಳೂ ಮೊದಲಿನಂತೆಯೇ ವ್ಯಾಪಾರ–ವ್ಯವಹಾರ ನಡೆಸಲಾರಂಭಿಸಿದವು. ಆದರೆ ಪಾನನಿಷೇಧದ ಪ್ರಚಾರಕಾರ್ಯ ಪೂರ್ಣ ನಿಂತುಹೋಗಿಲ್ಲ ಎಂಬುದನ್ನು ಕೇಳಿ ನಿಮಗೆ ಸಂತೋಷವಾಗಬಹುದು. ಎಷ್ಟೋ ಜನ ಕೆಲಸಗಾರರು ಸದ್ದಿಲ್ಲದೆ ಸ್ವಾರ್ಥವಿಲ್ಲದೆ ಇನ್ನೂ ಈ ಕೆಲಸವನ್ನು ನಡೆಸುತ್ತಲೇ ಇದ್ದಾರೆ.

ಮಾದಕ ಪದಾರ್ಥ ಸೇವನೆಯ ಈ ದುಷ್ಪದ್ಧತಿ ಸ್ವರಾಜ್ಯ ಬರುವವರೆಗೂ ಹೋಗಲಾರದು ಎಂದು ನಾವು ಅರಿತುಕೊಳ್ಳಬೇಕು. ಈ ದುರ್ನೀತಿಯ ಮೂಲಕ ಬಂದ ಹಣದಿಂದ ನಮ್ಮ ಮಕ್ಕಳಿಗೆ ಶಿಕ್ಷಣ ದೊರೆಯುತ್ತಿದೆ ಎಂಬುದು ನಮಗೆ ಗೌರವದ ಸಂಗತಿ ಅಲ್ಲ. ಕಾಂಗ್ರೆಸ್ಸಿಗರು ಶಾಸನ ಸಭೆಗೆ ಹೋದರೂ ಚಿಂತೆ ಇಲ್ಲ, ಮಾದಕ ಪದಾರ್ಥದಿಂದ ಬರುವ ಈ ಆದಾಯವನ್ನು ಧೈರ್ಯದಿಂದ ನಿಲ್ಲಿಸಿಬಿಟ್ಟರೆ ನಾನು ಕ್ಷಮಿಸಿಯೇನು. ಇದರಿಂದ ಶಿಕ್ಷಣ ನಿಂತರೂ ಚಿಂತೆಯಿಲ್ಲ, ಸೇನೆಯ ವೆಚ್ಚವನ್ನು ತಗ್ಗಿಸಲು ಒತ್ತಾಯ ಮಾಡಿದರೆ ಇಂಥ ಪರಿಸ್ಥಿತಿ ಬರುವುದೇ ಇಲ್ಲ.

ಬಂಗಾಳದ ದಬ್ಬಾಳಿಕೆ– ದಮನ


ಇಲ್ಲಿಯವರೆಗೆ ಆಂತರಿಕ ವಿಷಯಗಳನ್ನೇ ಪ್ರಸ್ತಾಪ ಮಾಡಿದ್ದೇನೆ. ಆದರೆ ನಮ್ಮ ಬಾಹ್ಯ ಪರಿಸ್ಥಿತಿಗಳು ಮುಖ್ಯವಾಗಿ ನಮ್ಮ ಆಡಳಿತಗಾರರು ಮಾಡುತ್ತಿರುವ ಕೆಲಸಗಳು ನಮ್ಮ ವಿರುದ್ಧವಾದ ಪರಿಸ್ಥಿತಿಯನ್ನು ನಿರ್ಮಿಸುತ್ತಾ, ನಮ್ಮ ಅದೃಷ್ಟವನ್ನೇ ಬದಲಾಯಿಸುತ್ತಿವೆ. ನಮಗೆ ಮನಸ್ಸಿದ್ದರೆ ಅವುಗಳನ್ನು ನಮ್ಮ ಅನುಕೂಲಕ್ಕೆ ತಿರುಗಿಸಿಕೊಳ್ಳಬಹುದು. ಅಥವಾ ಅದಕ್ಕೆ ತುತ್ತಾಗಲೂಬಹುದು. ನಮ್ಮ ಆಳರಸರ ಇತ್ತೀಚಿನ ಕೃತ್ಯ ಅಂದರೆ ಬಂಗಾಳದಲ್ಲಿ ಅವರು ಪ್ರಾರಂಭಿಸಿರುವ ದಬ್ಬಾಳಿಕೆ ಮತ್ತು ದಮನ. ಸರ್ವಪಕ್ಷ ಸಮ್ಮೇಳನವು ಅದನ್ನು ಕಟುವಾದ ಶಬ್ದಗಳಲ್ಲಿ ಖಂಡಿಸಿದೆ. ಈ ದಬ್ಬಾಳಿಕೆಯು ಬಂಗಾಳದ ಸ್ವರಾಜ್ಯ ಪಕ್ಷಕ್ಕೆ ಕೊಟ್ಟ ಏಟು ಎಂದು ಹೇಳಲು ಆ ಸಮ್ಮೇಳನಕ್ಕೆ ಸಂಕೋಚವಾಯಿತು. ದೇವರಾಣೆ

ಏನೂ ಇಲ್ಲ. ನಾನು ಕೋಲ್ಕತ್ತೇಗೆ ಹೋಗಿದ್ದೆ. ಭಿನ್ನ ಭಿನ್ನ ಅಭಿಪ್ರಾಯದ ಜನರ ಪ್ರತಿನಿಧಿಗಳನ್ನು ಭೇಟಿಮಾಡಿದೆ. ಸ್ವರಾಜ್ಯ ಪಕ್ಷ ಕೊಟ್ಟ ಏಟು ಇದು ಎಂಬ ತೀರ್ಮಾನಕ್ಕೂ ಬಂದೆ. ಆಮೇಲೆ ಲಾರ್ಡ್ ಲಿಟನ್, ಲಾರ್ಡ್ ರೀಡಿಂಗ್ ಮಾಡಿದ ಭಾಷಣಗಳಿಂದ ಈ ಅಭಿಪ್ರಾಯ ಸ್ಥಿರವಾಯಿತು. ಅವರು ಮಾಡಿಕೊಂಡಿರುವ ಸಮರ್ಥನೆ, ತೀರ ಅಸಮರ್ಪಕವಾಗಿತ್ತು ಯಾರಿಗೂ ಅದು ಒಪ್ಪಿಗೆ ಆಗಲಾರದು. ಭಾರತದಲ್ಲಿ ಸಾರ್ವಜನಿಕ ಅಭಿಪ್ರಾಯಕ್ಕೆ ಏನೂ ಬೆಲೆಯಿಲ್ಲ. ಆದ್ದರಿಂದ ಇಂಥಲ್ಲಿ ಮಾತ್ರ ಆ ಸಮರ್ಥನೆ ಸಾಧ್ಯ ಸೆರೆಯಾಳುಗಳನ್ನು ಬಿಡಲು ಲಾರ್ಡ್ ಲಿಟನ್ ಹಾಕಿದ ಕರಾರು ನಮ್ಮ ಬುದ್ಧಿಗೇ ಒಂದು ಅವಮಾನ. ಪರಿಸ್ಥಿತಿ ಅಂಥದಿಲ್ಲದಿದ್ದರೂ, ಇದೆ ಎಂದು ಗ್ರಹಿಸಿ, ಪರಿಸ್ಥಿತಿಯ ಮೂಲಕ ಈ ಸುಗ್ರೀವಾಜ್ಞೆಯನ್ನು (ಆರ್ಡಿನನ್ಸ್) ಹೊರಡಿಸ ಬೇಕಾಯಿತು; 1818ರ ನಿಯಮದಂತೆ ಕಾರ್ಯವನ್ನು ಕೈಕೊಳ್ಳ ಬೇಕಾಯಿತು ಎಂದು ಅವರು ಹೇಳಿದ್ದಾರೆ.

ರಾಷ್ಟ್ರದ ವಾದ ಹೀಗಿದೆ:

1. ಅವರು ವರ್ಣಿಸಿರುವ ಪರಿಸ್ಥಿತಿ ಇದ್ದುದಕ್ಕೆ ಪ್ರಮಾಣವಿಲ್ಲ.
2. ಒಂದು ವೇಳೆ ಅಂಥ ಪರಿಸ್ಥಿತಿ ಇದೆ ಎಂದರೂ ರೋಗಕ್ಕಿಂತ ಮದ್ದೇ ಹೆಚ್ಚು ವಿನಾಶಕಾರಕ.
3. ಪರಿಸ್ಥಿತಿಯನ್ನು ಹದಕ್ಕೆ ತರಲು ಸಾಧಾರಣ ಕಾನೂನಿನಲ್ಲಿ ಸಾಕಷ್ಟು ಅಧಿಕಾರವಿದೆ.
4. ಒಂದು ವೇಳೆ ಅಸಾಧಾರಣ ಅಧಿಕಾರ ಬೇಕು ಎನಿಸಿದರೂ ತಾವೇ ರಚಿಸಿರುವ ಶಾಸನ ಸಭೆಯಿಂದ ಅದನ್ನು ಪಡೆಯಬೇಕಾಗಿತ್ತು.

ಇಬ್ಬರ ಭಾಷಣಗಳಲ್ಲೂ ಈ ವಿಷಯಗಳು ಪ್ರಸ್ತಾಪವೇ ಆಗದಂತೆ ನೋಡಿಕೊಂಡಿದ್ದಾರೆ. ಸರಕಾರದ ಹೇಳಿಕೆಗಳಿಗೆ ಏನೂ ಆಧಾರ ಇರುವುದಿಲ್ಲ ಎಂಬುದು ಈ ರಾಷ್ಟ್ರಕ್ಕೆ ಬೇಕಾದಷ್ಟು ಬಾರಿ ಅನುಭವ ಆಗಿದೆ. ಆದ್ದರಿಂದ ಅವರ ಮಾತನ್ನು ನಾವು ನಂಬಲಾರೆವು. ನಂಬುವುದಿಲ್ಲ ಎಂಬುದು ಅವರಿಗೂ ಗೊತ್ತು. ಕಾರಣ ಅವರ ಹೇಳಿಕೆಗಳು ಉದ್ದೇಶಪೂರ್ವಕವಾಗಿ ಹೇಳಿದ ಸುಳ್ಳು ಎಂದಲ್ಲ. ಆದರೆ ಅವರ ಹೇಳಿಕೆಗಳಿಗೆ ಅಧಾರವಾದ ಸುದ್ದಿಗಳು ವಿರೂಪಗೊಂಡು ಬಂದಿರುತ್ತವೆ ಎಂದು ಗೊತ್ತಾಗಿದೆ. ಹೀಗಾಗಿ ಅವರು ಕೊಟ್ಟ ಭರವಸೆ ಜನರನ್ನು ಅಣಕಿಸಿದ ಹಾಗೆ, ಆ ಭಾಷಣಗಳು, ನೀವು ಬೇಕಾದದ್ದನ್ನು ಮಾಡಿ ಎಂದು ನಮಗೆ ಸವಾಲು ಹಾಕಿದಂತಿವೆ. ಇದರಿಂದ ನಾವು ರೇಗ ಬೇಕಾಗಿಲ್ಲ, ಅಸಹನೆ ತೋರ ಬೇಕಾಗಿಲ್ಲ. ಈ ದಬ್ಬಾಳಿಕೆಯಿಂದ ನಾವು ಕುಗ್ಗದಿದ್ದರೆ, ನಮ್ಮ ಗುರಿಯಿಂದ ನಾವು ವಿಮುಖರಾಗದಿದ್ದರೆ, ಸ್ವರಾಜ್ಯಪ್ರಾಪ್ತಿ ಬೇಗ ಆದೀತು. ದಬ್ಬಾಳಿಕೆಯು ನಮ್ಮ ಶಕ್ತಿಯನ್ನು ಒರೆಗೆ ಹಚ್ಚುತ್ತದೆ. ಸಂಕಟಸಮಯದಲ್ಲಿ ಅದು ಜನರ ತ್ಯಾಗಶಕ್ತಿ ಮತ್ತು ಧೈರ್ಯಗಳನ್ನು ಜಾಗೃತಗೊಳಿಸುತ್ತದೆ. ಬಂಗಾರವನ್ನು ಬೆಂಕಿಯಲ್ಲಿ ಪುಟವಿಟ್ಟರೆ ಏನು ಆಗುತ್ತದೆಯೋ ನಿಜವಾದ ಮನುಷ್ಯನಿಗೆ ರಾಷ್ಟ್ರಕ್ಕೆ ದಬ್ಬಾಳಿಕೆ– ದಮನದಿಂದಲೂ ಅದೇ ಆಗುತ್ತದೆ. 1921ರಲ್ಲಿ ದಬ್ಬಾಳಿಕೆಗೆ ಉತ್ತರವಾಗಿ ಸವಿನಯ ಕಾಯಿದೆ ಭಂಗವನ್ನು ಪ್ರಾರಂಭಿಸಿ, ಸರಕಾರವು ಏನು ಮಾಡಿದರೂ ಮಾಡಲಿ ಎಂದು ಆಹ್ವಾನಿಸಿದೆವು. ಇವತ್ತು ನಾವು ದೀನರಾಗಿದ್ದೇವೆ.



ಮಹಾತ್ಮಾ ಗಾಂಧೀಜಿಯವರ ಸಂಜೆಯ ನಡಿಗೆಯ ನಂತರ ಅವರ ಪಾದಗಳನ್ನು ಸ್ವಚ್ಛಗೊಳಿಸಲು ಅವರ ಪತ್ನಿ ಸಹಾಯ ಮಾಡುತ್ತಿರುವುದು, ಬಾರ್ಡೋಲಿ, 1939



ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಆಗಮಿಸುತ್ತಿರುವ ಮಹಾತ್ಮಾ ಗಾಂಧೀಜಿ

ಸವಿನಯ ಶಾಸನ ಭಂಗಕ್ಕೆ ನಾವಿನ್ನೂ ಸಿದ್ಧರಾಗಿಲ್ಲ. ಅದಕ್ಕೆ ನಾವು ಸಿದ್ಧತೆ ಮಾಡಿಕೊಳ್ಳಬೇಕು. ಅದರ ಸಿದ್ಧತೆ ಮಾಡಿಕೊಳ್ಳುವುದು ಎಂದರೆ ಶಿಸ್ತು, ಸಂಯಮ, ಅಹಿಂಸಾತ್ಮಕ ಪ್ರತಿಭಟನಾ ಶಕ್ತಿ ಇವೆಲ್ಲ ಅನಿವಾರ್ಯ. ಎಲ್ಲಕ್ಕಿಂತ ಮಿಗಿಲಾಗಿ, ನಮಗೆ ತಿಳಿದ ದೈವಕೃತ ನಿಯಮ ಹಾಗೂ ಅದಕ್ಕೆ ಅನುಕೂಲವಾದ ಮಾನವ ರಚಿತ ನಿಯಮಗಳನ್ನು ಕಟ್ಟುನಿಟ್ಟಾಗಿ ನಿಷ್ಠೆಯಿಂದ ಪಾಲಿಸುವುದು ಅತ್ಯಗತ್ಯ. ಆದರೆ ದುರ್ದೈವದಿಂದ ಈ ಕೆಲಸಕ್ಕೆ ಬೇಕಾದಷ್ಟು ಶಿಸ್ತಾಗಲೀ ಸಂಯಮವಾಗಲೀ ನಮ್ಮಲ್ಲಿಲ್ಲ. ನಾವು ಹಿಂಸಾಮಯರು ಆಗಿದ್ದೇವೆ. ಇಲ್ಲವೆ ನಮ್ಮ ಅಹಿಂಸೆಯು ಪ್ರತಿಭಟನಾ ಶಕ್ತಿರಹಿತವಾದದ್ದಾಗಿದೆ. ನಮ್ಮಲ್ಲಿ ಸಾಕಷ್ಟು ಸಾಮರಸ್ಯವಿಲ್ಲ. ದೈವನಿರ್ಮಿತವೋ ಅಥವಾ ಮನುಷ್ಯರಚಿತವೋ, ಅಂತೂ ನಾವು ಪಾಲಿಸುವ ಕಾನೂನು ಬಲಾತ್ಕಾರದ್ದು. ಹಿಂದೂ ಮುಸಲ್ಮಾನರ ನಡುವೆ ನಡೆಯುತ್ತಿರುವ ಬೆಳವಣಿಗೆಗಳು ದಿನವೂ ಕಾನೂನುಗಳನ್ನು ಉಲ್ಲಂಘಿಸುತ್ತಿವೆ. ಇವು ದೈವನಿರ್ಮಿತವಿರಲಿ ಮನುಷ್ಯರಚಿತವಿರಲಿ ಇವುಗಳನ್ನು ಉಲ್ಲಂಘಿಸುತ್ತಿದ್ದೇವೆ. ಇದು ಸವಿನಯ ಶಾಸನಭಂಗಕ್ಕೆ ಅನುಕೂಲವಾದ್ದಲ್ಲ. ಗುಲಾಮ ಜನಾಂಗಕ್ಕೆ ಇರುವ ಒಂದೇ ಒಂದು ಅಜೇಯವು ಅಪ್ರತಿಹತವೂ ಆದ ಆಯುಧವೆಂದರೆ ಸವಿನಯ ಶಾಸನಭಂಗ ಇದನ್ನು ಬಿಟ್ಟರೆ ಹಿಂಸೆಯೇ ಗತಿ. ವಾತಾವರಣ ಅದಕ್ಕೆ ಅನುಕೂಲ ಇದ್ದಂತೆ: ಹಿಂದೂ ಮುಸ್ಲಿಂ ಜಗಳ ಹಿಂಸೆಗೆ ನಮ್ಮನ್ನು ಸಿದ್ಧಗೊಳಿಸುತ್ತಿದೆ. ಭಾರತದ ವಿಮೋಚನೆಯು ಹಿಂಸೆಯ ಮೂಲಕವೇ ಸಾಧ್ಯ ಎಂದು ನಂಬಿದವರು, ನಮ್ಮಲ್ಲಿ ನಡೆಯುವ ಈ ಸ್ವಚ್ಛಂದ ಕಲಹಗಳನ್ನು ನೋಡಿ ಉಬ್ಬಿ ಹೋಗಬಹುದು. ಆದರೆ ಹಿಂಸೆಯನ್ನು ನಂಬಿದವರಿಗೆ ನಾನು ಹೀಗೆ ಹೇಳಬಯಸುತ್ತೇನೆ;

ನೀವು ಹಿಂದೂಸ್ತಾನದ ಪ್ರಗತಿಗೆ ಅಡ್ಡಿ ಒಡ್ಡುತ್ತಿದ್ದೀರಿ. ಹೊಟ್ಟೆಗಿಲ್ಲದೇ ಸಾಯುತ್ತಿರುವ ಜನಕೋಟಿಯಲ್ಲಿ ನಿಮಗೆ ಸ್ನೇಹ ಕರುಣೆ ಇದ್ದರೆ, ಹಿಂಸೆಯಿಂದ ಅವರಿಗೆ ಏನೂ ಲಾಭವಿಲ್ಲ ಎಂದು ತಿಳಿದುಕೊಳ್ಳಿ. ಯಾರನ್ನು ನೀವು ಉಳಿಸಬಯಸುತ್ತೀರೋ ಅವರ ಕೈಯಲ್ಲಿ ಹೆಚ್ಚು ಶಸ್ತ್ರ ಇವೆ, ಅವರ ಸಂಘಟನೆಯೂ ನಿಮಗಿಂತ ಉತ್ತಮ. ನಿಮ್ಮ ಜೀವದ ಯೋಚನೆ ನಿಮಗೆ ಇಲ್ಲದಿರಬಹುದು. ಆದರೆ ಹುತಾತ್ಮರಾಗಲು ಅಪೇಕ್ಷೆ ಇಲ್ಲದ, ನಮ್ಮ ದೇಶಬಾಂಧವರ ಪ್ರಾಣಗಳನ್ನೂ ನೀವು ನಿರ್ಲಕ್ಷ್ಯ ಮಾಡಲಾರಿರಿ. ಜಲಿಯನ್ ವಾಲಾಬಾಗಿನಂತಹ ಕಗ್ಗೊಲೆಯಂಥ ಕೃತ್ಯಗಳಲ್ಲಿ ಸರಕಾರಕ್ಕೆ ವಿಶ್ವಾಸವಿದೆ. ಆತ್ಮರಕ್ಷಣೆಗೆ ಅದೇ ನ್ಯಾಯವಾದ ಮಾರ್ಗ ಎಂದು ಈ ಸರಕಾರ ತಿಳಿಯುತ್ತದೆ. ನಿಮಗೂ ಇದು ಗೊತ್ತು. ಉಳಿದ ದೇಶಗಳ ಬಗ್ಗೆ ಏನೇ ಇರಲಿ, ಈ ದೇಶದಲ್ಲಿ ಮಾತ್ರ ಹಿಂಸೆಯ ಪಂಥವು ಬೆಳೆಯುವ ಸಂಭವವಿಲ್ಲ. ಭಾರತವೇ ಅಹಿಂಸೆಯನ್ನು ಪ್ರತಿಪಾದಿಸಬಲ್ಲದು, ಮತ್ತು ಅದೇ ಅಹಿಂಸೆಗೆ ಆಗರವಾಗಿರಬಲ್ಲದು. ಇದು ನಿರ್ವಿವಾದ. ನಿಮಗೆ ಹುತಾತ್ಮರಾಗುವುದೇ ಇದ್ದರೆ ಅಹಿಂಸೆಯ ಪ್ರತಿಪಾದನೆಗಾಗಿ ನಿಮ್ಮ ಜೀವಗಳನ್ನು ಏಕೆ ಮುಡುಪಾಗಿ ಇಡಬಾರದು?

ಅಹಿಂಸಾತ್ಮಕ ಕ್ರಾಂತಿಕಾರಿಗಳಿಗೆ ನನ್ನ ಈ ಬಿನ್ನಹದಿಂದ ಏನೂ ಪ್ರಯೋಜನವಿಲ್ಲ. ಹಿಂಸಾತ್ಮಕ ಅರಾಜಕ ಸರಕಾರಕ್ಕೆ ಬಿನ್ನಯಿಸಿದರೆ ಎಷ್ಟು ಫಲವೋ, ಕ್ರಾಂತಿಕಾರರಿಗೆ ಬಿನ್ನಯಿಸಿದರೂ ಅಷ್ಟೇ ಫಲ.

ಆದ್ದರಿಂದ ನಾವು ಇದಕ್ಕೆ ಪರಿಹಾರವನ್ನು ಕಂಡುಹಿಡಿದು, ಅವರ ಹಿಂಸೆಗಿಂತಲೂ ಹೆಚ್ಚು ಪರಿಣಾಮಕಾರಿಯಾದ ಶಕ್ತಿ ಇನ್ನೊಂದು ಇದೆ ಎಂದು ಹಿಂಸಾತ್ಮಕ ಕ್ರಾಂತಿಕಾರರಿಗೂ ಹಿಂಸಾತ್ಮಕ ಸರಕಾರಕ್ಕೂ ತೋರಿಸಿಕೊಡಬೇಕು.

ದಬ್ಬಾಳಿಕೆಯು ರೋಗದ ಲಕ್ಷಣ

ಈ ದಬ್ಬಾಳಿಕೆಯು ಹಳೆಯ ರೋಗದ ಒಂದು ಹಳೆಯ ಲಕ್ಷಣ ಎನ್ನುತ್ತೇನೆ. ಇದರ ಸೂತ್ರವು ಐರೋಪ್ಯರ ಅಧಿಕಾರ-ಏಷಿಯಾದವರ ಅಧೀನದಂತಿದೆ. ಕೆಲವು ಸಲ ಇನ್ನೂ ರಹಸ್ಯವಾಗಿ ಈ ಸೂತ್ರವನ್ನು ಬಿಳಿಯರು ವರ್ಸರ್ಸ್ ಕಪ್ಪು ಜನರು ಎನ್ನಲಾಗುತ್ತದೆ. "ಬಿಳಿಯ ಮನುಷ್ಯನು ಹೊರಿಸಿದ ನೊಗವನು, ಬಿಳಿಯ ಮನುಷ್ಯ ಹೊತ್ತ ಹೊರೆ ಎಂದು ತಪ್ಪಾಗಿ ಹೇಳಿದ್ದ ಕಿಪ್ಲಿಂಗ್. ಮಲಯಾ ದ್ವೀಪದಲ್ಲಿ ಬಣ್ಣಕ್ಕೆ ಸಂಬಂಧಿಸಿದ ಆತಂಕವು ತಾತ್ಕಾಲಿಕವೆಂದು ತಿಳಿದಿದ್ದರು. ಈಗಂತೂ ಅದು ಶಾಶ್ವತವೇ ಆಗಿದೆ. ಮಾರಿಷಸ್ನ ತೋಟಗಾರ ನಿರಂತರವಾಗಿ ಭಾರತದ ಕೂಲಿಕಾರರನ್ನು ಕೆಲಸಕ್ಕೆ ನೇಮಿಸಿಕೊಳ್ಳಲೇಬೇಕು. ಭಾರತೀಯರು ಮೊದಲಿನಿಂದಲೂ ಅಲ್ಲಿ ಇದ್ದರೂ ಕೀನ್ಯಾ ಐರೋಪ್ಯರು ಅವರ ಮೇಲೆ ಸವಾರಿ ಮಾಡುತ್ತಿದ್ದಾರೆ.

ಸಾಧ್ಯವಾದರೆ, ಹಿಂದಿನ ಉಪಕಾರವನ್ನು ಕಡೆಗಣಿಸಿ, ಎಲ್ಲ ಭಾರತೀಯರನ್ನೂ ದಕ್ಷಿಣ ಆಫ್ರಿಕಾ ಹೊರದೂಡಲು ಸಿದ್ಧ. ಈ ಎಲ್ಲ ಸಂದರ್ಭಗಳಲ್ಲೂ ಸೂಕ್ತ ಕ್ರಮ ತೆಗೆದುಕೊಳ್ಳಲು ಭಾರತ ಸರಕಾರ ಮತ್ತು ಸಾಮ್ರಾಜ್ಯ ಸರಕಾರ ಕೈಲಾಗದವರೇನಲ್ಲ. ಅವರಿಗೆ ಮನಸ್ಸಿಲ್ಲ ಅಥವಾ ಭಾರತೀಯ ವಲಸೆಗಾರರ ಬಗ್ಗೆ ಎಷ್ಟು ಒತ್ತಾಯ ಮಾಡಬೇಕೋ ಅಷ್ಟು ಮಾಡುತ್ತಿಲ್ಲ. ಭಾರತ ಸರಕಾರ ಫಿಜಿ ದ್ವೀಪಗಳ ಬಗ್ಗೆ ತಾವೇ ನೇಮಿಸಿದ ಆಯೋಗದ ವರದಿಯನ್ನು ಪ್ರಕಟಿಸುವಷ್ಟು ಸೌಜನ್ಯ ಅದಕ್ಕೆ ಇಲ್ಲ. ಅಕಾಲಿಗಳ ದುರ್ದಮನೀಯ ವೀರತನವನ್ನು ಮೆಟ್ಟಿಹಾಕಲು ಮಾಡಿದ ಪ್ರಯತ್ನವೂ ಅದೇ ರೋಗದ ಕುರುಹು. ತಮ್ಮ ಪ್ರಾಣದಷ್ಟೆ ಪ್ರಿಯವಾದ ಉದ್ದೇಶಕ್ಕಾಗಿ ನೀರಿನ ಹಾಗೆ ತಮ್ಮ ರಕ್ತವನ್ನು ಅವರು ಸುರಿದಿದ್ದಾರೆ. ಅವರು ತಪ್ಪು ಮಾಡಿರಬಹುದು. ಮಾಡಿದ್ದರೆ ಅವರ ರಕ್ತ ಸುರಿಯಿತು ಅಷ್ಟೆ. ಬೇರೆ ಯಾರಿಗೂ ಅವರು ತೊಂದರೆ ಮಾಡಲಿಲ್ಲ. ಅವರ ಧೈರ್ಯಕ್ಕೆ, ಅವರ ಮೂಕ ಕಷ್ಟ ಸಹನೆಗೆ, ಅವರ ಆತ್ಮಾರ್ಪಣೆಗೆ ನಾನ್ಕಾನಾ ಸಾಹೇಬ, ಗುರು ಕಾ ಬಾಗ್, ಜೈತೋಗಳು ಸಾಕ್ಷಿಯಾಗಿ ನಿಂತಿವೆ. ಆದರೂ ಅಕಾಲಿಗಳನ್ನು ಮಟ್ಟಹಾಕುತ್ತೇನೆ ಎಂದು ಪಂಜಾಬ್ ಗವರ್ನರ್ ಪ್ರತಿಜ್ಞೆ ಮಾಡಿದ್ದಾನೆಂದು ಹೇಳಲಾಗಿದೆ.

ಬರ್ಮಾದ ವೀರತನವೂ ದಬ್ಬಾಳಿಕೆಯ ತುಳಿತಕ್ಕೆ ಒಳಗಾಗಿದೆ ಎಂದು ಸುದ್ದಿ ಬರುತ್ತಿದೆ. ನಮಗಿಂತ ಈಜಿಪ್ಟಿನ ಹಣೆಯ ಬರಹ ಉತ್ತಮವಾಗಿಲ್ಲ. ಯಾರೋ ಒಬ್ಬ ಹುಚ್ಚ ಒಬ್ಬ ಬ್ರಿಟಿಷ್ ಅಧಿಕಾರಿಯನ್ನು ಕೊಂದನಂತೆ. ಇದು ಖಂಡಿತವಾಗಿಯೂ ಬಹು ತುಚ್ಛ ಅಪರಾಧ, ಬಲು ಹೀನಕಾರ್ಯ. ಆದರೆ ಇದಕ್ಕೆ ಕೊಡುತ್ತಿರುವ ಶಿಕ್ಷೆ ಅದಕ್ಕೂ ಹೀನ ಅಪರಾಧ, ಇಷ್ಟೇ ಅಲ್ಲ ಅದು ಒಂದು ಅತ್ಯಾಚಾರ, ಮಾನವತೆಗೆ ಮಾಡಿದ ಅಪಚಾರ. ಈಜಿಪ್ಟಿಗೆ ಏನು ಸಿಕ್ಕಿತ್ತೋ ಎಲ್ಲವೂ ಹೋದ ಹಾಗೆಯೇ. ಒಬ್ಬ ಮಾಡಿದ ಅಪರಾಧಕ್ಕಾಗಿ ಇಡೀ ಜನಾಂಗವನ್ನೇ ನಿರ್ದಯೆಯಿಂದ ಶಿಕ್ಷಿಸಲಾಗುತ್ತಿದೆ. ಆ ಕೊಲೆಗೆ ಈಜಿಪ್ಟಿಗೆ ಜನ ಸಹಾನುಭೂತಿ ತೋರಿಸಿರಲೂ ಬಹುದು. ಆದರೆ ಅಷ್ಟರಿಂದಲೇ ಹಿಂಸೆ ಇಲ್ಲದಿದ್ದರೂ ತನ್ನನ್ನು ತಾನು ಕಾಪಾಡಿಕೊಳ್ಳಬಲ್ಲ ಸಾಮರ್ಥ್ಯವುಳ್ಳ ಸರಕಾರದ ಈ ಭಯೋತ್ಪಾದಕ ಕೃತ್ಯವು ನ್ಯಾಯಸಮ್ಮತವಾದೀತೇ? ಆದ್ದರಿಂದ ಬಂಗಾಲದಲ್ಲಿ ನಡೆಯುವ ದೌರ್ಜನ್ಯ ಅಸಾಧಾರಣವೇನೂ ಅಲ್ಲ. ಕಾಲ ಕಾಲಕ್ಕೆ ಇದು ಹೊರಚಿಮ್ಮುತ್ತದೆ, ಅದು ಯಾವುದೋ ರೂಪದಲ್ಲಿ ಯಾವುದೋ ಪ್ರಾಂತದಲ್ಲಿ ನಾವು ಸ್ವತಂತ್ರರಾಗುವವರೆಗೆ ಇದು ಸಾಮಾನ್ಯವಾದದ್ದೆಂದು ನಾವು ನಾವು ತಿಳಿಯಬೇಕು.

ಅಂಗೀಕಾರದ ಅಗತ್ಯ

ಆದ್ದರಿಂದ ತನ್ನಲ್ಲಿಟ್ಟಿರುವ ನಂಬಿಕೆಯನ್ನು ಕಾಂಗ್ರೆಸ್ ಉಳಿಸಿಕೊಳ್ಳಬೇಕಾದರೆ ತನ್ನ ಬೇಡಿಕೆಗಳಿಗೆ ಒಂದು ಅಂಗೀಕಾರದ ಬೆಂಬಲ ಪಡೆಯಲೇಬೇಕು.



ಮಹಾತ್ಮ ಗಾಂಧೀಜಿಯವರ ಅಂತ್ಯಕ್ರಿಯೆಯನ್ನು ನೋಡುತ್ತಿರುವ ಪ್ರಧಾನಿ ಜವಾಹರಲಾಲ್ ನೆಹರು, ಜನವರಿ 1948

ಆ ಬೆಂಬಲವನ್ನು ನಾವು ದೊರಕಿಸಿಕೊಳ್ಳುವ ಮೊದಲು ಹಿಂದೂಗಳೂ, ಮುಸಲ್ಮಾನರೂ, ಸಿಖ್ಖರೂ, ಪಾರಸಿಗಳೂ, ಕ್ರಿಶ್ಚಿಯನ್ನರು ಎಲ್ಲರೂ ಒಂದಾಗಬೇಕು. ಅದೇ ರೀತಿ ಸ್ವರಾಜ್ಯವಾದಿಗಳು, ಅಪರಿವರ್ತನ ವಾದಿಗಳೂ, ಉದಾರಪಂಥಿಗಳೂ ಹೋಂರೂಲಿನವರೂ, ಮುಸ್ಲಿಂ ಲೀಗಿನವರೂ ಇತರರೂ ಒಟ್ಟಾಗಬೇಕು. ನಮ್ಮ ಮನಸ್ಸನ್ನು ನಾವು ಅರಿತುಕೊಂಡು ಎಲ್ಲರೂ ಏಕಕಂಠದಿಂದ ಮಾತನಾಡುವುದು ಒಳ್ಳೆಯದು. ನಮ್ಮ ದೇಶಕ್ಕೆ ವಿದೇಶದ ಬಟ್ಟೆ ಬಾರದಂತೆ ತಡೆಯುವ ಶಕ್ತಿಯನ್ನು ಗಳಿಸಿಕೊಂಡರೆ ನಮಗೆ ಎಷ್ಟೋ ಲಾಭವಾದೀತು. ಆಗ ನಿಜವಾಗಿಯೂ ನಮಗೆ ಹೊಸ ಶಕ್ತಿಯೊಂದು ದೊರೆತಂತಾಗುತ್ತದೆ.

ನನ್ನ ನಂಬಿಕೆ


ನನ್ನ ವಿಶ್ವಾಸವನ್ನು ಹೇಳುತ್ತೇನೆ; ಕಾಂಗ್ರೆಸ್ಸನ್ನು ಭದ್ರವಾಗಿ ಕಟ್ಟ ಬಯಸುವ ಕಾಂಗ್ರೆಸ್ಸಿಗನಂತೆ ಅಸಹಕಾರವನ್ನು ನಿಲ್ಲಿಸಲು ಸಲಹೆ ಕೊಡುತ್ತೇನೆ, ನಮ್ಮ ದೇಶ ಅದಕ್ಕಿನ್ನೂ ಸಿದ್ಧವಾಗಿಲ್ಲ ಎಂಬ ಕಾರಣದಿಂದ. ಆದರೆ ಈಗಿನ ಈ ಸರಕಾರ ಈಗಿರುವ ಹಾಗೆಯೇ ಇರುವ ತನಕ ವೈಯಕ್ತಿಕವಾಗಿ ನಾನು ಅಸಹಕಾರವನ್ನು ಕೈಬಿಡಲಾರೆ, ಕೈಬಿಡುವುದೂ ಇಲ್ಲ. ನನ್ನ ಮಟ್ಟಿಗೆ ಇದು ಕೇವಲ ಒಂದು ಧೋರಣೆ ಅಷ್ಟೇ ಅಲ್ಲ, ಅದೊಂದು ಶ್ರದ್ಧಾಪೂರ್ಣವಾದ ಗುರಿ. ಅಸಹಕಾರ, ಸವಿನಯ ಶಾಸನಭಂಗ ಇವು ಸತ್ಯಾಗ್ರಹದ ವೃಕ್ಷಕ್ಕೆ ಬೇರೆ ಬೇರೆ ಶಾಖೆಗಳು ಮಾತ್ರ. ಇದು ನನ್ನ ಕಲ್ಪದ್ರುಮ್. ಸತ್ಯಾಗ್ರಹವೆಂದರೆ ಸತ್ಯಶೋಧನೆ. ದೇವರು ಈ ಸತ್ಯ ಆ ಸತ್ಯವನ್ನು ನನಗೆ ತಿಳಿಸಿಕೊಡುವ ಬೆಳಕು. ಅಹಿಂಸೆ, ಸ್ವರಾಜ್ಯವು ನನಗೆ ಆ ಸತ್ಯದ ಒಂದು ಅಂಶ. ದಕ್ಷಿಣ ಆಫ್ರಿಕೆಯಲ್ಲಿ, ಖೇಡಾದಲ್ಲಿ, ಚಂಪಾರಣ್ಯದಲ್ಲಿ ಇನ್ನೂ ಹಲವು ಹೋರಾಟಗಳಲ್ಲಿ ಸತ್ಯಾಗ್ರಹವು ನನ್ನನ್ನು ಕೈಬಿಟ್ಟಿಲ್ಲ. ಅದರಲ್ಲಿ ಹಿಂಸೆಗೆ ಅಥವಾ ದ್ವೇಷಕ್ಕೆ ಸ್ವಲ್ಪವೂ ಸ್ಥಾನವಿಲ್ಲ. ಆದ್ದರಿಂದ ನಾನು ಇಂಗ್ಲಿಷ್ ಜನರನ್ನು ದ್ವೇಷಿಸಲಾರೆ, ದ್ವೇಷಿಸುವುದೂ ಇಲ್ಲ. ಹೀಗೆಂದರೆ ಅವರ ನೊಗಕ್ಕೆ ಹೆಗಲನ್ನು ಕೊಡುತ್ತೇನೆ ಎಂದೇನೂ ಅಲ್ಲ. ಭಾರತದ ಮೇಲೆ ಬ್ರಿಟಿಷ್ ರೀತಿ ನೀತಿಗಳನ್ನೂ, ಬ್ರಿಟಿಷ್ ಸಂಸ್ಥೆಗಳನ್ನೂ ಹೇರುವ ಈ ಅಧಾರ್ಮಿಕ ಪ್ರಯತ್ನಗಳನ್ನು ನನ್ನ ಪ್ರಾಣ ಪಣವಿಟ್ಟು ಕಡೆಯವರೆಗೂ ಹೋರಾಡುತ್ತೇನೆ. ಆದರೆ ನಾನು ಅಹಿಂಸೆಯಿಂದ ಈ ಹೇರಿಕೆಯನ್ನು ವಿರೋಧಿಸುತ್ತೇನೆ, ಹೋರಾಡುತ್ತೇನೆ.

ಇಂಗ್ಲಿಷ್ ಪ್ರಭುಗಳೊಡನೆ ಅಹಿಂಸಾತ್ಮಕವಾಗಿ ಯುದ್ಧ ಮಾಡಬಲ್ಲ ಸಾಮರ್ಥ್ಯ ಭಾರತಕ್ಕೆ ಇದೆ ಎಂಬುದು ನನ್ನ ಬಲವಾದ ವಿಶ್ವಾಸ. ಈ ಪ್ರಯೋಗ ವಿಫಲವಾಗಿಲ್ಲ, ಸಫಲವಾಗಿದೆ. ಎಷ್ಟು ಸಫಲವಾಗಬೇಕೆಂದು ನಾವು ಬಯಸಿದ್ದೆವೋ ಅಷ್ಟು ಸಫಲವಾಗಿಲ್ಲ ಅಷ್ಟೇ. ಆದರೆ ನನಗೆ ನಿರಾಶೆ



ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಸ್ನಾನದ ವ್ಯವಸ್ಥೆ – 1924

ಆಗಿಲ್ಲ. ಅದಕ್ಕೆ ಬದಲು ಶೀಘ್ರದಲ್ಲಿಯೇ ಭಾರತವು ತನ್ನ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನು ಸತ್ಯಾಗ್ರಹದ ಮೂಲಕವೇ ಪಡೆದೀತೆಂಬ ನಂಬಿಕೆ ನನ್ನಲ್ಲಿ ಮೂಡಿದೆ. ತಾತ್ಪೂರ್ತಿಕವಾಗಿ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂಬ ಸೂಚನೆ ಕೂಡ ಆ ಪ್ರಯೋಗದ ಒಂದು ಅಂಗವೇ ಆಗಿದೆ. ನಾನು ಹಾಕಿಕೊಟ್ಟ ಕಾರ್ಯಕ್ರಮವನ್ನು ಪೂರೈಸಿದ್ದೇ ಆದರೆ ಅಸಹಕಾರವನ್ನು ಮತ್ತೆ ಪ್ರಾರಂಭಿಸುವ ಅಗತ್ಯವೇ ಬೇಕಾಗುವುದಿಲ್ಲ. ಒಂದು ವೇಳೆ ಕಾರ್ಯಕ್ರಮ ನಡೆಯದೇ ಇದ್ದರೆ ಕಾಂಗ್ರೆಸ್ಸಿನ ಮೂಲಕವೋ ಅಥವಾ ಹೊರಗಡೆಯೋ ಯಾವುದೊ ಒಂದು ರೂಪದಲ್ಲಿ ಅಹಿಂಸಾತ್ಮಕ ಅಸಹಕಾರವನ್ನು ಪುನಃ ಪ್ರಾರಂಭಿಸಲೇಬೇಕಾಗುತ್ತದೆ. ಸತ್ಯಾಗ್ರಹಕ್ಕೆ ಎಂದೂ ಸೋಲಿಲ್ಲ ಎಂದು ಪದೇ ಪದೇ ಹೇಳಿದ್ದೇನೆ. ಸತ್ಯವನ್ನು ಎತ್ತಿ ಹಿಡಿಯಲು ಒಬ್ಬನೇ ಒಬ್ಬ ಪೂರ್ಣ ಸತ್ಯಾಗ್ರಹಿ ಆದರೂ ಸಾಕು. ಅಂಥ ಪೂರ್ಣ ಸತ್ಯಾಗ್ರಹಿಗಳಾಗಲು ನಾವೆಲ್ಲರೂ ಪ್ರಯತ್ನಿಸೋಣ. ಇದನ್ನು ಸಾಧಿಸಲು ನಮ್ಮಲ್ಲಿ ಕೆಳಗಿನವನಿಗೂ ಸಾಧ್ಯವಲ್ಲದ ವಿಶೇಷ ಗುಣವೇನೂ ಬೇಕಾಗಿಲ್ಲ. ಏಕೆಂದರೆ ಸತ್ಯಾಗ್ರಹವು ಒಳಗಿರುವ ಆತ್ಮದ ಲಕ್ಷಣ. ಅದು ನಮ್ಮಲ್ಲಿ ಪ್ರತಿಯೊಬ್ಬರ ಒಳಗೂ ಅಡಗಿದೆ. ಸ್ವರಾಜ್ಯದ ಹಾಗೆ ಅದು ಸಹ ನಮ್ಮ ಜನ್ಮಸಿದ್ಧ ಹಕ್ಕು ಎಂಬುದನ್ನು ಅರಿತುಕೊಳ್ಳೋಣ.



1946 ಬಾಂಬೆಯ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ನೆಹರೂ ಮತ್ತು ವಿಜಯ ಲಕ್ಷ್ಮೀ ಪಂಡಿತ್ ಅವರೊಂದಿಗೆ ಗಾಂಧೀಜಿ



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಗಾಂಧೀಜಿ ಕನಸು
ಕರ್ನಾಟಕದಲ್ಲಿ ನನಸು
ಹಸಿವುಮುಕ್ತ ಕರ್ನಾಟಕ
ಅನ್ನಭಾಗ್ಯ
ಬಡವರಿಗೆ ಪ್ರತಿ ತಿಂಗಳು 10 kg
5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಫಲಾನುಭವಿಗಳ ಸಂಖ್ಯೆ: 55.47 ಕೋಟಿ
ಒಟ್ಟು ವೆಚ್ಚ: ರೂ.9,104 ಕೋಟಿ
ನುಡಿದಂತೆ ನಡೆದಿದ್ದೇವೆ...
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹ ಜ್ಯೋತಿ
ಪ್ರತಿ ಮನೆಗೆ 200
ಗೃಹಲಕ್ಷ್ಮಿ
₹2000
ಯುವನಿಧಿ
₹3000 ₹1500
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ



ಬಿರ್ಲಾ ಹೌಸ್‌ನ ಪ್ರಾರ್ಥನಾ ಸಭೆಯಲ್ಲಿ ಮಹಾತ್ಮ
ಗಾಂಧೀಜಿ, ಬಾಂಬೆ, ಸೆಪ್ಟೆಂಬರ್ 1944

ನಿರ್ಣಯ I
ಸಂತಾಪ ಸೂಚನೆ

ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಮಹಾತ್ಮ ಗಾಂಧೀಜಿಯವರು ಮೊದಲ ನಿರ್ಣಯವನ್ನು ಮಂಡಿಸಿದರು. ಅವರು ಮಾತನಾಡಿ; "ನಾನೀಗ ಮೊದಲ ನಿರ್ಣಯವನ್ನು ಓದುತ್ತೇನೆ. ನಾನು ನಿರ್ಣಯವನ್ನು ಓದಿದ ನಂತರ, ದಯವಿಟ್ಟು ನೀವು ಎದ್ದು ನಿಂತು ಗೌರವವನ್ನು ಸೂಚಿಸಬೇಕು. ಇದು ನಮ್ಮೊಂದಿಗೆ ಇನ್ನು ಇಲ್ಲವಾದರಿಗೆ ಸಂತಾಪ ಸೂಚಿಸಲು ಇರುವ ಅತ್ಯಂತ ಸರಳವಾದ ವಿಧಾನ ಎಂದರು.

ಬಿ-ಅಮ್ಮ, ಶ್ರೀ ಅಶುತೋಷ್ ಚೌಧರಿ, ಶ್ರೀ ಅಶುತೋಷ್ ಮುಖರ್ಜಿ, ಶ್ರೀ ಭೂಪೇಂದ್ರನಾಥ ಬಸು, ಡಾ. ಸುಬ್ರಮಣ್ಯ ಐಯ್ಯರ್, ಶ್ರೀ ದಾಲ್ಬಹದ್ದೂರ್ ಗಿರಿ, ಶ್ರೀ ಗೋವಿಂದ ವೆಂಕಟೇಶ್ ಯಾಳಗಿ, ಶ್ರೀ ವಾಮನ ರಾವ್ ಮೊಹರಿ, ಶ್ರೀ ಟಿ.ವಿ. ಗೋಪಾಲಸ್ವಾಮಿ ಮುದಲಿಯಾರ್, ಶ್ರೀ ಸಿ.ವಿ.ಪಿ. ಶಿವಂ ಮತ್ತು ಲಾಲಾ ಕನ್ಹಯ್ಯ ಲಾಲ್ಜಿ ಹಾಗೂ ದಕ್ಷಿಣ ಆಫ್ರಿಕಾದ ಶ್ರೀ ರುಸ್ತುಮಜಿ ಜೀವನ್ಜಿ ಗೋರ್ಖೋಡು ಮತ್ತು ಪಿ.ಕೆ. ನಾಯ್ಡು ಅವರ ನಿಧನನಕ್ಕೆ ಅಧಿವೇಶನವು ಸಂತಾಪ ಸೂಚಿಸುತ್ತದೆ ಮತ್ತು ದುಃಖಿತ ಕುಟುಂಬಗಳಿಗೆ ಗೌರವಯುತ ಸಾಂತ್ವಾನವನ್ನು ಸಲ್ಲಿಸುತ್ತದೆ ಎಂದು ನಿರ್ಣಯ ಮಂಡಿಸಲಾಗಿತ್ತು.



ಬೆಳಗಾವಿಯ ಅಧಿವೇಶನ ಗೋಪುರ

ನಿರ್ಣಯ II
ಕೋಲ್ಕತ್ತಾ ಒಪ್ಪಂದ ಮತ್ತು ನೇಯ್ಗೆಯ ಮತಾಧಿಕಾರ

(ಅ) (i) ಕಾಂಗ್ರೆಸ್ ಈ ಮೂಲಕ ಮಹಾತ್ಮ ಗಾಂಧಿ ಮತ್ತು ಸ್ವರಾಜ್ ಪಕ್ಷದ ಪರವಾಗಿ ದೇಶಬಂಧು ಸಿ.ಆರ್. ದಾಸ್ ಮತ್ತು ಪಂಡಿತ ಮೋತಿಲಾಲ್ ನೆಹರು ನಡುವಿನ ಈ ಕೆಳಗಿನ ಒಪ್ಪಂದವನ್ನು ಅನುಮೋದಿಸುತ್ತದೆ.

(ii) ಈ ಒಪ್ಪಂದವು ಕಾಂಗ್ರೆಸಿನ ಎರಡು ಗುಂಪುಗಳ ನಡುವೆ ನಿಜವಾದ ಒಗ್ಗಟ್ಟನ್ನು ಮೂಡಿಸುತ್ತದೆ ಎಂದು ಕಾಂಗ್ರೆಸ್ ಭಾವಿಸುತ್ತದೆ ಮತ್ತು ಇತರ ರಾಜಕೀಯ ಸಂಘಟನೆಗಳಿಗೆ ಸೇರಿದ ವ್ಯಕ್ತಿಗಳಿಗೆ ಕಾಂಗ್ರೆಸಿಗೆ ಸೇರಲು ಅವಕಾಶ ಮಾಡಿಕೊಡುತ್ತದೆ. ಹೊಸ ಮಸೂದೆ ಅಥವಾ 1818ರ ವಿಧಾಯಕದ 9ರ ಅಡಿಯಲ್ಲಿ ಬಂಧಿತರಾದ ಸ್ವರಾಜ್ ಪಕ್ಷದವರನ್ನು ಮತ್ತು ಇತರರನ್ನು ಕಾಂಗ್ರೆಸ್ ಅಭಿನಂದಿಸುತ್ತದೆ ಹಾಗೂ ಭಾರತದ ಜನರು ತಮ್ಮ ಸ್ಥಾನಮಾನ ಮತ್ತು ಸ್ವಾತಂತ್ರ್ಯವನ್ನು ಸಮರ್ಥಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದುವವರೆಗೆ ಇಂತಹ ಬಂಧನಗಳು ಅನಿವಾರ್ಯ ಎಂದು ಅಭಿಪ್ರಾಯ ಪಡುತ್ತದೆ. ದೇಶದ ಪ್ರಸ್ತುತ ಪರಿಸ್ಥಿತಿಯಲ್ಲಿ, ವಿದೇಶಿ ವಸ್ತ್ರಗಳನ್ನು ದೀರ್ಘಕಾಲದವರೆಗೆ ಬಹಿಷ್ಕರಿಸುವ ಮೂಲಕ ಈ ಸಾಮರ್ಥ್ಯವನ್ನು ಬೆಳೆಸಬಹುದು ಎಂಬ ಅಭಿಪ್ರಾಯವನ್ನು ಹೊಂದಿದೆ. ಆದ್ದರಿಂದ ಈ ರಾಷ್ಟ್ರೀಯ ಉದ್ದೇಶವನ್ನು ಸಾಧಿಸಲು ಜನರ ನಿಷ್ಠೆ ಮತ್ತು ನಿರ್ಧಾರದ ಸಂಕೇತವಾಗಿ, ಮತಾಧಿಕಾರದ ಭಾಗವಾಗಿ ಕೈಮಗ್ಗದ ಬಳಕೆಯನ್ನು ಸ್ವಾಗತಿಸುತ್ತದೆ ಮತ್ತು ಪ್ರತಿಯೊಬ್ಬರೂ ಈ ಉದ್ದೇಶವನ್ನು ಈಡೇರಿಸುವ ಸಲುವಾಗಿ ಕಾಂಗ್ರೆಸ್ ಸೇರಬೇಕೆಂದು ಮನವಿ ಮಾಡುತ್ತದೆ.

(iii) ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಪ್ರತಿಯೊಬ್ಬ ಭಾರತೀಯ, ಪುರುಷ ಮತ್ತು ಮಹಿಳೆ, ಎಲ್ಲ ವಿದೇಶಿ ವಸ್ತ್ರಗಳನ್ನು ತ್ಯಜಿಸಿ, ಕೈಯಲ್ಲಿ ನೇಯ್ದ ಮತ್ತು ಕೈಯಿಂದ ನೇಯ್ದ ಖಾದಿಯನ್ನು ಮಾತ್ರ ಬಳಸಬೇಕೆಂದು ಕಾಂಗ್ರೆಸ್ ಕೋರುತ್ತದೆ. ಈ ಉದ್ದೇಶವನ್ನು ವಿಳಂಬವಿಲ್ಲದೆ ಸಾಧಿಸಲು, ಎಲ್ಲ ಕಾಂಗ್ರೆಸ್ ಸದಸ್ಯರು ಕೈಮಗ್ಗ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ, ಖಾದಿ ತಯಾರಿಕೆ ಮತ್ತು ಮಾರಾಟಕ್ಕೆ ನೆರವು ನೀಡಬೇಕೆಂದು ಕಾಂಗ್ರೆಸ್ ಮನವಿ ಮಾಡುತ್ತದೆ.

(iv) ಭಾರತದ ಸಂಸ್ಥಾನಗಳ ರಾಜರು, ಶ್ರೀಮಂತ ವರ್ಗದವರು, ಕಾಂಗ್ರೆಸ್ಗೆ ಸೇರಿರದ ರಾಜಕೀಯ ಮತ್ತು ಇತರ ಸಂಘಟನೆಗಳ ಸದಸ್ಯರು, ಪುರಸಭೆಗಳಿಗೆ, ಸ್ಥಳೀಯ ಮಂಡಳಿಗಳು, ಪಂಚಾಯತ್ಗಳು ಮತ್ತು ಇತರ ಸಂಸ್ಥೆಗಳು, ವೈಯಕ್ತಿಕವಾಗಿ ಬಳಕೆ ಮಾಡುವ ಮೂಲಕ ಮತ್ತು ಇತರ ರೀತಿಯಲ್ಲಿ ಕೈಮಗ್ಗದ ಪ್ರಚಾರಕ್ಕೆ ನೆರವು ನೀಡಬೇಕು. ವಿಶೇಷವಾಗಿ ನಯವಾದ ಖಾದಿಯಲ್ಲಿ ಕಲಾತ್ಮಕ ವಿನ್ಯಾಸಗಳನ್ನು ಮಾಡಬಲ್ಲ ಅನುಭವ ಮತ್ತು ನೈಪುಣ್ಯತೆ ಹೊಂದಿದ ಕಲಾವಿದರಿಗೆ ಉದಾರ ಪ್ರೋತ್ಸಾಹ ನೀಡಬೇಕೆಂದು ಕಾಂಗ್ರೆಸ್ ಮನವಿ ಮಾಡುತ್ತದೆ.

(v) ವಿದೇಶಿ ಬಟ್ಟೆ ಮತ್ತು ನೂಲಿನ ವ್ಯಾಪಾರದಲ್ಲಿ ತೊಡಗಿರುವ

ವ್ಯಾಪಾರಿಗಳು ರಾಷ್ಟ್ರದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ವಿದೇಶಿ ವಸ್ತ್ರ ಮತ್ತು ನೂಲಿನ ಆಮದನ್ನು ನಿಲ್ಲಿಸಿ, ಖಾದಿ ವ್ಯಾಪಾರದ ಮೂಲಕ ರಾಷ್ಟ್ರದ ಗೃಹ ಉದ್ಯಮಕ್ಕೆ ನೆರವು ನೀಡಬೇಕೆಂದು ಕಾಂಗ್ರೆಸ್ ಮನವಿ ಮಾಡುತ್ತದೆ.

(vi) ಗಿರಣಿಗಳಲ್ಲಿ ಮತ್ತು ಇತರ ಮಗ್ಗಗಳಲ್ಲಿ ಗಿರಣಿ ನೂಲಿನಿಂದ ವಿವಿಧ ರೀತಿಯ ಬಟ್ಟೆಗಳನ್ನು ತಯಾರಿಸಿ ಭಾರತೀಯ ಮಾರುಕಟ್ಟೆಯಲ್ಲಿ ಖಾದಿ ಎಂದು ಮಾರಾಟ ಮಾಡುತ್ತಿರುವುದು ಕಾಂಗ್ರೆಸಿನ ಗಮನಕ್ಕೆ ಬಂದಿದೆ. ಗಿರಣಿ ಮಾಲೀಕರು ಮತ್ತು ಸಂಬಂಧಪಟ್ಟ ಇತರ ತಯಾರಕರು ಈ ಅನೈತಿಕವಾದ ಪದ್ಧತಿಯನ್ನು ನಿಲ್ಲಿಸಬೇಕೆಂದು ಕಾಂಗ್ರೆಸ್ ಮನವಿ ಮಾಡುತ್ತದೆ ಮತ್ತು ಭಾರತದ ಪುರಾತನ ಗೃಹ ಉದ್ಯಮದ ಪುನರುಜ್ಜೀವನಗೊಳಿಸಿ ಪ್ರೋತ್ಸಾಹಿಸಲು, ಇನ್ನೂ ಕಾಂಗ್ರೆಸ್ ಪ್ರಭಾವಕ್ಕೆ ಒಳಗಾಗದ ದೇಶದ ಭಾಗಗಳಿಗೆ ಮಾತ್ರ ತಮ್ಮ ಕಾರ್ಯಾಚರಣೆಯನ್ನು ಸೀಮಿತಗೊಳಿಸಬೇಕೆಂದು ಮತ್ತು ವಿದೇಶಿ ನೂಲಿನ ಆಮದನ್ನು ನಿಲ್ಲಿಸಬೇಕೆಂದು ಮನವಿ ಮಾಡುತ್ತದೆ.

(vii) ಹಿಂದೂ, ಮುಸ್ಲಿಂ ಅಥವಾ ಯಾವುದೇ ಧಾರ್ಮಿಕ ಪಂಥದ ಮುಖ್ಯಸ್ಥರು ಮತ್ತು ನಾಯಕರು ತಮ್ಮ ಸಮುದಾಯಗಳಲ್ಲಿ ಖಾದಿಯ ಸಂದೇಶವನ್ನು ಪ್ರಚಾರ ಮಾಡಿ, ವಿದೇಶಿ ವಸ್ತ್ರದ ಬಳಕೆಯನ್ನು ನಿಲ್ಲಿಸಲು ಸಲಹೆ ನೀಡಬೇಕೆಂದು ಕಾಂಗ್ರೆಸ್ ಮನವಿ ಮಾಡುತ್ತದೆ.

(viii) ಪ್ರಸ್ತುತ ಸಂವಿಧಾನದಲ್ಲಿರುವ ಕಲಮು **x** ಅನ್ನು ರದ್ದುಗೊಳಿಸಿ,


ಅದರ ಬದಲಿಗೆ ಈ ಕೆಳಗಿನಂತೆ ಸೇರಿಸಲಾಗುತ್ತದೆ:

(b) ಕಲಮು **x** ಅಡಿಯಲ್ಲಿ ಅನರ್ಹಗೊಳಿಸಲ್ಪಟ್ಟ ಪ್ರತಿಯೊಬ್ಬರೂ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ನಿಯಂತ್ರಣದಲ್ಲಿರುವ ಯಾವುದೇ ಪ್ರಾಥಮಿಕ ಸಂಘಟನೆಯ ಸದಸ್ಯರಾಗಲು ಅರ್ಹರಾಗಿರುತ್ತಾರೆ. ಆದರೆ ರಾಜಕೀಯ ಮತ್ತು ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ಅಥವಾ ಕಾಂಗ್ರೆಸ್ ವ್ಯವಹಾರದಲ್ಲಿ ತೊಡಗಿರುವಾಗ ಕೈನೂಲಿನಿಂದ ನೇಯ್ದ ಮತ್ತು ಕೈಮಗ್ಗದ ಖಾದಿಯನ್ನು ಧರಿಸದವರು ಮತ್ತು ಪ್ರತಿ ವರ್ಷ ತಮ್ಮ ಸ್ವಂತ ನೂಲಿನಿಂದ 20,000 ಗಜ ಸಮನಾಗಿ ನೂಲಿದ ನೂಲನ್ನು ಕೊಡುಗೆಯಾಗಿ ನೀಡದವರು, ಅಥವಾ ಅನಾರೋಗ್ಯ ಅಥವಾ ಮನಸ್ಸಿಲ್ಲದೆ ಅಥವಾ ಅಂತಹ ಯಾವುದೇ ಕಾರಣದಿಂದ, ಬೇರೊಬ್ಬರಿಂದ ನೂಲಿಸಿದ ಅದೇ ಪ್ರಮಾಣದ ನೂಲನ್ನು ನೀಡದವರು ಯಾವುದೇ ಕಾಂಗ್ರೆಸ್ ಸಮಿತಿ ಅಥವಾ ಸಂಘಟನೆಯ ಸದಸ್ಯರಾಗಲು ಅರ್ಹರಾಗುವುದಿಲ್ಲ. ಅಲ್ಲದೆ, ಯಾವುದೇ ವ್ಯಕ್ತಿ ಒಂದೇ ಸಮಯದಲ್ಲಿ ಎರಡು ಸಮಾನಾಂತರ ಕಾಂಗ್ರೆಸ್ ಸಂಘಟನೆಗಳ ಸದಸ್ಯರಾಗಿರುವಂತಿಲ್ಲ.

(i) ಸದಸ್ಯತ್ವದ ವರ್ಷವನ್ನು ಜನವರಿ 1 ರಿಂದ ಡಿಸೆಂಬರ್ 31 ರವರೆಗೆ ಲೆಕ್ಕಹಾಕಲಾಗುತ್ತದೆ. ಸದರಿ ಶುಲ್ಕವನ್ನು ಮುಂಗಡವಾಗಿ ಪಾವತಿಸಬೇಕು ಮತ್ತು ತಿಂಗಳಿಗೆ 2,000 ಗಜದ ಕಂತುಗಳಲ್ಲಿ ಮುಂಗಡವಾಗಿ ಪಾವತಿಸಬಹುದು. ವರ್ಷದ ಮಧ್ಯದಲ್ಲಿ ಕಾಂಗ್ರೆಸ್ಗೆ ಸೇರುವ ಸದಸ್ಯರು ವರ್ಷದ ಆರಂಭದಿಂದ ಬಾಕಿ ಇರುವ ಪೂರ್ಣ ಪ್ರಮಾಣವನ್ನು ಕೊಡುಗೆಯಾಗಿ ನೀಡಬೇಕು. 1925ರಲ್ಲಿ, ಶುಲ್ಕ 20,000 ಗಜ ಮಾತ್ರ ಆಗಿರುತ್ತದೆ ಮತ್ತು ಮಾರ್ಚ್ 1 ರೊಳಗೆ ಅಥವಾ ಮೇಲೆ ಹೇಳಿದಂತೆ ಕಂತುಗಳಲ್ಲಿ ಪಾವತಿಸಬೇಕು.

(ii) ನೂಲಿನ ಚಂದಾ ಅಥವಾ ಬಾಕಿ ಇರುವ ನೂಲಿನ ಕಂತುಗಳನ್ನು ಕೊಡದ ಯಾವುದೇ ವ್ಯಕ್ತಿ, ಯಾವುದೇ ಕಾಂಗ್ರೆಸ್ ಸಂಘಟನೆಯ ಪ್ರತಿನಿಧಿಯ ಆಯ್ಕೆಗಾಗಿನ ಅಥವಾ ನಿಯೋಗಕ್ಕೆ ಆಯ್ಕೆಗಾಗಿನ ಚುನಾವಣೆಯಲ್ಲಿ ಮತ ಚಲಾಯಿಸಲು, ಅಥವಾ ಅಂತಹ ಯಾವುದೇ ಸಮಿತಿ ಅಥವಾ ಉಪಸಮಿತಿಗೆ ಚುನಾಯಿತರಾಗಲು, ಅಥವಾ ಕಾಂಗ್ರೆಸ್ ಅಥವಾ ಯಾವುದೇ ಕಾಂಗ್ರೆಸ್ ಸಂಘಟನೆ ಅಥವಾ ಅದರ ಯಾವುದೇ ಸಮಿತಿ ಅಥವಾ ಉಪಸಮಿತಿಯ ಸಭೆಗಳಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ. ನೂಲಿನ ಶುಲ್ಕ ಪಾವತಿಯಲ್ಲಿ ಅಸಮರ್ಥರಾಗಿರುವ ಯಾವುದೇ ಸದಸ್ಯರು ಬಾಕಿ ಇರುವ ಕಂತು ಮತ್ತು ಆ ತಿಂಗಳಿನ ಪ್ರಸ್ತುತ ಕಂತನ್ನು ಪಾವತಿಸುವ ಮೂಲಕ ತಮ್ಮ ಹಕ್ಕುಗಳನ್ನು ಮರುಸ್ಥಾಪಿಸಿಕೊಳ್ಳಬಹುದು.

(iii) ಪ್ರತಿಯೊಂದು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗೆ ತಿಂಗಳಿಂದ ತಿಂಗಳಿಗೆ ಸದಸ್ಯತ್ವದ ಮತ್ತು ಈ ಕಲಮುವಿನ ಮೂಲಕ ಪಡೆದ ನೂಲಿನ ವಿವರಗಳನ್ನು ಕಳುಹಿಸಬೇಕು. ಪ್ರಾದೇಶಿಕ ಕಾಂಗ್ರೆಸ್ ಸಮಿತಿಯು ನೂಲಿನ ಶುಲ್ಕವನ್ನು ಅಥವಾ ಅದರ ಮೌಲ್ಯದ ಹತ್ತು ಪ್ರತಿಶತವನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಕೊಡುಗೆಯಾಗಿ ನೀಡಬೇಕು.



1942 ರಲ್ಲಿ ನಿರ್ಣಾಯಕ ಸಭೆಯ ನಂತರ ಬಿರ್ಲಾ ಹೌಸ್‌ನ ಮೆಟ್ಟಿಲುಗಳಲ್ಲಿ
ಮಹಾತ್ಮ ಗಾಂಧೀಜಿ ಮತ್ತು ಸರ್ ಸ್ಟಫರ್ಡ್

ನಿರ್ಣಯ - III
ಸರೋಜಿನಿ ನಾಯ್ಡು ಅವರ ಸೇವೆಗೆ ಸಂಬಂಧಿಸಿದ ನಿರ್ಣಯ

ಅಧಿವೇಶನದ ಅಧ್ಯಕ್ಷರು ಈ ಕೆಳಗಿನ ನಿರ್ಣಯವನ್ನು ಮಂಡಿಸಿದರು; ವಿದೇಶದಲ್ಲಿರುವ ಭಾರತೀಯರಿಗೆ ಶ್ರೀಮತಿ ಸರೋಜಿನಿ ನಾಯ್ಡು ಅವರು ಸಲ್ಲಿಸಿದ ಅಪಾರ ಸೇವೆಯನ್ನು ಕಾಂಗ್ರೆಸ್ ಪರಿಗಣಿಸುತ್ತದೆ. ಅವರು ತಮ್ಮ ಶಕ್ತಿ ಮತ್ತು ಸಮರ್ಪಣೆಯಿಂದ ಭಾರತೀಯ ವಲಸಿಗರ ಮನಸ್ಸನ್ನು ಗದ್ದಿದ್ದಾರೆ ಮತ್ತು ತಮ್ಮ ಮನವೊಲಿಸುವ ವಾಕ್ಚಾತುರ್ಯದಿಂದ ಯುರೋಪಿಯನ್ನರ ಸಹಾನುಭೂತಿಯನ್ನು ಗಳಿಸಿದ್ದಾರೆ.

'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಶ್ರೀ ವಝೆ ಮತ್ತು ಪಂಡಿತ ಬನಾರಸಿ ದಾಸ್ ಚತುರ್ವೇದಿ ಅವರು ಕೀನ್ಯಾದಲ್ಲಿ ನೆಲೆಸಿರುವ ವಲಸಿಗರ ಪರವಾಗಿ ಸಲ್ಲಿಸಿದ ಸೇವೆಗಳನ್ನು ಕಾಂಗ್ರೆಸ್ ಕೃತಜ್ಞತೆಯಿಂದ ಸ್ಮರಿಸುತ್ತದೆ.

ಈ ನಿರ್ಣಯ ಅಂಗೀಕಾರಗೊಂಡಿತು. ಎಲ್ಲರೂ ಕೆಲ ಹೊತ್ತು ಮೌನವಾಗಿ ಎದ್ದುನಿಂತು ನಿರ್ಣಯ ಅಂಗೀಕರಿಸಿದ್ದು ವಿಶೇಷವಾಗಿತ್ತು. ಆದರೆ ಅಧಿವೇಶನದಲ್ಲಿ ಭಾಗಿಯಾಗಿದ್ದ ಸರೋಜಿನಿ ನಾಯ್ಡು ಅವರು ಎದ್ದುನಿಂತಿರಲಿಲ್ಲ. ಹಿಂದಿಯಲ್ಲಿ ಈ ನಿರ್ಣಯವನ್ನು ಪಂಡಿತ್ ಸುಂದರ್ ಲಾಲ್ ಓದಿದರೆ ಕನ್ನಡದಲ್ಲಿ ಶ್ರೀ ಮುದ್ವೇಕರ್ ಓದಿದರು.

ನಿರ್ಣಯ - IV
ಬರ್ಮಾದ ಜನರಿಗೆ ಸಹಾನುಭೂತಿ

ಬರ್ಮಾದ ಎಸ್.ಎ.ಎಸ್. ತ್ಯಾಬ್ಜಿ ಈ ಕೆಳಗಿನ ನಿರ್ಣಯವನ್ನು ಮಂಡಿಸಿದರು:

ಸಂಕಷ್ಟದಲ್ಲಿರುವ ಬರ್ಮಾದ ಜನರಿಗೆ ಗೌರವಯುತ ಸಹಾನುಭೂತಿಯನ್ನು ಕಾಂಗ್ರೆಸ್ ವ್ಯಕ್ತಪಡಿಸುತ್ತದೆ ಮತ್ತು ಅವರ ಮೇಲೆ ನಡೆಯುತ್ತಿರುವ ದಮನಕಾರಿ ಕ್ರಮಗಳಿಗೆ ಅಲ್ಲಿನ ಜನರು ಹೆದರುವುದಿಲ್ಲ ಮತ್ತು ಭಯಭೀತರಾಗುವುದಿಲ್ಲ ಎಂದು ನಂಬುತ್ತದೆ.

ಬರ್ಮಾದಲ್ಲಿರುವ ಕೆಲವು ಭಾರತೀಯ ವಲಸಿಗರು ಸಾಮುದಾಯಿಕ ಪ್ರಾತಿನಿಧ್ಯವನ್ನು ಕೇಳುತ್ತಿರುವ ಪ್ರವೃತ್ತಿಯನ್ನು ಕಾಂಗ್ರೆಸ್ ವಿಷಾದದಿಂದ ಗಮನಿಸಿದೆ ಮತ್ತು ಅಂತಹ ವಿಭಜನಕಾರಿ ಪ್ರವೃತ್ತಿಯು ತಾತ್ವಿಕವಾಗಿ ಸರಿಯಲ್ಲ. ಆದ್ದರಿಂದ ಇಂತಹ ಬೇಡಿಕೆಯನ್ನು ಮಾಡದಂತೆ ಅವರಿಗೆ ಗಟ್ಟಿಯಾಗಿ ಸಲಹೆ ನೀಡುತ್ತದೆ.

ಈ ನಿರ್ಣಯವನ್ನೂ ಪಂಡಿತ್ ಸುಂದರ್ ಲಾಲ್ ಹಿಂದಿಯಲ್ಲಿ ಓದಿದರೆ ಕನ್ನಡಕ್ಕೆ ಶ್ರೀ ಮುದ್ವೇಕರ್ ಅನುವಾದಿಸಿದರು.



ಶಿಮ್ಲಾದಲ್ಲಿ ಮಹಾತ್ಮ ಗಾಂಧೀಜಿ, ಎರಡನೇ ವಿಶ್ವಯುದ್ಧದ ಕುರಿತು ಚರ್ಚಿಸಲು ಲಾರ್ಡ್ ಲಿನ್ಲಿತ್ಗೋ ಅವರನ್ನು ಭೇಟಿ ಮಾಡಲು ತೆರಳುತ್ತಿರುವುದು.



ಮಹಾತ್ಮ ಗಾಂಧೀಜಿ ಎಸ್.ಎಸ್. ರಾಜಪುತಾನಾ ಬ್ರಿಟಿಷ್ ಪ್ರಯಾಣಿಕ ಹಡಗಿನ ಡೆಕ್ಕಿನ ಮೇಲೆ ಇಂಗ್ಲೆಂಡಿಗೆ ತೆರಳುವ ಮೊದಲು, ಬಾಂಬೆ, ಆಗಸ್ಟ್, 1931

ನಿರ್ಣಯ–V

ಕೋಹತ್ ಮತ್ತು ಗುಲ್ಬರ್ಗಾ ಗಲಭೆಗಳು


ಪಂಡಿತ ಮೋತಿಲಾಲ್ ನೆಹರು ಅವರು ಕೋಹತ್ ಮತ್ತು ಗುಲ್ಬರ್ಗಾದಲ್ಲಿ ನಡೆದ ಗಲಭೆಗಳಿಗೆ ಸಂಬಂಧಿಸಿದ ನಿರ್ಣಯವನ್ನು ಮಂಡಿಸಲು ವೇದಿಕೆ ಏರುತ್ತಿದ್ದಂತೆಯೇ ಚಪ್ಪಾಳೆ ಮೂಲಕ ಭರ್ಜರಿ ಸ್ವಾಗತ ಕೋರಲಾಯಿತು.

ಕೋಹತ್ನಲ್ಲಿ ಇತ್ತೀಚೆಗೆ ನಡೆದ ಗಲಭೆ ಮತ್ತು ಈ ಸಂದರ್ಭದಲ್ಲಿ

ಆಗಿರುವ ಜೀವಹಾನಿ, ಆಸ್ತಿಪಾಸ್ತಿ ನಾಶ ಹಾಗೂ ದೇವಾಲಯಗಳಿಗೆ ಮತ್ತು ಗುರುದ್ವಾರಳಿಗೆ ಆಗಿರುವ ಹಾನಿಯನ್ನು ಕಾಂಗ್ರೆಸ್ ಖಂಡಿಸುತ್ತದೆ. ಜೀವಹಾನಿಯನ್ನು ತಡೆಯುವ ಮತ್ತು ಆಸ್ತಿಯ ರಕ್ಷಣೆಯನ್ನು ಮಾಡುವ ತನ್ನ ಮೂಲ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಸ್ಥಳೀಯ ಆಡಳಿತ ವಿಫಲವಾಗಿದೆ ಎಂಬ ಅಭಿಪ್ರಾಯಪಿದೆ. ಕೋಹತ್ನಿಂದ ಹಿಂದೂಗಳು ಬಲವಂತವಾಗಿ ವಲಸೆ ಹೋಗಬೇಕಾದ ಸ್ಥಿತಿ ನಿರ್ಮಾಣವಾಗಿರುವುದನ್ನು ಕೂಡ ಕಾಂಗ್ರೆಸ್ ತೀವ್ರವಾಗಿ ಖಂಡಿಸುತ್ತದೆ. ಕೋಹತ್ನ ಮುಸಲ್ಮಾನರು ತಮ್ಮ ಹಿಂದೂ ಸಹೋದರರ ಜೀವ ಮತ್ತು ಆಸ್ತಿಯನ್ನು ಪೂರ್ಣ ರಕ್ಷಿಸುವುದನ್ನು ಖಾತ್ರಿಪಡಿಸಬೇಕು ಮತ್ತು ಕೋಹತ್ ಮುಸಲ್ಮಾನರಿಂದ ಗೌರವಯುತ ಆಹ್ವಾನ ನೀಡಿದರೆ ಮತ್ತು ಹಿಂದೂ ಮತ್ತು ಮುಸಲ್ಮಾನ್ ನಾಯಕರು ಸಲಹೆ ನೀಡಿದರೆ ಮಾತ್ರ ಅವರನ್ನು (ಹಿಂದೂಗಳನ್ನು) ಕೋಹತ್ಗೆ ಮರಳುವಂತೆ ಆಹ್ವಾನಿಸಬೇಕು ಎಂದು ಕಾಂಗ್ರೆಸ್ ಬಲವಾಗಿ ಒತ್ತಾಯಿಸುತ್ತದೆ. ಕೋಹತ್ ದುರಂತಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರದ ಹಾಗೂ ಇತರರ ನಿರ್ಣಯವನ್ನು ಒಪ್ಪದಂತೆ ಕಾಂಗ್ರೆಸ್ ಸಾರ್ವಜನಿಕರಿಗೆ ಅಂದರೆ ಹಿಂದೂ ಅಥವಾ ಮುಸಲ್ಮಾನರಿಗೆ ಸಲಹೆ ನೀಡುತ್ತದೆ. ಸೌಹಾರ್ದ ಸಮ್ಮೇಳನ ನೇಮಿಸಿದ ಮಂಡಳಿ ಅಥವಾ ಇತರ ಸಮಾನ ಪ್ರಾತಿನಿಧ್ಯ ಹೊಂದಿರುವ ಸಂಸ್ಥೆಯು ಈ ದುರದೃಷ್ಟಕರ ಗಲಭೆಯ ಬಗ್ಗೆ ವಿಚಾರಣೆ ನಡೆಸಿ ನಿರ್ಧಾರಕ್ಕೆ ಬರುವವರೆಗೆ ಈ ಗಲಭೆಗೆ ಸಂಬಂಧಿಸಿದ ಯಾವುದೇ ತೀರ್ಪನ್ನು ಅಮಾನತ್ತಿನಲ್ಲಿರಿಸಬೇಕೆಂದು ಸಲಹೆ ನೀಡುತ್ತದೆ.

ಗುಲ್ಬರ್ಗಾದಲ್ಲಿ ನಡೆದ ಗಲಭೆಯ ಸಂತ್ರಸ್ತರಿಗೆ ಕಾಂಗ್ರೆಸ್ ತನ್ನ ಹೃದಯಪೂರ್ವಕ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ ಮತ್ತು ಆ ಪಟ್ಟಣದಲ್ಲಿ ಆರಾಧನಾ ಸ್ಥಳಗಳ ಅಪವಿತ್ರಗೊಳಿಸಿದ ಘಟನೆಗಳನ್ನು ಖಂಡಿಸುತ್ತದೆ.

ಈ ನಿರ್ಣಯವನ್ನೂ ಕನ್ನಡಕ್ಕೆ ಶ್ರೀ ಮುರ್ಡೇಕರ್ ಅವರು ಅನುವಾದಿಸಿದ್ದರು.



ತಮ್ಮ ಕಾನೂನು ಕಚೇರಿಯ
ಸಹೋದ್ಯೋಗಿಗಳೊಂದಿಗೆ ಮಹಾತ್ಮ ಗಾಂಧೀಜಿ
(ಮಧ್ಯದಲ್ಲಿ), ಜೋಹಾನ್ಸ್‌ಬರ್ಗ್ 1913

ನಿರ್ಣಯ - VI
ಅಸ್ಪಶ್ಯತೆ

ಎಲ್.ಬಿ. ಭೋಪಟ್ಕರ್ ಅವರು ಈ ಕೆಳಗಿನ ನಿರ್ಣಯವನ್ನು ಮಂಡಿಸಿದರು:

ಅಸ್ಪಶ್ಯತೆ ನಿವಾರಣೆಯ ವಿಷಯಕ್ಕೆ ಸಂಬಂಧಿಸಿದಂತೆ ಹಿಂದೂಗಳ ಅಭಿಪ್ರಾಯದಲ್ಲಿ ಆಗಿರುವ ಬದಲಾವಣೆಗಳನ್ನು ಕಾಂಗ್ರೆಸ್ ತೃಪ್ತಿಯಿಂದ ಗಮನಿಸಿದೆ. ಆದರೆ ಇನ್ನೂ ಬಹಳಷ್ಟು ಬದಲಾವಣೆ ಆಗಬೇಕಾಗಿದೆ ಎಂಬ ಅಭಿಪ್ರಾಯವನ್ನು ಹೊಂದಿದೆ. ಆದ್ದರಿಂದ ಎಲ್ಲಾ ಕಾಂಗ್ರೆಸ್ ಸಂಘಟನೆಗಳ ಹಿಂದೂ ಸದಸ್ಯರು ಈ ಕಾರ್ಯದಲ್ಲಿ ಹೆಚ್ಚಿನ ಪ್ರಯತ್ನ ಮಾಡಬೇಕೆಂದು ಮನವಿ ಮಾಡುತ್ತದೆ.

ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳ ಹಿಂದೂ ಸದಸ್ಯರು ದಲಿತ ವರ್ಗಗಳ ಅಗತ್ಯಗಳಾದ ಬಾವಿಗಳು, ದೇವಾಲಯಗಳು, ಶೈಕ್ಷಣಿಕ ಸೌಲಭ್ಯಗಳು ಮುಂತಾದವುಗಳನ್ನು ಗುರುತಿಸಿ, ಅವುಗಳನ್ನು ಪೂರೈಸಲು ವ್ಯವಸ್ಥೆ ಮಾಡುವ ಮೂಲಕ ದಲಿತ ವರ್ಗಗಳ ಸ್ಥಿತಿಯ ಸುಧಾರಣೆಗೆ ಹೆಚ್ಚಿನ ಗಮನ ನೀಡಬೇಕೆಂದು ಕಾಂಗ್ರೆಸ್ ಒತ್ತಾಯಿಸುತ್ತದೆ.

ಮೇಲ್ಜಾತಿ ಹಿಂದೂಗಳಿಗೆ ಪ್ರವೇಶವಿರುವ ಸಾರ್ವಜನಿಕ ರಸ್ತೆಯನ್ನು ಬಳಸುವ ಅಸ್ಪಶ್ಯರ ಹಕ್ಕನ್ನು ಎತ್ತಿಹಿಡಿಯಲು ಹೋರಾಡುತ್ತಿರುವ 'ವೈಕಂ ಸತ್ಯಾಗ್ರಹಿಗಳು ತೋರುತ್ತಿರುವ ಅಹಿಂಸೆ, ತಾಳ್ಮೆ, ಧೈರ್ಯ ಮತ್ತು ಸಹನೆಗಾಗಿ ಈ ಹೋರಟಗಾರರನ್ನು ಕಾಂಗ್ರೆಸ್ ಅಭಿನಂದಿಸುತ್ತದೆ. ಪ್ರಬುದ್ಧ ರಾಜ್ಯವೆಂದು ಪರಿಗಣಿಸಲ್ಪಟ್ಟಿರುವ ತಿರುವಾಂಕೂರು ರಾಜ್ಯವು ಸತ್ಯಾಗ್ರಹಿಗಳ ನ್ಯಾಯಾಯುತ ಬೇಡಿಕೆಗಳನ್ನು ಗುರುತಿಸಿ ಶೀಘ್ರ ಪರಿಹಾರ ನೀಡುವುದೆಂದು ಆಶಿಸುತ್ತದೆ.

ನಿರ್ಣಯ-VII
ವಿದೇಶಗಳಲ್ಲಿರುವ ಭಾರತೀಯರು

ಉತ್ಸಾಹಭರಿತ ಹರ್ಷದ ಧ್ವನಿಗಳ ನಡುವೆ ಶ್ರೀಮತಿ ಸರೋಜಿನಿ ದೇವಿ ಅವರು ಈ ಕೆಳಗಿನ ನಿರ್ಣಯವನ್ನು ಓದಿದರು:

ವಿದೇಶಗಳಲ್ಲಿ ನೆಲೆಸಿರುವ ಭಾರತೀಯರ ಮೇಲಿನ ಹೆಚ್ಚುತ್ತಿರುವ ನಿರ್ಬಂಧಗಳನ್ನು ಕಾಂಗ್ರೆಸ್ ಕಳವಳ ಮತ್ತು ನೋವಿನಿಂದ ಗಮನಿಸಿದೆ ಮತ್ತು ಭಾರತೀಯ ಹಾಗೂ ಬ್ರಿಟಿಷ್ ಸರ್ಕಾರಗಳು ಪದೇ ಪದೇ ವಲಸಿಗರ ಹಿತಾಸಕ್ತಿ ಕಾಪಾಡುವ ಜವಾಬ್ದಾರಿ ನಮ್ಮದು ಎಂದು ಘೋಷಿಸುತ್ತಿದ್ದರೂ, ಅವರ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ವಿಫಲವಾಗಿವೆ ಎಂಬ ಅಭಿಪ್ರಾಯವನ್ನು ಹೊಂದಿದೆ. ಕಾಂಗ್ರೆಸ್ ವಲಸಿಗರು ಎದುರಿಸುತ್ತಿರುವ ಸಂಕಷ್ಟಗಳ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುತ್ತಾ, ಸ್ವರಾಜ್ಯ ಸಾಧಿಸುವವರೆಗೆ ಪರಿಣಾಮಕಾರಿ ನೆರವು ನೀಡಲು ಸಾಧ್ಯವಾಗದೇ ಇರುವುದಕ್ಕೆ ವಿಷಾದ ವ್ಯಕ್ತಪಡಿಸುತ್ತದೆ.

ದಕ್ಷಿಣ ಆಫ್ರಿಕಾ ಒಕ್ಕೂಟದ ಗವರ್ನರ್ ಜನರಲ್ ರವರು ನಾಟಾಲ್ ಪ್ರಾಂತೀಯ ಶಾಸಕಾಂಗದ ಚುನಾವಣೆಗೆ ಸಂಬಂಧಿಸಿದ ಮಸೂದೆಗೆ ನೀಡಿರುವ ಅನುಮೋದನೆಗೆ ಕಾಂಗ್ರೆಸ್ ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತದೆ. ಈ ಮಸೂದೆಯು ಅಲ್ಲಿ ನೆಲೆಸಿರುವ ಭಾರತೀಯರು ದೀರ್ಘಕಾಲದಿಂದ ಅನುಭವಿಸುತ್ತಿದ್ದ ಸ್ಥಳೀಯ ಆಡಳಿತದ (ಮುನ್ಸಿಪಲ್) ಮತದಾನದ ಹಕ್ಕನ್ನು ಕಸಿದುಕೊಳ್ಳುತ್ತದೆ. ಮತದಾನದ ಹಕ್ಕಿನ ನಿರಾಕರಣೆಯ ವಿಷಯ ಸ್ಪಷ್ಟವಾಗಿ ಅನ್ಯಾಯದ ವಿಷಯವಾಗಿರುವುದು ಮಾತ್ರವಲ್ಲದೆ, 1924ರಲ್ಲಿ ಒಕ್ಕೂಟ ಸರ್ಕಾರ ಮತ್ತು ಭಾರತೀಯ ಸಮುದಾಯದ ನಡುವಿನ ಒಪ್ಪಂದ ಹಾಗೂ ನಾಟಾಲ್ ಸರ್ಕಾರದ ಹಿಂದಿನ ಘೋಷಣೆಗಳ ಉಲ್ಲಂಘನೆ ಎಂದು ಕಾಂಗ್ರೆಸ್ ಪರಿಗಣಿಸುತ್ತದೆ.

ಕೀನ್ಯಾ ಸಮಸ್ಯೆಯ ತಥಾಕಥಿತ ಪರಿಹಾರವು ಕೀನ್ಯಾದಲ್ಲಿ ನೆಲೆಸಿರುವ ಭಾರತೀಯರ ಸಹಜವಾದ ಮತ್ತು ನ್ಯಾಯಯುತ ಹಕ್ಕುಗಳ ನಿರಾಕರಣೆಯೇ ಹೊರತು ಬೇರೇನೂ ಅಲ್ಲ ಎಂಬುದು ಕಾಂಗ್ರೆಸ್ನ ಅಭಿಪ್ರಾಯವಾಗಿದೆ.

ಇಂಗ್ಲಿಷಿನಲ್ಲಿ ಮಂಡಿಸಲ್ಪಟ್ಟ ಈ ನಿರ್ಣಯವನ್ನು ಹಿಂದಿ ಮತ್ತು ಕನ್ನಡಕ್ಕೆ ಅನುವಾದಿಸಲಾಗಿತ್ತು.

ನಿರ್ಣಯ–VIII
ಅಕಾಲಿಗಳಿಗೆ ಅಭಿನಂದನೆ

ಟಿ. ಪ್ರಕಾಶಂ (ಆಂಧ್ರ), ಮದ್ರಾಸ್, ಹರ್ಷದ ಧ್ವನಿಗಳ ನಡುವೆ ಎದ್ದು ನಿಂತು ಈ ನಿರ್ಣಯ ಮಂಡಿಸಿದರು.

ಅಧ್ಯಕ್ಷರೇ, ಮಹಿಳೆಯರೇ ಮತ್ತು ಮಹನೀಯರೇ, ನಾನು ನಿಮ್ಮ ಮುಂದಿಡುವ ನಿರ್ಣಯವು ಈ ಕೆಳಗಿನಂತಿದೆ:

ಗುರುದ್ವಾರ ಸುಧಾರಣೆಗಾಗಿ ಅಕಾಲಿಗಳು ನಡೆಸುತ್ತಿರುವ ಹೋರಾಟದಲ್ಲಿ ತೋರುತ್ತಿರುವ ತಾಳ್ಮೆ, ಸಹನೆ ಮತ್ತು ಧೈರ್ಯಕ್ಕಾಗಿ ಕಾಂಗ್ರೆಸ್ ಅವರನ್ನು ಅಭಿನಂದಿಸುತ್ತದೆ. ಧೈರ್ಯಶಾಲಿ ಅಕಾಲಿಗಳ ಮನೋಬಲವನ್ನು ಮುರಿಯಲು ಪಂಜಾಬ್ ಸರಕಾರವು ಈಗ ಮಾಡುತ್ತಿರುವ ಕುತಂತ್ರದ ಪ್ರಯತ್ನಗಳನ್ನು ಅವರ ಹೋರಾಟದಲ್ಲಿ ತೋರಿಸುತ್ತಿರುವ ಗುಣಗಳ ಮೂಲಕವೇ ಎದುರಿಸಿ ಜಯಗಳಿಸುತ್ತಾರೆ ಎಂದು ಆಶಿಸುತ್ತದೆ.

ನಾಭಾ ಜೈಲಿನಲ್ಲಿರುವ ಅಕಾಲಿ ಕೈದಿಗಳ ಪೈಕಿ ನೂರಕ್ಕೂ ಹೆಚ್ಚು ಜನರ ಸಾವಿನ ವರದಿಯನ್ನು ಕಾಂಗ್ರೆಸ್ ಆಘಾತ ಮತ್ತು ಆಕ್ರೋಶದಿಂದ ನೋಡುತ್ತದೆ ಮತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನೇಮಿಸಿದ್ದ ಅಕಾಲಿಗಳ ದಮನ ಕುರಿತ ತನಿಖಾ ಸಮಿತಿಗೆ ಜೈಲು ಭೇಟಿಗೆ ಅನುಮತಿ ನೀಡಲು ನಾಭಾ ಅಧಿಕಾರಿಗಳು ನಿರಾಕರಿಸಿದ್ದನ್ನು ತೀವ್ರವಾಗಿ ಖಂಡಿಸುತ್ತದೆ.

ಕೈದಿಗಳ ಅಮಾಯಕ ಸಾವುಗಳು ಕೈದಿಗಳ ವಿರುದ್ಧ ಅಧಿಕಾರಿಗಳು ತೋ-ರಿಸುತ್ತಿರುವ ಅಮಾನವೀಯ ನಡವಳಿಕೆಗೆ ಸಾಕ್ಷಿಯಾಗಿದೆ ಎಂಬುದು ಕಾಂಗ್ರೆಸಿನ ಅಭಿಪ್ರಾಯವಾಗಿದೆ.

ಕಾಂಗ್ರೆಸ್ ಈ ರೀತಿ ಸಾವಿಗೀಡಾದ ಕುಟುಂಬಗಳಿಗೆ ತನ್ನ ಗೌರವಯುತ ಸಂತಾಪವನ್ನು ಸೂಚಿಸುತ್ತದೆ.

ನಿರ್ಣಯ - IX
ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳು

ದೇಶದ ಭವಿಷ್ಯದ ಭರವಸೆ ಯುವಜನತೆಯಲ್ಲಿದೆ ಎಂಬುದು ಕಾಂಗ್ರೆಸ್ನ ಬಲವಾದ ಅಭಿಪ್ರಾಯವಾಗಿದೆ. ಆದ್ದರಿಂದ ಪ್ರಾದೇಶಿಕ ಸಮಿತಿಗಳು, ಎಲ್ಲ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳನ್ನು ಚಟುವಟಿಕೆಯಿಂದ ಇರಿಸಲು ಹಿಂದಿಗಿಂತ ಈಗ ಹೆಚ್ಚು ಶ್ರಮವಹಿಸುತ್ತವೆ ಎಂದು ನಂಬುತ್ತದೆ. ಆದರೆ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳನ್ನು ಉಳಿಸಿಕೊಂಡು, ಹೊಸ ಸಂಸ್ಥೆಗಳನ್ನು ತೆರೆಯಬೇಕೆಂಬ ಅಭಿಪ್ರಾಯವಿದ್ದರೂ ಕಾಂಗ್ರೆಸ್ ಈ ಕೆಳಗಿನ ವಿಷಯಗಳನ್ನು ಹೊಂದಿರದೇ ಇರುವ ಯಾವುದೇ ಸಂಸ್ಥೆಯನ್ನು ರಾಷ್ಟ್ರೀಯವೆಂದು ಪರಿಗಣಿಸುವುದಿಲ್ಲ:

ಯಾವುದಾದರೂ ಭಾರತೀಯ ಭಾಷೆಯನ್ನು ಬೋಧನಾ ಮಾಧ್ಯಮವಾಗಿ ಬಳಸದಿರುವುದು.

ಹಿಂದೂ–ಮುಸ್ಲಿಂ ಐಕ್ಯತೆಯನ್ನು ಸಕ್ರಿಯವಾಗಿ ಪ್ರೋತ್ಸಾಹಿಸದಿರುವುದು.

ಅಸ್ಪೃಶ್ಯರಿಗೆ ಶಿಕ್ಷಣ ಮತ್ತು ಅಸ್ಪೃಶ್ಯತೆ ನಿವಾರಣೆಗೆ ಕಾರ್ಯಪ್ರವೃತ್ತವಾಗದಿರುವುದು.

ನೂಲುವುದು, ಹಿಂಜುವುದು ಮತ್ತು ದೈಹಿಕ ಶಿಕ್ಷಣ ಹಾಗೂ ಆತ್ಮ ರಕ್ಷಣೆಯ ತರಬೇತಿಯನ್ನು ಕಡ್ಡಾಯಗೊಳಿಸದಿರುವುದು.

12 ವರ್ಷ ವಯಸ್ಸಿನ ಮೇಲ್ಪಟ್ಟ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪ್ರತಿ ಕೆಲಸದ ದಿನ ಕನಿಷ್ಠ ಅರ್ಧ ಗಂಟೆ ನೂಲು ತೆಗೆಯದಿರುವುದು.

ವಿದ್ಯಾರ್ಥಿಗಳು ಮತ್ತು ಶಿಕ್ಷಕರು ನಿಯಮಿತವಾಗಿ ಖಾದಿ ಧರಿಸದಿರುವುದು.

ಅಧಿವೇಶನದ ಅಧ್ಯಕ್ಷರು ಈ ಕೆಳಗಿನ ನಿರ್ಣಯಗಳನ್ನು ಒಂದರ ಹಿಂದೊಂದರಂತೆ ಮಂಡಿಸಿ, ಮತದಾನ ಮಾಡಲು ಅವಕಾಶ ನೀಡಿದರು ಮತ್ತು ನಿರ್ಣಯಗಳು ಅಂಗೀಕಾರಗೊಂಡಿವೆ ಎಂದು ಪ್ರಕಟಿಸಿದರು. ಈ ನಿರ್ಣಯಗಳನ್ನು ಪಂಡಿತ್ ಜವಾಹರ್‌ಲಾಲ್ ನೆಹರು ಇಂಗ್ಲಿಷಿನಲ್ಲಿ ಮಂಡಿಸಿದರೆ, ಅದನ್ನು ಕನ್ನಡಕ್ಕೆ ಮದ್ವೇಕರ್ ಮತ್ತು ಹಿಂದಿಗೆ ಪಂಡಿತ್ ಸುಂದರ್‌ಲಾಲ್ ಅನುವಾದಿಸಿದ್ದರು.



ಗಾಂಧಿ ಪರಿವಾರ



ನಿರ್ಣಯ-X
ವೇತನ ಸಹಿತ ರಾಷ್ಟ್ರೀಯ ಸೇವೆ

ಸೇವೆಗೆ ವೇತನ ಸ್ವೀಕರಿಸಲು ಹಿಂಜರಿಯುತ್ತಿರುವ ಕಾರಣದಿಂದ ಅರ್ಹರಾದ ಅನೇಕ ವ್ಯಕ್ತಿಗಳು ರಾಷ್ಟ್ರೀಯ ಸೇವೆಗೆ ಲಭ್ಯವಾಗುತ್ತಿಲ್ಲ ಎಂಬುದನ್ನು ಸ್ಪಷ್ಟವಾಗಿ ಗಮನಿಸಲಾಗಿದೆ. ರಾಷ್ಟ್ರೀಯ ಸೇವೆಗೆ ವೇತನ ಸ್ವೀಕರಿಸುವುದರಲ್ಲಿ ವ್ಯಕ್ತಿಯ ಘನತೆಗೆ ಯಾವುದೇ ಕುಂದು ಇಲ್ಲ ಎಂಬ ಅಭಿಪ್ರಾಯವನ್ನು ಕಾಂಗ್ರೆಸ್ ಸ್ಪಷ್ಟಪಡಿಸುತ್ತಿದೆ. ಅಷ್ಟೇ ಅಲ್ಲದೆ, ದೇಶಭಕ್ತ ಯುವಕ-ಯುವತಿಯರು ನಿಷ್ಠೆಯಿಂದ ಸಲ್ಲಿಸಿದ ಸೇವೆಗೆ ಜೀವನಾಧಾರ ವೇತನವನ್ನು ಸ್ವೀಕರಿಸುವುದು ಗೌರವವೆಂದೇ ಪರಿಗಣಿಸಬೇಕೆಂದು ಕಾಂಗ್ರೆಸ್ ಆಶಿಸುತ್ತದೆ ಮತ್ತು ವೇತನದ ಅಗತ್ಯವಿರುವವರು ಅಥವಾ ಸೇವೆ ಸಲ್ಲಿಸಲು ಇಚ್ಛಿಸುವವರು ಇತರ ಯಾವುದೇ ಸೇವೆಗಿಂತ ರಾಷ್ಟ್ರೀಯ ಸೇವೆಯನ್ನು ಆದ್ಯತೆಯಾಗಿ ಆಯ್ಕೆ ಮಾಡಿಕೊಳ್ಳುವಂತೆ ಕಾಂಗ್ರೆಸ್ ಮನವಿ ಮಾಡುತ್ತದೆ.

ನಿರ್ಣಯ- XI
ಸಂವಿಧಾನದಲ್ಲಿ ಬದಲಾವಣೆ

ಕಲಂ **XI** ರಲ್ಲಿ ರೂ. 10 ಅನ್ನು ರೂ. 1 ಎಂದು ಬದಲಾಯಿಸುವುದು.

ಕಲಂ **XXIII** ರಲ್ಲಿ, "ಕಾಂಗ್ರೆಸ್" ಎಂಬ ಪದದೊಂದಿಗೆ ಕೊನೆಗೊಳ್ಳುವ ಮೊದಲ ವಾಕ್ಯದ ನಂತರ ಈ ಕೆಳಗಿನದನ್ನು ಸೇರಿಸುವುದು:

ಖಜಾಂಚಿಗಳು ಕಾಂಗ್ರೆಸ್ನ ನಿಧಿಗಳ ಉಸ್ತುವಾರಿಯನ್ನು ವಹಿಸಿಕೊಳ್ಳತಕ್ಕದ್ದು ಮತ್ತು ಅವುಗಳ ಸರಿಯಾದ ಲೆಕ್ಕಪತ್ರಗಳನ್ನು ಇಡತಕ್ಕದ್ದು. ಪ್ರಧಾನ ಕಾರ್ಯದರ್ಶಿಗಳು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಚೇರಿಯ ಉಸ್ತುವಾರಿಯನ್ನು ವಹಿಸಿಕೊಳ್ಳತಕ್ಕದ್ದು ಮತ್ತು ಸ್ವಾಗತ ಸಮಿತಿಯ ಸಹಯೋಗದೊಂದಿಗೆ ಹಿಂದಿನ ಕಾಂಗ್ರೆಸ್ ಅಧಿವೇಶನ ಮತ್ತು ವರ್ಷದ ಅವಧಿಯಲ್ಲಿ ನಡೆದ ಯಾವುದೇ ವಿಶೇಷ ಅಧಿವೇಶನದ ವರದಿಯನ್ನು ಪ್ರಕಟಿಸುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು. ಈ ವರದಿಯನ್ನು ಸಾಧ್ಯವಾದಷ್ಟು ಬೇಗ ಮತ್ತು ಅಧಿವೇಶನದ ನಂತರ ನಾಲ್ಕು ತಿಂಗಳೊಳಗಾಗಿ ಪ್ರಕಟಿಸತಕ್ಕದ್ದು ಮತ್ತು ಮಾರಾಟಕ್ಕೆ ಒದಗಿಸತಕ್ಕದ್ದು.


ಕಲಂ **XX** ರ ಕೊನೆಯಲ್ಲಿ "ಮತ್ತು ಮುಂದಿನ ಕಾಂಗ್ರೆಸ್ ವರದಿಯೊಂದಿಗೆ ಪ್ರಕಟಿಸತಕ್ಕದ್ದು" ಎಂಬುದನ್ನು ಸೇರಿಸುವುದು.

ನಿರ್ಣಯ–XII
ಮದ್ಯ ಮತ್ತು ಅಫೀಮು ವ್ಯಾಪಾರ

1921ರಲ್ಲಿ ಆರಂಭಿಸಿದ ಮದ್ಯ ಮತ್ತು ಮಾದಕ ದ್ರವ್ಯಗಳ ಬಳಕೆಯ ವಿರುದ್ಧದ ಅಭಿಯಾನಕ್ಕೆ ಹಿನ್ನಡೆ ಉಂಟಾಗಿದ್ದರೂ, ದೇಶದ ಹಲವು ಭಾಗಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಅದನ್ನು ಹುರುಪಿನಿಂದ ಮತ್ತು ಬದ್ಧತೆಯಿಂದ ಮುಂದುವರೆಸಿರುವುದನ್ನು ಕಾಂಗ್ರೆಸ್ ತೃಪ್ತಿಯಿಂದ ಗಮನಿಸುತ್ತದೆ. ಮದ್ಯ ಅಥವಾ ಅಫೀಮಿನ ಚಟಕ್ಕೆ ದಾಸರಾದವರನ್ನು ಈ ಶಾಪದಿಂದ ಮುಕ್ತರಾಗಿಸಲು ಕಾರ್ಯಕರ್ತರು ಮಾಡುತ್ತಿರುವ ಶಾಂತಿಯುತ ಪ್ರಯತ್ನಗಳಿಗೆ ಹಿಂದಿಗಿಂತ ಹೆಚ್ಚಿನ ಬಲ ಮತ್ತು ಪ್ರೋತ್ಸಾಹ ದೊರೆಯುತ್ತದೆ ಎಂದು ಕಾಂಗ್ರೆಸ್ ಆಶಿಸುತ್ತದೆ.

ಜನರ ಮದ್ಯ ಮತ್ತು ಮಾದಕ ದ್ರವ್ಯಗಳ ಚಟವನ್ನು ಆದಾಯದ ಮೂಲವಾಗಿ ಬಳಸಿಕೊಳ್ಳುವ ಭಾರತ ಸರ್ಕಾರದ ನೀತಿಯು ಭಾರತದ ಜನರ ನೈತಿಕ ಬಲವರ್ಧನೆಗೆ ವಿರುದ್ಧವಾದದು ಎಂಬುದು ಕಾಂಗ್ರೆಸ್ನ ಅಭಿಪ್ರಾಯವಾಗಿದೆ ಮತ್ತು ಇದರ ನಿಷೇಧವನ್ನು ಸ್ವಾಗತಿಸುತ್ತದೆ.

ಭಾರತ ಸರ್ಕಾರದ ಅಫೀಮು ವ್ಯಾಪಾರದ ನಿಯಂತ್ರಣವು ಭಾರತದ ನೈತಿಕ ಕಲ್ಯಾಣಕ್ಕೆ ಮಾತ್ರವಲ್ಲದೆ ಇಡೀ ಜಗತ್ತಿನ ಕಲ್ಯಾಣಕ್ಕೂ ಹಾನಿಕರವಾಗಿದೆ ಎಂಬುದು ಕಾಂಗ್ರೆಸ್ನ ಇನ್ನೊಂದು ಅಭಿಪ್ರಾಯವಾಗಿದೆ. ಭಾರತದಲ್ಲಿ ವೈದ್ಯಕೀಯ ಮತ್ತು ಇತರ ವೈಜ್ಞಾನಿಕ ಅಗತ್ಯಗಳಿಗೆ ಹೋಲಿಸಿದರೆ ಅತಿಯಾಗಿ ಅಫೀಮು ಬೆಳೆಯಲಾಗುತ್ತಿದ್ದು, ಇದನ್ನು ಅಗತ್ಯಕ್ಕೆ ತಕ್ಕಷ್ಟು ಸೀಮಿತಗೊಳಿಸಬೇಕೆಂದು ಆಗ್ರಹಿಸುತ್ತದೆ.



ಮಹಾತ್ಮ ಗಾಂಧೀಜಿರವರ ಪಾರ್ಥಿವ ಶರೀರವನ್ನು ಕಾಣಲು ಸೇರಿದ ಜನಸಮೂಹ, ಬಿರ್ಲಾ ಹೌಸ್, ನವದೆಹಲಿ, ಜನವರಿ 1948

ನಿರ್ಣಯ–XIII
ಪದಾಧಿಕಾರಿಗಳ ಆಯ್ಕೆ

ಅಧಿವೇಶನದ ಅಧ್ಯಕ್ಷರು ಪದಾಧಿಕಾರಿಗಳ ಆಯ್ಕೆಗೆ ಸಂಬಂಧಿಸಿದ ಈ ಕೆಳಗಿನ ನಿರ್ಣಯವನ್ನು ಮಂಡಿಸಿದರು;

ಅವರು ಹಿಂದಿಯಲ್ಲಿ ಭಾಷಣ ಮಾಡಿದರು:

ಆಯ್ಕೆಯಾದ ಪದಾಧಿಕಾರಿಗಳ ಕುರಿತ ನಿರ್ಣಯವನ್ನು ಓದಿ ಮತಕ್ಕೆ ಹಾಕಲಾಯಿತು. ಇದನ್ನು ಸಭೆಯು ಅಂಗೀಕರಿಸಿತು.

ಈ ನಿರ್ಣಯದ ಪ್ರಕಾರ ಈ ಕೆಳಗಿನ ಪದಾಧಿಕಾರಿಗಳು ಆಯ್ಕೆ ಯಾಗಿದ್ದರು;

ಪ್ರಧಾನ ಕಾರ್ಯದರ್ಶಿಗಳು : ಪಂಡಿತ ಜವಾಹರಲಾಲ್ ನೆಹರು, ಶೋಯೇಬ್ ಖುರೇಶಿ ಮತ್ತು ಬರ್ಜೋರ್ಜಿ ಫ್ರಾಮ್ಜಿ ಬರೂಚಾ.

ಖಜಾಂಚಿಗಳು : ಸೇಠ್ ರೇವಾಶಂಕರ್ ಜಗಜೀವನ್ ಝುವೇರಿ ಮತ್ತು ಸೇಠ್ ಜಮನ್ ಲಾಲ್ ಬಜಾಜ್.

ನಿರ್ಣಯ– XIV
ಮುಂದಿನ ಅಧಿವೇಶನ

ಮುಂದಿನ ಕಾಂಗ್ರೆಸ್ ಅಧಿವೇಶನವು ಎಲ್ಲಿ ನಡೆಯಬೇಕೆಂಬುದನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ತೀರ್ಮಾನಿಸಲಿದೆ ಎಂದು ನಿರ್ಣಯಿಸಲಾಯಿತು.

ನಿರ್ಣಯ–XV
ಲೆಕ್ಕ ಪರಿಶೋಧಕರು

ಲೆಕ್ಕ ಪರಿಶೋಧಕರ ನೇಮಕವನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯಿಂದ ಮಾಡಲು ನಿರ್ಣಯಿಸಲಾಯಿತು.



ಮಹಾತ್ಮ ಗಾಂಧೀಜಿರವರು ಸರೋಜಿನಿ ನಾಯ್ಡು ಅವರೊಂದಿಗೆ
ಫ್ರಾನ್ಸ್‌ನ ಬೊಲೊಗ್ನೆಯಲ್ಲಿ, ಸೆಪ್ಟೆಂಬರ್ 1931



ಬ್ರಿಟಿಷ್ ಸಂಸದೀಯ ನಿಯೋಗವು ಜನವರಿ 1946 ರಲ್ಲಿ
ಮಹಾತ್ಮ ಗಾಂಧೀಜಿರನ್ನು ಮದ್ರಾಸ್‌ನಲ್ಲಿ ಭೇಟಿ ಮಾಡಿದ ಕ್ಷಣ



ಅಮೇರಿಕನ್ ಶಿಲ್ಪಿ ಜೋ ಡೇವಿಡ್ಸನ್, ಮಹಾತ್ಮ ಗಾಂಧೀಜಿಯವರ ಪ್ರತಿಮೆಯನ್ನು ತಯಾರಿಸುತ್ತಿರುವುದು, ಲಂಡನ್, ಅಕ್ಟೋಬರ್ 1931



ಮಹಾತ್ಮ ಗಾಂಧೀಜಿ ಮತ್ತು ಡಾ. ರಾಜೇಂದ್ರ ಪ್ರಸಾದ್ (ಎಡ) 1939 ರಲ್ಲಿ ವೈಸ್‌ರಾಯ್ ಲಿನ್ ಲಿಥ್‌ಗೋ ಅವರನ್ನು ಭೇಟಿಯಾಗಲು ಹೋಗುವ ಕ್ಷಣ



ದೆಹಲಿಯ 21 ದಿನಗಳ ಉಪವಾಸದ ಸಂದರ್ಭದಲ್ಲಿ ಆರು ವರ್ಷದ ಇಂದಿರಾ ಗಾಂಧಿಯೊಂದಿಗೆ ಮಹಾತ್ಮ ಗಾಂಧೀಜಿ



ಮಹಾತ್ಮ ಗಾಂಧೀಜಿಯವರ ಜನ್ಮಸ್ಥಳ, ಪೋರಬಂದರ್

ಬೆಳಗಾವಿಯಲ್ಲಿ ಐತಿಹಾಸಿಕ ಕಾಂಗ್ರೆಸ್ ಅಧಿವೇಶನದ ಸಮಾರೋಪ ಭಾಷಣ

ಬೆಳಗಾವಿಯಲ್ಲಿ ಐತಿಹಾಸಿಕ ಕಾಂಗ್ರೆಸ್ ಅಧಿವೇಶನದ ಸಮಾರೋಪ ಭಾಷಣ

ಸೋದರರೇ,

ನಿಮಗೆ ನಾನು ಎಷ್ಟು ಕೃತಜ್ಞನಾಗಿದ್ದರೂ ಸಾಲದು. ನೀವು ನನಗೆ ತೋರಿಸಿದ್ದಕ್ಕಿಂತ ಹೆಚ್ಚು ಪ್ರೇಮವನ್ನು ಯಾವ ಅಧ್ಯಕ್ಷನೂ ನಿರೀಕ್ಷಿಸಲಾರ. ನೀವೇನು ಮಾಡಬೇಕು ಎಂದು ನಾನು ಬಯಸಿದೆನೋ ಅದನ್ನೆಲ್ಲಾ ನೀವು ಮಾಡಿದ್ದೀರಿ. ಮೌನವಾಗಿರಬೇಕು ಎಂದಾಗ ಮೌನವಾಗಿದ್ದಿರಿ. ನಾನು ಮಾಡಿದ ಭಾಷಣವನ್ನೆಲ್ಲ ಕೇಳಿದಿರಿ. ಬರೆದುಕೊಂಡು ಬಂದಿದ್ದನ್ನು ಓದಬೇಕು ಎಂದಿರಿ. ನಾನು ಕ್ಷಮಿಸಿ, ಓದುವುದಿಲ್ಲ ಎಂದಾಗ ನೀವು ಅದಕ್ಕೆ ಒತ್ತಾಯ ಮಾಡಲಿಲ್ಲ. ಇಲ್ಲಿ ಹೇಗೆ ಸದ್ದುಗದ್ದಲವಿಲ್ಲದೆ ನಿಮ್ಮ ಅಭಿಪ್ರಾಯವನ್ನು ಪ್ರಕಟಿಸಿದಿರೋ ವಿಷಯ ನಿಯಾಮಕ ಸಮಿತಿಯಲ್ಲೂ ಹಾಗೇ ಮಾಡಿದಿರಿ. ನಿಮ್ಮ ನಡುವೆ ಚರಕದ ಬಾಂಬು ಬಿದ್ದಾಗ ಗದ್ದಲವಾಗಬಹುದಾಗಿತ್ತು. ಆದರೆ ಏನೂ ಆಗಲಿಲ್ಲ.

ವಿಷಯ ನಿಯಾಮಕ ಸಮಿತಿಯಲ್ಲೂ ನೀವು ಸಭ್ಯತೆ ಶೋಭಿಸುವಂತೆ ನಡೆದುಕೊಂಡಿರಿ. ನನ್ನ ಸೋದರರು ತೋರಿಸಿದ ಈ ದಯೆ ಯಾವುದೋ ನನ್ನ ಪೂರ್ವ ಜನ್ಮದ ಫಲ ಎಂದು ತಿಳಿದಿದ್ದೇನೆ. ನನ್ನ ಬಗ್ಗೆ ತೋರಿಸಿದ ಈ ಕರುಣೆಯನ್ನು ಭರತ ಭೂಮಿಯ ಬಗ್ಗೆಯೂ ತೋರಿಸಬೇಕು ಎನ್ನುತ್ತೇನೆ. ನಾನು ಬದುಕಿರುವುದು ಭಾರತಕ್ಕಾಗಿಯೇ. ದೇವರ ಇಚ್ಛೆ ಇಲ್ಲದೆ ಒಂದು ಹುಲ್ಲುಕಡ್ಡಿಯೂ ಅಲ್ಲಾಡುವುದಿಲ್ಲ. ಅದರೆ ಮಗು ತಂದೆಯನ್ನು ತನಗೆ ಬೇಕಾದ್ದು ಕೇಳುವಂತೆ, ಪ್ರತಿಯೊಬ್ಬರಿಗೂ ದೇವರನ್ನು ಕೇಳಲು ಹಕ್ಕಿದೆ. ನಾನು ಕೇಳಿದ್ದನ್ನು ಅವನು ಕೊಟ್ಟೇ ಕೊಡುತ್ತಾನೆ ಎಂಬುದನ್ನು ನಾನು ಮನಗಂಡಿದ್ದೇನೆ. ದೇವರ ಇಷ್ಟಕ್ಕೆ ವಿರುದ್ಧವಾಗಿ ಏನೂ ನಡೆಯಲಾರದು.

ಆದ್ದರಿಂದ, ಸೋದರರೇ, ಭಾರತದ ಸೇವೆಗೆ ಟೊಂಕಕಟ್ಟಿ, ನೀವು ಮಾಡಿರುವ ಶಪಥವನ್ನು ಪಾಲಿಸಿರೆಂದು ನಿಮ್ಮನ್ನು ನಾನು ಕೇಳಿಕೊಳ್ಳುತ್ತೇನೆ. ನಾನು ಅಧ್ಯಕ್ಷತೆ ವಹಿಸಿದೆ, ನೀವೆಲ್ಲರೂ ಪ್ರೇಮವನ್ನು ಸುರಿದಿರಿ. ಪ್ರತಿಯೊಬ್ಬರೂ ನನ್ನನ್ನು ಹೊಗಳಬೇಕು ಎಂದು ಬಯಸುವುದು ಸ್ವಾಭಾವಿಕ. ಆದರೆ ಅದರಿಂದ ಏನೂ ಸಾಧನೆ ಆಗುವದಿಲ್ಲ. ಸಾಧನೆ ಆಗಬೇಕು ಎಂದರೆ ನೀವೆಲ್ಲರೂ ಮಾತುಕೊಟ್ಟಂತೆ ನಡೆಯಬೇಕು. ಇವೆಲ್ಲ ಕಾರ್ಯಗಳೂ ನಿಮ್ಮ ಅಳವಿಗೆ ಮೀರಿದ್ದೆಂದು ನಾನು ನಂಬಲಾರೆ. ಮೂರನೆಯದು, ನಾಲ್ಕನೆಯದು ಅಥವಾ ಐದನೆಯದು ಯಾವ ಕಾರ್ಯವೂ ನಿಮಗೆ ಅಸಾಧ್ಯವಲ್ಲ.

ಲಕ್ಷ್ಮಣರಾವ್ ಭೋಪಟಕರ್ ಅವರ ಭಾಷಣ ಕೇಳಿ ನನಗೆ ಸಂತೋಷವೂ ಆಯಿತು, ಆಶ್ಚರ್ಯವೂ ಆಯಿತು. ಹಿಂದೂ ಧರ್ಮ ನಾಶವಾಗಬೇಕು ಎಂದರೆ ಮನುಷ್ಯರನ್ನು ಅಸ್ಪೃಶ್ಯರನ್ನಾಗಿ ನಡೆಸಿಕೊಳ್ಳಿರಿ ಎಂದರು. ನನಗೆ



ಮಹಾತ್ಮ ಗಾಂಧೀಜಿಯವರ ತಂದೆ ಕರಮಚಂದ್ರ ಗಾಂಧೀಜಿ



ಪುತಲೀಬಾಯಿ, ಮಹಾತ್ಮ ಗಾಂಧೀಜಿಯವರ ತಾಯಿ

ಬಹಳ ಸಂತೋಷವಾಯಿತು. ಹಿಂದೂ ಧರ್ಮದಲ್ಲಿ ಈಗ ರೂಢಿಯಲ್ಲಿರುವ ಅಸ್ಪೃಶ್ಯತೆಗೆ ಯಾವ ಆಧಾರವೂ ಇಲ್ಲ ಎಂದು ಮೂವರು ಶಾಸ್ತ್ರಿಗಳು ಈಗ ನಿಮಗೆ ಹೇಳಿದ್ದಾರೆ. ಹಿಂದೂಗಳು ಮುಸ್ಲಿಮರು ಪರಸ್ಪರ ಶತ್ರುಗಳಾಗಬಾರದು, ಭ್ರಾತೃಗಳಾಗಬೇಕು ಎಂಬಂತೆಯೇ ಇದು. ಶೌಕತ್ ಆಲಿ ಹೇಳಿದ್ದನ್ನು ಕೇಳಲಿಲ್ಲವೇ? ಲಜಪತ್ ರಾಯರು ಏನು ಹೇಳಿದ್ದರು? ಜಾಫರ್ ಆಲಿ ಖಾನರು ಒಂದು ಆಕ್ಷೇಪ ಎತ್ತಿದರು. ಆಕ್ಷೇಪಿಸಬೇಕಾದ್ದು ಅದರಲ್ಲಿ ಏನೂ ಇಲ್ಲ. ಇವರೇನು ಭಾರತಕ್ಕೆ ಶತ್ರು ಅಲ್ಲ. ಯಾರನ್ನೂ ನೀವು ಶತ್ರು ಎಂದು ಭಾವಿಸಬಾರದು ವೈರಿಯನ್ನೂ ಕೂಡ ಸೋದರ ಆಗಿ ಮಾಡಬೇಕು ಎನ್ನುವ ಪ್ರೇರಣೆ ನಿಮ್ಮ ಹೃದಯದಲ್ಲಿರಬೇಕು.

ಲಾಲಾಜಿ ಒಂದು ತತ್ವವನ್ನು ಮಂಡಿಸಿದ್ದಾರೆ. ಇದು ಇಡೀ ಮಾನವ ಜಾತಿಗೆ ಸೇರಿದ ಪ್ರಶ್ನೆಯೇ ಹೊರತು ಒಂದು ಧರ್ಮಕ್ಕಲ್ಲ. ಹಿಂದೂ ಒಬ್ಬ ಹುಚ್ಚನಾದರೆ, ಮುಸಲ್ಮಾನರು ಅವನನ್ನು ವಿರೋಧಿಸಬೇಡವೇ ಎಂದು ಕೇಳಿದರು. ಮುಸಲ್ಮಾನರು ಕೃಷ್ಣನನ್ನೂ, ರಾಮನನ್ನೂ. ಬೈದರೆ, ಹಿಂದೂಗಳು ಪೈಗಂಬರರನ್ನು ಬೈಯಬೇಡವೇ ಎಂದು. ಈ ಮಾತನ್ನು ಕ್ಷಮಿಸುವದರ ಮೂಲಕ ತೀರ್ಮಾನಿಸಲಾಗದಿದ್ದರೆ ನ್ಯಾಯಾಲಯಕ್ಕೆ ಹೋಗಿ ಅಥವಾ ಪಂಚಾಯತಿಗೆ ಹೋಗಿ ಎನ್ನುತ್ತೇನೆ. ನಾನಂತೂ ಅಸಹಕಾರಿ. ಯಾರಾದರೂ ಒಬ್ಬ ಮುಸಲ್ಮಾನ ಭಗವಾನ್ ಕೃಷ್ಣನನ್ನು ಬೈದರೆ, ಇಲ್ಲಿ ಹೊಡೆದಾಡಬೇಡ, ನ್ಯಾಯಾಲಯಕ್ಕೆ ಹೋಗು ಎನ್ನುತ್ತೇನೆ. ಇದರಲ್ಲಿ ಏನಿದೆ ನಾವು ಹೊಡೆದಾಡಬೇಕಾದ್ದು? ಇದನ್ನು ಒಪ್ಪಿಕೊಳ್ಳಲು ಬಹಳ ಹೊತ್ತು ಬೇಕಾಗಿಲ್ಲ. ಸ್ವರಾಜ್ಯಕ್ಕಾಗಿ ನಮ್ಮಲ್ಲಿ ಒಂದು ಕಾವು ಬೇಕು. ನಮ್ಮ ಹೃದಯಗಳು ಅದಕ್ಕಾಗಿ ಪರಿತಪಿಸಬೇಕು. ಭೋಪಟಕರ್ ಅವರು ಮಾತನಾಡುವಾಗ, ಲೋಕಮಾನ್ಯರನ್ನು ನಾನು ನೆನೆದೆ. ನಮ್ಮ ಸ್ವರಾಜ್ಯದ ಶಿಲ್ಪಿ ಅವರು. ಅವರ ಹೆಂಡತಿ ಸಾಯುತ್ತಿರುವಾಗ ಅವರು ಸ್ವರಾಜ್ಯದ ಕೆಲಸದಲ್ಲಿ ತೊಡಗಿದ್ದರಂತೆ. ಇದು ಅವರ ಬಗ್ಗೆ ನಾನು ಕೇಳಿರುವ



ಒಂದು ವಿಶೇಷ ಸಂಗತಿ. ಇಂಥ ಜ್ವಾಲಾಮುಖಿಗಳು ನಮ್ಮ ಹೃದಯದಲ್ಲಿ ಹುಟ್ಟುತ್ತಲಿದ್ದರೆ ನಾವು ಮೂರನೆಯದನ್ನೂ ನಾಲ್ಕನೆಯದನ್ನೂ ಎಲ್ಲವನ್ನೂ ಮಾಡಬಹುದು.

ಕಾಂಗ್ರೆಸ್ಸಿಗೆ ಬರುವಾಗ ನೀವು ಖಾದಿತೊಟ್ಟು ಬಂದರೆ ಅದೇನೂ ದೊಡ್ಡದಲ್ಲ. ವಿದೇಶಿ ಬಟ್ಟೆ ಬಿಡುವುದೂ ದೊಡ್ಡದಲ್ಲ. ಇವತ್ತು ನಾನು ವಿದೇಶಿ ವಸ್ತ್ರ ದಹನವನ್ನು ಹೇಳುತ್ತಿಲ್ಲ. 1921ರಲ್ಲಿ ವಿದೇಶಿ ವಸ್ತ್ರ ದಹನ ಮಾಡಿಸಿದ ಮನುಷ್ಯ ಇವತ್ತು ನಾನಲ್ಲ. ನಾವು ಶಾಂತಿ ಮಂತ್ರವನ್ನು ಬಿಟ್ಟಿದ್ದೇವೆ. ಈಗಲೂ ಸಂಪೂರ್ಣ ಶಾಂತಿ ಸ್ಥಾಪನೆಯಾದರೆ, 1921ರ ಕಾರ್ಯವನ್ನು ಮತ್ತೆ ಕೈಕೊಂಡೇನು. ವಿದೇಶೀ ವಸ್ತ್ರ ದಹನದ ನೆಪದಲ್ಲಿ ಜನಗಳ ಮೇಲೆ ಕಲ್ಲುಬೀರಲಿಕ್ಕೆ ಕಲ್ಲುಗುಡ್ಡೆ ಹಾಕಿದೆವು. ಸತ್ಯದ ಆಹ್ವಾನ, ಅಸತ್ಯಾಚರಣೆ ಇವೆರಡನ್ನೂ ನಾವು ಏಕಕಾಲಕ್ಕೆ ಮಾಡಲಾರೆವು ಎಂಬುದನ್ನು ನಾನು ಬಲ್ಲೆ. ಸತ್ಯವನ್ನು ಆಹ್ವಾನಿಸಿದರೆ, ಅಸತ್ಯವನ್ನು ಅಚರಿಸಲೇಬಾರದು. ಇಲ್ಲದೇ ಹೋದರೆ ನಮ್ಮ ದೇಹಗಳೇ ಸುಟ್ಟು ಹೋದಾವು. ಖಂಡಿತವಾಗಿಯೂ ನನ್ನ ಎದೆಯಂತೂ ಸುಡುತ್ತದೆ. ಯಾರಾದರೂ ಸುಳ್ಳು ಸುಳ್ಳೇ ದೇವರಾಣೆ ಇಟ್ಟರೆ, ಸುಳ್ಳು ಶಪಥ ಮಾಡಿದರೆ ನನಗೆ ಸೈರಣೆಯಾಗದು.

ನನ್ನನ್ನು ಬೇಕಾದಷ್ಟು ಬೈಯಿರಿ, ಒದೆಯಿರಿ, ಮೆಟ್ಟಿನಿಂದ ಹೊಡೆಯಿರಿ, ಮುಖದ ಮೇಲೆ ಉಗುಳಿರಿ; ನಾನು ಸಿಟ್ಟುಗೊಳ್ಳುವುದಿಲ್ಲ ಎಂದು ನಿಮಗೆ ಮಾತು ಕೊಡುತ್ತೇನೆ, ಒಂದು ಶಪಥಮಾಡಿ ಅದರಂತೆ ನಡೆಯದಿದ್ದರೆ, ಸಿಟ್ಟಿನಿಂದ ನನ್ನ ಮೈಯೆಲ್ಲಾ ಸುಟ್ಟು ಹೋಗುತ್ತದೆ. ಅಪವಿತ್ರಳಾದ ಒಬ್ಬ ಹೆಂಗಸು ನನ್ನ ಮುಂದೆ ತನ್ನ ಪಾವಿತ್ರ್ಯದ ಬಗ್ಗೆ ಜಂಬ ಕೊಚ್ಚಿಕೊಂಡರೆ ಸತ್ತು ಹೋಗಬೇಕು ಎಂದು ನನಗನ್ನಿಸುತ್ತದೆ. ಅಪವಿತ್ರವಾದ ಗಂಡಸು ನನ್ನ ಎದುರಿಗೆ ತನ್ನ ಪಾವಿತ್ರ್ಯದ ಜಂಬ ಕೊಚ್ಚಿಕೊಂಡರೂ ಅಷ್ಟೇ, ನಾನು ಅದನ್ನು ನೋಡ ಬಯಸುವುದಿಲ್ಲ. ಈ ಹೊಣೆಗಾರಿಕೆಯನ್ನು. ಹೊರಿಸುವುದರ ಮೂಲಕ ನೀವು ನನಗೆ ತೋರಿಸಿದ ಪ್ರೇಮ, ಕರುಣೆ, ಹೀಗೇ ಸಾಗಬೇಕು ಎಂದರೆ ಇಲ್ಲದ ಆಡಂಬರವನ್ನು ಮರೆಯತಕ್ಕದ್ದಲ್ಲ ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಈ ಸ್ಥಾನದಲ್ಲಿ ನನ್ನನ್ನು ಇಟ್ಟರೂ ಸರಿ ಬಿಟ್ಟರೂ ಸರಿ. ಸ್ವರಾಜ್ಯ ಪಕ್ಷದವರೂ, ಅಪರಿವರ್ತನವಾದಿಗಳೂ ಒಟ್ಟಿಗೆ ನಡೆದರೆ ಇನ್ನೂ ಉತ್ತಮ. ಡಾ.ಅನಿಬೆಸೆಂಟ್ ಅವರು ಹೇಳಿದ ಹಾಗೆ ಒಂದೇ ಒಂದು ಮರದ ತುಂಡು ಗಟ್ಟಿಯಾಗಿದ್ದರೂಮುರಿದು ಹೋಗುತ್ತದೆ. ಹಲವು ತುಂಡುಗಳನ್ನು ಒಂದು ಹೊರೆಯಾಗಿ ಕಟ್ಟಿದರೆ ಆ ಹೊರೆ ಅಭೇದ್ಯವಾಗುತ್ತದೆ.

ಸ್ವರಾಜ್ಯ ಪಕ್ಷದವರು ಕೆಟ್ಟ ಮನುಷ್ಯರು ಎಂದು ನಾವು ತಿಳಿಯುವುದು ಬೇಡ. ಶುದ್ಧ ಹೃದಯಕ್ಕೆ ಎಲ್ಲ ಹೃದಯಗಳೂ ಶುದ್ಧವೇ. ಆತ್ಮದ ಗುಣ ಏನು? ಆತ್ಮ ಅಮೃತ ಶಿಲೆ ಇದ್ದಂತೆ. ಶಂಕರಾಚಾರ್ಯರು ಹೇಳಿದ್ದಾರೆ; ಕಳಂಕ ಅದರ ಸ್ವಭಾವವಲ್ಲ ಎಂದು. ಕಳಂಕ ಮಾಯೆ. ನಿಮ್ಮ ಹೃದಯ ಶಕ್ತಿವಂತವಾಗಿದ್ದರೆ, ಇತರರ ಕಳಂಕವನ್ನು, ಅವರ ಬಗ್ಗೆ ಕೆಡುಕನ್ನು ಯೋಚಿಸದೆಯೇ ತೊಡೆದು ಹಾಕಬಲ್ಲುದು. ವಿಶ್ವಾಸದ ಪ್ರತಿಫಲವು ದ್ರೋಹವಾದರೆ ನಂಬಿದವನಿಗೇನಾದರೂ ಕೆಡುಕು ಆಗುತ್ತದೆಯೇ? ದ್ರೋಹ ಮಾಡಿದವನಿಗೆ ಕೆಡುಕು. ಜವಾಹರಲಾಲರು ನನಗೆ ಮಗ ಇದ್ದ ಹಾಗೆ ಎಂದು ಹೇಳಿದರೆ ಅವರಿಂದ ಕೆಲಸ ಮಾಡಿಸಿಕೊಳ್ಳುವ ಮಟ್ಟಿಗೆ ಮಾತ್ರ ಹೀಗೆ ನಾನು ಹೇಳಿದ್ದಾದರೆ ಅದು ಮೋಸ. ಜವಾಹರಲಾಲರನ್ನು ಗೌರವಿಸಲು ನಾನು ಯಾರು? ಜಗತ್ತು ಗೌರವಿಸುತ್ತದೆ. ಅವರ ಮೇಲೆ ಹೂಮಳೆಗರೆಯುತ್ತದೆ. ಇವತ್ತು ನಾನು ಅವರಿಗೆ ಮಾತ್ರ, ಅಥವಾ ಇವರಿಗೆ ಮಾತ್ರ ಹೇಳುವುದಿಲ್ಲ. ಇಬ್ಬರಿಗೂ ಹೇಳುತ್ತೇನೆ. ಈ ಒಂದು ವರ್ಷ ಬಹಳ ಕಷ್ಟಪಟ್ಟು ಕೆಲಸ ಮಾಡಬೇಕು. ಅದರಿಂದ ನಮ್ಮ ಶಕ್ತಿ ಬೆಳೆಯಬೇಕು. ಸ್ವರಾಜ್ಯ ನಮ್ಮ ಬೆರಳ ತುದಿಗೆ ಬಂದಿದೆಯೆಂದು ನಮಗೆ ಅನಿಸಬೇಕು.

(ಇಲ್ಲಿಯವರೆಗೆ ಗಾಂಧೀಜಿ ಹಿಂದಿಯಲ್ಲಿ ಮಾತಾಡಿದ್ದರು. ಮುಂದೆ ಇಂಗ್ಲಿಷಿನಲ್ಲಿ ಅವರು ಭಾಷಣ ಮುಂದುವರಿಸಿದ್ದರು)

ಇದುವರೆಗೆ ಹಿಂದಿಯಲ್ಲಿ ನನ್ನ ಮನಸ್ಸಿನ ವಿಷಯಗಳನ್ನು ಹಂಚಿಕೊಂಡೆ. ಅದನ್ನೇ ಮತ್ತೆ ಇಂಗ್ಲಿಷ್ನಲ್ಲಿಯೂ ಹೇಳುವುದು ನನಗೆ ಸಾಧ್ಯವಿಲ್ಲ. ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಯಾವ ಅಧ್ಯಕ್ಷನೂ, ನೀವು, ಪ್ರತಿನಿಧಿಗಳು, ನನಗೆ ತೋರಿಸಿದ್ದಕ್ಕಿಂತ ಹೆಚ್ಚು ಪ್ರೀತಿಯನ್ನು ಹೆಚ್ಚು ಮರ್ಯಾದೆಯನ್ನು , ಹೆಚ್ಚು ಗಮನವನ್ನು ಪಡೆದಿರಲಾರರು. ಈ ಕಾಂಗ್ರೆಸ್ ಅಧಿವೇಶನದಲ್ಲಿ ಮತ್ತು ವಿಷಯ ನಿಯಮಾಕ ಸಮಿತಿಯಲ್ಲಿ ಅಧ್ಯಕ್ಷತೆ ವಹಿಸಿದ್ದು ನನಗೆ ಅತ್ಯಂತ ಖುಷಿ ನೀಡಿದ ವಿಷಯವಾಗಿತ್ತು ಎಂದು ನಿಮಗೆ ತಿಳಿಸಲು ಇಚ್ಛಿಸುತ್ತೇನೆ.

ನಾನು ಹೇಳಿದ ಪ್ರತಿಯೊಂದು ಮಾತಿಗೂ ನೀವು ಸಮ್ಮತಿ ನೀಡಿದ್ದೀರಿ. ನಾನು ನಿಮ್ಮ ಮೇಲೆ ಬಹಳ ಭಾರ ಹಾಕಿದ್ದೇನೆ ಎಂಬುದನ್ನು ಬಲ್ಲೆ. ನಿಮ್ಮನ್ನು ನಡೆಯಲೂ ಬಿಟ್ಟಿಲ್ಲ. ಓಡಿಸಿದ್ದೇನೆ, ಏನು ಮಾಡಲಿ? ನಿಮಗೂ ಆತುರ, ನನಗೂ ಆತುರ, ಸ್ವರಾಜ್ಯದ ಗುರಿಯತ್ತ ನಾವು ಮುನ್ನುಗ್ಗಬೇಕು. ಆಮೆ ನಡಿಗೆಯಂತೆ ಹೋದರೆ ಆದೀತೆ? ತುಂಬಾ ವೇಗವಾಗಿ ಸಾಗಬೇಕಾಗಿದೆ ನಾವು. ನಾವು ಕಷ್ಟಪಟ್ಟು ದುಡಿದು ಮುಂದಕ್ಕೆ ಹೋಗಬೇಕು

ಎಂದರೆ ನಿಮ್ಮದಾಗಲೀ ನನ್ನದಾಗಲೀ ಒಂದು ನಿಮಿಷವೂ ಕಾಲಹರಣ ಮಾಡಲಾಗದು. ಆದ್ದರಿಂದ ನನಗೆ ಸಾಮರ್ಥ್ಯವಿದ್ದಷ್ಟೂ ಗತಿ ಕೊಟ್ಟಿದ್ದೇನೆ. ನೀವು ಇಷ್ಟು ಗೌರವದಿಂದ ನನ್ನ ಕರೆಗೆ ಓಗೊಟ್ಟಿರುವುದು ನನಗೆ ಹೆಚ್ಚಿನ ಅಚ್ಚರಿ, ತುಂಬಾ ತೃಪ್ತಿ. ಇದನ್ನು ಕೂಡ ಏನೋ ಶಿಷ್ಟಾಚಾರಕ್ಕೆ ನೀವು ಮಾಡಿಲ್ಲ. ಅದ್ಭುತ ಔದಾರ್ಯ ತೋರಿಸಿದ್ದೀರಿ. ಇದಕ್ಕಿಂತ ಹೆಚ್ಚು ಯಾರೂ ಅಪೇಕ್ಷಿಸಿರಲಾರರು, ಕೇಳಿರಲಾರರು, ಪಡೆದಿರಲಾರರು. ನಾನು ಕೇಳಬಹುದಾದುದೆಲ್ಲವನ್ನೂ ನೀವು ಕೊಟ್ಟಿದ್ದೀರಿ.

ಆದರೆ ನಾನು ಈಗ ಕೇಳುವುದು ಇದಕ್ಕಿಂತ ಹೆಚ್ಚಿನದು. ಉತ್ತಮ, ಉನ್ನತವಾದದ್ದು. ಅದೆಂದರೆ, ನೀವು ನನಗೆ ತೋರಿದ ಎಲ್ಲ ಪ್ರೀತಿಯನ್ನೂ, ಔದಾರ್ಯವನ್ನೂ ನನಗೂ ನಿಮಗೂ ಅತ್ಯಂತ ಪ್ರಿಯಕರವಾದ ಮತ್ತು ನನ್ನನ್ನು ನಿಮ್ಮನ್ನೂ ಏಕತ್ರ ಬಂಧಿಸುವ ಆ ಸ್ವರಾಜ್ಯಕ್ಕೆ ತೋರಿಸಿರಿ ಎಂದು ಕೇಳಿಕೊಳ್ಳುತ್ತೇನೆ. ಸ್ವರಾಜ್ಯ ಬೇಕಾಗಿದ್ದರೆ ನಾವು ಸ್ವರಾಜ್ಯದ ನಿಯಮಗಳನ್ನು ಅರಿತುಕೊಳ್ಳಬೇಕು. ತೀರ್ಮಾನದಲ್ಲಿ ಇರುವ ಎಲ್ಲ ನಿಯಮಗಳನ್ನೂ ನೀವು ಒಪ್ಪಿದ್ದೀರಿ. ಆ ನಿಯಮಗಳೇನು ಎಂಬುದು ಎಲ್ಲರಿಗೂ ಗೊತ್ತಿದೆ. ಈ ನಿಯಮಗಳನ್ನು ಇಲ್ಲಿಯೇ ಬಿಡಬೇಡಿರಿ. ನಿಮ್ಮ ಜೊತೆಯಲ್ಲಿ ಅವನ್ನುತೆಗೆದುಕೊಂಡು ಹೋಗಿ. ಅವನ್ನು ತತ್ವಶಃ, ಅಕ್ಷರಶಃ ಪಾಲಿಸಿರಿ. ಇತರರೂ ಕೂಡ ಪಾಲಿಸುವಂತೆ ಒತ್ತಾಯ ಪಡಿಸಿರಿ. ಬಲಾತ್ಕಾರದಿಂದಲ್ಲ,



ಅಬ್ದುಲ್ ಗಫಾರ್ ಖಾನ್ ಅವರೊಂದಿಗೆ
ಸಾರ್ವಜನಿಕ ಸಭೆಯಲ್ಲಿ ಮಹಾತ್ಮ ಗಾಂಧೀಜಿ, 1946

ಪ್ರೇಮದಿಂದ. ಪ್ರೇಮ ಎಷ್ಟು ಒತ್ತಾಯ ಮಾಡಬಹುದೋ. ಎಷ್ಟು ಪ್ರಭಾವ ಬೀರಬಹುದೋ. ನಿಮ್ಮ ಸುತ್ತು ಮುತ್ತಲಿನವರ ಮೇಲೆ, ನೆರೆಹೊರೆಯವರ ಮೇಲೆ ಅಷ್ಟನ್ನು ಬೀರಿ. ನಿಮ್ಮ ನಿಮ್ಮ ಜಿಲ್ಲೆಯಲ್ಲೆ ಎಲ್ಲಾ ಕಡೆಗೆ ಸಂಚರಿಸಿ, ಖಾದಿಯ ಸಂದೇಶವನ್ನು, ಹಿಂದೂ-ಮುಸ್ಲಿಂ ಏಕತೆಯ ಸಂದೇಶವನ್ನು ಅಸ್ಪಶ್ಯತೆ ತೊಡೆದು ಹಾಕುವ ಸಂದೇಶವನ್ನು ಹರಡಿರಿ. ನಾಡಿನ ಯುವಕರ ಜೊತೆಗೆ ಕೈ ಹಿಡಿದು ಹೊರಡಿರಿ. ಅವರನ್ನು ನಿಜವಾದ ಸ್ವರಾಜ್ಯ ಸೈನಿಕರನ್ನಾಗಿ ಮಾಡಿರಿ.

ಆದರೆ ಸ್ವರಾಜ್ಯವಾದಿಗಳು, ಅಪರಿವರ್ತನವಾದಿಗಳು ಪರಸ್ಪರ ಅಸೂಯೆ ಪಟ್ಟರೆ ಇದನ್ನು ಮಾಡಲಾರಿರಿ. ದ್ವೇಷವನ್ನು ಸಂಪೂರ್ಣವಾಗಿ ನಾಶಮಾಡಿ, ಸಿಟ್ಟು, ಹೊಟ್ಟೆ ಉರಿಗಳನ್ನು ಪೂರ್ಣವಾಗಿ ಕೈಬಿಟ್ಟು ದುಷ್ಟ ಪ್ರಭಾವಗಳನ್ನೆಲ್ಲ ಈಗ ಇಲ್ಲಿಯೇ ಬಿಟ್ಟರೆ ಅದು ಸಾಧ್ಯವಾಗುತ್ತದೆ.

ನಿಮ್ಮ ದ್ವೇಷವನ್ನು ಆಳವಾಗಿ ಹೂತುಬಿಡಿರಿ. ಅಸೂಯೆಯನ್ನು ಭೂಗರ್ಭದಲ್ಲಿ ಹೂತುಬಿಡಿರಿ. ಅವನ್ನೆಲ್ಲ ಸಿಕ್ಕಲ್ಲಿ ಸುಟ್ಟುಬಿಡಿರಿ. ಆದರೆ ನೀವು ತೀರ್ಮಾನಿಸಿರುವ ಈ ಪವಿತ್ರ ನಿರ್ಧಾರವನ್ನು ಜೊತೆಗೆ ತೆಗೆದುಕೊಂಡು ಹೋಗಿರಿ. ಬಂದದ್ದೆಲ್ಲ ಬರಲಿ. ಇವತ್ತು ಸ್ವರಾಜ್ಯವಾದಿಗಳನ್ನೂ ಅಪರಿವರ್ತನವಾದಿಗಳನ್ನೂ ಈ ಗೊತ್ತುವಳಿಗಳ ಸೂತ್ರವು ಬಂಧಿಸಿದ್ದು, ಈ ಬಂಧನ ಎಂದಿಗೂ ಕತ್ತರಿಸದಿರಲಿ. ಇಲ್ಲಿಗೆ ನನ್ನ ಕೆಲಸ ಮುಗಿಯಿತು.

ಮಹಾತ್ಮ ಗಾಂಧೀಜಿಯವರು ವೇದಿಕೆಯಿಂದ ಇಳಿಯಲು ಹೊರಟಾಗ ಏನೋ ನೆನಪಿಸಿಕೊಂಡು, ಸ್ವಾಗತ ಸಮಿತಿಗೆ ಧನ್ಯವಾದ ಹೇಳುವ ಸಲುವಾಗಿ ಮತ್ತೆ ಭಾಷಣ ಮಾಡುವ ಸ್ಥಳಕ್ಕೆ ಬಂದು ಹೀಗೆ ಹೇಳಿದರು:

ಡಾ. ಹರ್ಡೀಕರರು ತರಬೇತಿ ನೀಡಿದ ಈ ಸ್ವಯಂ ಸೇವಕರಿಗೆ ಧನ್ಯವಾದಗಳನ್ನು ಅರ್ಪಿಸದೇ ಇದ್ದರೆ, ಸ್ವಾಗತ ಸಮಿತಿಗೆ ಧನ್ಯವಾದ ಅರ್ಪಿಸದೇ ಇದ್ದರೆ, ನನ್ನನ್ನು ನಾನು ಕ್ಷಮಿಸಿಕೊಳ್ಳಲು ಆಗುತ್ತಿರಲಿಲ್ಲ. ಸ್ವರಾಜ್ಯದ ಹುಚ್ಚಿನಿಂದಾಗಿ ಸ್ವಯಂ ಸೇವಕರನ್ನೂ ಸ್ವಾಗತ ಸಮಿತಿಯನ್ನೂ ಮರೆತೇಬಿಟ್ಟಿದ್ದೆ.

ನಾನು ಧನ್ಯವಾದಗಳನ್ನು ಹೇಳಲಿ ಎಂದು ಅವರು ಸೇವೆಮಾಡಿಲ್ಲ ಎಂಬುದನ್ನು ಬಲ್ಲೆ. ಅವರು ಮಾಡಿದ ಉನ್ನತ ಸೇವೆಯೇ ಅದಕ್ಕೆ ಪ್ರತಿಫಲ ನೀಡಲಿದೆ. ಆದರೆ ಅದು ನನ್ನ ಹೊಣೆ. ನಿಮ್ಮನ್ನೂ ಎಲ್ಲರನ್ನೂ ವಂದಿಸದೇ ಇದ್ದರೆ ನನ್ನದು ಕರ್ತವ್ಯ ಲೋಪವಾಗುತ್ತಿತ್ತು. ಸ್ವಯಂ ಸೇವಕರನ್ನೂ ಸ್ವಾಗತ ಸಮಿತಿಯ ಸದಸ್ಯರನ್ನೂ ದೇವರು ಆಶೀರ್ವದಿಸಲಿ.



ಮಹಾತ್ಮ ಗಾಂಧೀಜಿ (ಎಡ) ತಮ್ಮ ಸಹಪಾಠಿ ಶೇಖ್ ಮೇಹತಾಬ್ ಅವರೊಂದಿಗೆ, ರಾಜಕೋಟ್, 1883



ಗಾಂಧೀಜಿ ಅಧ್ಯಯನ ಮಾಡಿದ ರಾಜ್‌ಕೋಟ್‌ನಲ್ಲಿರುವ ಆಲ್‌ಫ್ರೆಡ್ ಹೈಸ್ಕೂಲ್ (ಕಥಿಯಾವಾರ್ ಹೈಸ್ಕೂಲ್) (ಈಗ ಮಹಾತ್ಮಾ ಗಾಂಧಿ ವಸ್ತುಸಂಗ್ರಹಾಲಯವಾಗಿ ರೂಪಾಂತರಗೊಂಡಿದೆ)




ದಂಡಿ ಯಾತ್ರೆಯ ಉಪ್ಪಿನ ಸತ್ಯಾಗ್ರಹ ಸಂದರ್ಭದಲ್ಲಿ ಅಬ್ಬಾಸ್ ತ್ಯಾಬ್ಜಿ ಅವರೊಂದಿಗೆ ಮಹಾತ್ಮಾ ಗಾಂಧೀಜಿ. ಎಪ್ರಿಲ್ 1930



ಬಲಿಲ್ಲಾ ವಾದ್ಯತಂಡದೊಂದಿಗೆ ಮಹಾತ್ಮಾ ಗಾಂಧೀಜಿ, ರೋಮ್, ಡಿಸೆಂಬರ್ 1931


ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ
ಗಾಂಧೀಜಿ ಕನಸು
ಕರ್ನಾಟಕದಲ್ಲಿ ನನಸು
ಗಾಂಧಿ ಭಾರತ
ಯುವಜನರ ಭಾಗ್ಯವಿಧಾತ...
ಯುವ ನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 ಪದವೀಧರರಿಗೆ
₹1500 ಡಿಪ್ಲೋಮಾ ಪದವೀಧರರಿಗೆ
ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಫಲಾನುಭವಿಗಳ ಸಂಖ್ಯೆ: 1,89,692
ಒಟ್ಟು ವೆಚ್ಚ: ರೂ.216.39 ಕೋಟಿ
ನುಡಿದಂತೆ ನಡೆದಿದ್ದೇವೆ...
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹ ಜ್ಯೋತಿ
ಪ್ರತಿ ಮನೆಗೆ 200
ಅನ್ನಭಾಗ್ಯ
10 kg
ಗೃಹಲಕ್ಷ್ಮಿ
₹2000
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ



Department of Information & Public Relations , Bangalore-560 001
Ph : 080 2202 8001 / 02

Karnataka Varte